
ರಂಜನೆ ಬೋಧನೆ ಪ್ರಚೋದನೆ


# ಲಂಕೇಶ್


ಫೆಬ್ರವರಿ 19, 2014 ಪುಟ 20 ರೂ. 15/-



ಪುಟ್ಟರಂಗಮ್ಮನ ವೈಶಿಷ್ಟ್ಯ







## ಸಿಎಂ ಗಿರಿಗೆ ಆಪರೇಷನ್ ಹಸ್ತ!’

## ಭಿನ್ನಮತದ ರೂವಾರಿ

## ಮೆರಿಕಿಯಲ್ಲಿ ಅರಳಿದ ಕ್ ಪ್ರೇಮ್ ಕಹಾನಿ




### ಮೈಸೂರು
## ವಿಶ್ವನಾಥ್ ಮಾಡಬೇಕಿದೆ ಸರ್ಕಸ್

### ಬಾಗಲಕೋಟೆ
## ಬೀಗಕ್ಕೆ ಕೈ ಕಚ್ಚಾಟ

### ಬಿಜಾಪುರ
## ಕಾಂಗ್ರೆಸ್‌ಗೆ ‘ಬಿಸಿ’ ಊಟ

## ರಾವಳಿ: ಟಿಕೆಟ್ ಸಂಕಟದಲ್ಲಿ ಸಂಘ ಪರಿವಾರ



ಡಾ.ವಾಸು ಎಚ್.ವಿ.

# ಯುವಜನತೆಯ ಓಟು ಯಾರಿಗೆ?



2014ರ ಲೋಕಸಭಾ ಚುನಾವಣೆಗೆ ಸಾಕಷ್ಟು ಮುಂಚಿನಿಂದ ರಾಜಕೀಯ ಪಕ್ಷಗಳು ತಯಾರಿ ನಡೆಸುತ್ತಿವೆ. ಹಾಗಾಗಿಯೇ ಅದರ ಸುತ್ತ ಹಲವು ಬಗೆಯ ಚರ್ಚೆಗಳೂ ಈಗಾಗಲೇ ಚಾಲ್ತಿಯಲ್ಲಿವೆ. ಅದರಲ್ಲಿ ಒಂದು ಚರ್ಚೆ ಮೊದಲ ಸಾರಿ ಮತದಾನದ ಹಕ್ಕನ್ನು ಪಡೆದಿರುವ 'ಹೊಸ ಯುವ ಮತದಾರ'ರದ್ದು. ಇದಕ್ಕೆ ಮಹತ್ವ ಬಂದಿರುವುದಕ್ಕೂ ಒಂದು ಕಾರಣವಿದೆ. ಈ ಸಾರಿ ಮೊದಲ ಬಾರಿಗೆ ಮತದಾನ ಮಾಡಲಿರುವವರ ಸಂಖ್ಯೆ ಬಹಳ ದೊಡ್ಡದಿದೆ. ಒಂದು ಅಂದಾಜಿನ ಪ್ರಕಾರ ಅದು ಸುಮಾರು 10 ಕೋಟಿ. 2009ರ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಿದ್ದ ಒಟ್ಟು ಮತಗಳ ಸಂಖ್ಯೆ 11.9 ಕೋಟಿ. ಆ ಚುನಾವಣೆಯಲ್ಲಿ ಬಿಜೆಪಿಯು 7.8 ಕೋಟಿ ಮತಗಳನ್ನೂ, ಬಹುಜನ ಸಮಾಜ ಪಕ್ಷವು 2.6 ಕೋಟಿ ಮತಗಳನ್ನೂ, ಸಿಪಿಎಂ ಪಕ್ಷ ಸುಮಾರು 2.2 ಕೋಟಿ ಮತಗಳನ್ನೂ ಗಳಿಸಿದ್ದವು.

ಈ ಸಂಖ್ಯೆಯೇ ಹೊಸ ಮತದಾರರಿಗಿರುವ ಮಹತ್ವವನ್ನು ತೋರಿಸುತ್ತದೆ. 18ರಿಂದ 22 ವಯಸ್ಸಿನ ಈ ಯುವಸಮೂಹವೇ ದೇಶದ ಹಣೆಬರಹವನ್ನು ಬರೆಯಲಿದೆಯೆಂದೂ, ಅವರು ಇಂತಹದೊಂದು ಪಕ್ಷಕ್ಕೆ ಮತ ಹಾಕುತ್ತಾರೆಂದೂ ಭಾವಿಸಿ ಸಾರಾಸಗಟು ವಿಶ್ಲೇಷಣೆಗಳು ಸಾಕಷ್ಟು ನಡೆದಿವೆ. ಹೊಸ ಮತದಾರರಾಗಿರುವುದರಿಂದ, ಅವರಿಗೆ ಶತಮಾನದಷ್ಟು ಹಳೆಯ ಪಕ್ಷವು ರುಚಿಸಲಿಕ್ಕಿಲ್ಲವಾದ್ದರಿಂದ ಕಾಂಗ್ರೆಸ್ಸಿಗೆ ಮತ ಹಾಕಲಾರರು ಎಂಬುದು ಅದರಲ್ಲಿ ಒಂದು ವಿಶ್ಲೇಷಣೆ. ಅದಕ್ಕೆ ಪ್ರತಿಯಾಗಿ ರಾಹುಲ್ ಗಾಂಧಿಯ ಕಾರಣಕ್ಕೆ, ಮಿಕ್ಕ ಪಕ್ಷಗಳಿಗಿಲ್ಲದ 'ಯೂತ್ ಅಪೀಲ್' ಆ ಪಕ್ಷಕ್ಕೇ ಇರುವುದೆಂಬುದು ಇನ್ನೊಂದು ವಿಶ್ಲೇಷಣೆ.

ನರೇಂದ್ರ ಮೋದಿಯ ಕುರಿತಾಗಿ ಯುವಜನತೆಗೆ ವಿಶೇಷ ಆಕರ್ಷಣೆ ಇದೆಯೆಂದೂ, ಆತನನ್ನು ಪ್ರಧಾನಿ ಮಾಡುವುದರಲ್ಲಿ ಅದು ಸಹಾಯಕ್ಕೆ ಬರುತ್ತದೆಯೆಂದೂ ಬಿಜೆಪಿಯ ಹಾಗೂ ಮಾಧ್ಯಮದ ಒಂದು ಗುಂಪಿನ ವಾದ. ಇದರ ಜೊತೆಜೊತೆಗೇ ಕಳೆದ ಎರಡು ತಿಂಗಳಿಂದ ಚಾಲ್ತಿಗೆ ಬಂದಿರುವ ಹೊಸದೊಂದು ಅಭಿಪ್ರಾಯ ಆಮ್ ಆದ್ಮಿ ಪಕ್ಷದ ಪರವಾಗಿನದ್ದು. ಆಮ್ ಆದ್ಮಿ ಪಕ್ಷದ ಸದ್ಯದ ಕಾರ್ಯಕರ್ತಗಣ ಬಹುತೇಕ ಯುವಸಮುದಾಯವೇ ಆಗಿರುವುದೂ ವಾಸ್ತವ.

ಆಮ್ ಆದ್ಮಿ ಪಕ್ಷಕ್ಕೆ ಅವರಲ್ಲಿ ಹೆಚ್ಚಿನವರು ಓಟು ಹಾಕುತ್ತಾರೆಂದೋ, ಮೋದಿಯ ಪರವಾದ ಅಲೆ ಯುವಜನರಲ್ಲಿ ಮೂಡಿದೆಯೆಂತಲೋ ಭಾವಿಸಿರುವವರು ಮುಂದಿಡುವ ಚಿತ್ರಣ ಸ್ಮಾರ್ಟ್ ಫೋನ್‌ಗಳನ್ನು ಹಿಡಿದು 'ಫೇಸ್‌ಬುಕ್' ಇತ್ಯಾದಿಗಳಲ್ಲಿ ಸಕ್ರಿಯರಾಗಿರುವ ಯುವಜನತೆಯದ್ದು. ಹೊಸ ಮತದಾರ ಸಮೂಹವಿಡೀ ಈ ರೀತಿಯ ಫೇಸ್‌ಬುಕ್ ಕಮ್ಯುನಿಟಿಯೇ ಆಗಿದೆ ಎಂದು ಭಾವಿಸಲು ಕಾರಣವೇನೆಂದು ಗೊತ್ತಿಲ್ಲ. ಆದರೆ ಅಂತಹದೊಂದು ಭಾವನೆ ಇರುವುದಂತೂ ಸತ್ಯ.

ಇಂತಿಪ್ಪ ಯುವಸಮುದಾಯವು ಒಂದು 'ಸಮುದಾಯವಾಗಿ' ಮತ ಹಾಕುತ್ತದೆಯೇ ಎಂಬುದರ ಕುರಿತು ಈಚೆಗೆ ಒಂದು ಅಧ್ಯಯನವೂ ನಡೆದಿದೆ. ದೆಹಲಿಯ ಅಭಿವೃದ್ಧಿ ಶೀಲ ಸಮಾಜಗಳ ಅಧ್ಯಯನ ಕೇಂದ್ರ (ಸಿಎಸ್‌ಡಿಎಸ್)ವು ಕಳೆದ ಕೆಲವು ವರ್ಷಗಳಿಂದ ಅಂತಹ ಅಧ್ಯಯನವನ್ನು ನಡೆಸಿದೆ. ಮುಖ್ಯವಾಗಿ ಕಳೆದ ಐದು ಚುನಾವಣೆಗಳಿಗೆ (1996, 1998, 1999, 2004 ಮತ್ತು 2009) ಸಂಬಂಧಿಸಿದಂತೆ ಈ ಅಧ್ಯಯನವು ನಡೆದಿದೆ. ಅದರ ಪ್ರಕಾರ, ಭಾರೀ ಸಂಖ್ಯೆಯಲ್ಲಿರುವ ಯುವಮತದಾರ ಸಮೂಹವು ತನ್ನಂತೆ ತಾನೇ ಭಾರತದ ಮುಂದಿನ ಆಳುವ ಪಕ್ಷವನ್ನು ನಿರ್ಧರಿಸುತ್ತದೆಂಬುದು ಬಹಳ ತಪ್ಪು ಅಂದಾಜಾಗಿದೆ.

ಮೊದಲನೆಯದಾಗಿ, ಯುವಸಮೂಹವು ಒಂದು 'ಸಮೂಹ'ವಾಗಿ ಮತದಾನ ಮಾಡುತ್ತದೆ ಎಂಬುದೇ ವಾಸ್ತವವಲ್ಲ. ಚುನಾವಣೆಗಳಲ್ಲಿ ಯುವ ಸಮುದಾಯದ ನಿರ್ದಿಷ್ಟ ಸಮಸ್ಯೆಗಳನ್ನೇ ಗುರುತಿಸಿ, ಅವುಗಳ ಕುರಿತು ಮಾತನಾಡುವುದನ್ನು ಯಾವ ರಾಜಕೀಯ ಪಕ್ಷವೂ ಮಾಡುತ್ತಿಲ್ಲ. ಇದು ಹಿಂದಿನ ಚುನಾವಣೆಗಳ ಮಟ್ಟಿಗೂ ನಿಜ. ಅದರಲ್ಲೂ ಯುವಜನತೆಯ ಬಹಳ ಪ್ರಮುಖ ಸಮಸ್ಯೆಯಾದ ನಿರುದ್ಯೋಗದ ನಿವಾರಣೆಗೆ ನಿರ್ದಿಷ್ಟ ಕಾರ್ಯಸೂಚಿಯನ್ನು ಯಾವ ಪಕ್ಷವೂ ಹೊಂದಿಲ್ಲ. ಈ ಮಾತು ಮಹಿಳಾ ಸಮುದಾಯದ ಮಟ್ಟಿಗೂ ನಿಜ. ಮಹಿಳೆಯರೇ ಹಲವು ಪಕ್ಷಗಳ ನೇತಾರರಾಗಿರುವ ಸಂದರ್ಭದಲ್ಲೂ (ಎಐಎಡಿಎಂಕೆ, ತೃಣಮೂಲ ಕಾಂಗ್ರೆಸ್, ಬಹುಜನ ಸಮಾಜ ಪಕ್ಷ, ಕಾಂಗ್ರೆಸ್) ಆ ಪಕ್ಷಗಳಿಗೆ ಮಹಿಳೆಯರು ಸಾಪೇಕ್ಷವಾಗಿ ಹೆಚ್ಚು ಮತ ಹಾಕಿದ ಸಂದರ್ಭಗಳಿಲ್ಲ ಎಂದು ಸಿಎಸ್‌ಡಿಎಸ್‌ನ ಅಧ್ಯಯನವು ಹೇಳುತ್ತದೆ.

ಇದಕ್ಕೆ ಮುಖ್ಯ ಕಾರಣ ಮಹಿಳೆಯರು ಮತ್ತು ಯುವಜನತೆಯದ್ದೇ ಆದ ಗುರುತು (ಐಡೆಂಟಿಟಿ) ರೂಪುಗೊಂಡಿಲ್ಲದಿರುವುದು. ಆ ಅಸ್ಮಿತೆಗಳಡಿ ಸಂಘಟಿತವಾದ ಧ್ವನಿ ಇಲ್ಲದಿರುವುದು. ಬದಲಿಗೆ ಈ ಎರಡೂ ಸಮುದಾಯಗಳು ಜಾತಿ, ಧರ್ಮ, ಪ್ರದೇಶದ ಇತರ ಗುರುತುಗಳನ್ನೂ ಹೊಂದಿರುವುದು ಹಾಗೂ ಆ ಗುರುತುಗಳು ಮಹಿಳೆಯರು ಅಥವಾ ಯುವಜನತೆ ಎಂಬ ಗುರುತುಗಳಿಗಿಂತಲೂ ಸದೃಢೀಕರಣಗೊಂಡಿರುವುದು. ಇದೇ ಮಾತು ಹೊಸ ಮತದಾರರಿಗೂ ಅನ್ವಯಿಸುತ್ತದೆ. ಹೀಗಿದ್ದಾಗ್ಯೂ, 1999ರ ಚುನಾವಣೆಯಲ್ಲಿ ಯುವ ಮತದಾರರು ಬಜೆಪಿಗೆ ಹೆಚ್ಚು ಮತ ಹಾಕಿದ್ದು ಕಂಡುಬರುತ್ತದೆ. ಆ ಸಂದರ್ಭದಲ್ಲಿ ಬಿಜೆಪಿಯನ್ನು ಮುನ್ನಡೆಸುತ್ತಿದ್ದುದು ವಯೋವೃದ್ಧ ಅಟಲ್ ಬಿಹಾರಿ ವಾಜಪೇಯಿ!

ಹೀಗಿದ್ದೂ ಕಾಂಗ್ರೆಸ್ ಪಕ್ಷದ ಯುವ (?) ನೇತಾರ ರಾಹುಲ್ ಗಾಂಧಿ ಯುವಕರೊಡನೆ ಗುರುತಿಸಿಕೊಂಡಂತೆ ತೋರಿಸಲು ಹಲವು ಸರ್ಕಸ್‌ಗಳನ್ನು ನಡೆಸುತ್ತಿದ್ದಾರೆ. ಯುವಜನರ ಜೊತೆ ಸೇರಿ ಪ್ರಣಾಳಿಕೆ ರೂಪಿಸುವುದು, ಯುವ ಜನರ ಮಧ್ಯೆ ನಿಂತಿರುವ ರಾಹುಲ್ ಗಾಂಧಿ, ಯುವ ಜನರೊಡನೆ ಸಂವಾದ ಇತ್ಯಾದಿ ಇಮೇಜ್‌ಗಳನ್ನು ಜನರ ಮುಂದೆ ಇಡಲು ಸಾಕಷ್ಟು ಪ್ರಯತ್ನ ನಡೆಯುತ್ತಿದೆ. ಯುವಜನರದ್ದೇ ಆದ ಒಂದು ಸದೃಢೀಕೃತ ಅಸ್ಮಿತೆಯೇ ಇಲ್ಲದಿರುವುದರಿಂದಲೂ ಇದು ಪ್ರಯೋಜನಕ್ಕೆ ಬರುವ ಸಾಧ್ಯತೆ ಇಲ್ಲ. ಇದೇ ಅಂಶವು ಬಿಜೆಪಿಗಿದೆಯೆಂದು ಭಾವಿಸಲಾಗುತ್ತಿದ್ದ ಅನುಕೂಲತೆಯ ಸಾಧ್ಯತೆಯನ್ನೂ ಇಲ್ಲವಾಗಿಸುತ್ತದೆ. ವಾಸ್ತವದಲ್ಲಿ 1999ರ ಚುನಾವಣೆಯ ನಂತರದ ಎರಡೂ ಲೋಕಸಭಾ ಚುನಾವಣೆಗಳಲ್ಲಿ ಯುವಜನರು ಬಿಜೆಪಿಗೆ ಮತ ಹಾಕಿಲ್ಲ ಎಂದು ಅಧ್ಯಯನವು ತಿಳಿಸುತ್ತದೆ.

ಮೊನ್ನಿನ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಮಧ್ಯಮ ವರ್ಗದ ಯುವಜನರು ಹೆಚ್ಚು ಆಮ್ ಆದ್ಮಿ ಪಕ್ಷದ ಕಡೆಗೆ ಒಲವು ತೋರಿರುವುದು ನಡೆದಿದೆ. ಯಾವುದೇ ಹೊಸ ಶಕ್ತಿಯು ತಮ್ಮ ಕಲ್ಪನೆಯನ್ನು ಹಿಡಿದಿಡಲು ಸಾಧ್ಯವಾದಾಗ ಯುವಜನರು ಆ ಕಡೆಗೆ ಸರಿಯುವುದು ಹೊಸದೇನಲ್ಲ. ದೆಹಲಿಯಲ್ಲಿ ಈ ವಿದ್ಯಮಾನವು ಲೋಕಸಭಾ ಚುನಾವಣೆಯಲ್ಲೂ ಮುಂದುವರೆಯುವ ಸಾಧ್ಯತೆ ಇದೆ. ಉತ್ತರದ ರಾಜ್ಯಗಳಲ್ಲಿ ಇಂತಹ ಒಲವು ಬಿಜೆಪಿಯ ಕಡೆಗೆ ಹರಿದಿರುವುದೂ ಅಧ್ಯಯನದಲ್ಲಿ ವ್ಯಕ್ತವಾಗಿದೆ. ಆದರೆ ದಕ್ಷಿಣದ ರಾಜ್ಯಗಳಲ್ಲಿನ ಯುವಜನರು ಅಂತಹ ನಿರ್ದಿಷ್ಟ ಧೋರಣೆಯನ್ನೇನೂ ಹೊಂದಿಲ್ಲ ಎಂಬುದು ಆಶ್ಚರ್ಯಕರವಾಗಿದೆ. ಒಟ್ಟಾರೆ ಇಡೀ ದೇಶದಲ್ಲಿ ಹಿಂದಿನ ಚುನಾವಣೆಗಳಿಗಿಂತ ಸಣ್ಣ ಪ್ರಮಾಣದಲ್ಲಿಯಷ್ಟೇ ಯುವಜನರು 'ಒಂದು ಸಮುದಾಯವಾಗಿ' ಬದಲಾವಣೆಯ ಇಂಗಿತವನ್ನು ವ್ಯಕ್ತಪಡಿಸಿರುವುದು ಕಂಡುಬಂದಿದೆ.

ಈಗ ಪ್ರಶ್ನೆಯಿರುವುದು ಇಂತಹದೊಂದು ವಾಸ್ತವ ಒಳ್ಳೆಯದೋ ಕೆಟ್ಟದ್ದೋ ಎಂಬುದು. ಅಂದರೆ ಯುವಜನರದ್ದೇ ಒಂದು ಪ್ರತ್ಯೇಕ ಅಸ್ಮಿತೆ ಇಲ್ಲದೇ, ಅವರು ಗುಂಪಾಗಿಯಲ್ಲದೇ 'ವ್ಯಕ್ತಿಗತವಾಗಿ' ತಮ್ಮ ಇತರ ಗುರುತುಗಳಲ್ಲೇ (ಜಾತಿ, ಧರ್ಮ, ಪ್ರದೇಶ, ಇತರ ಸ್ಥಳೀಯ ಸಮಸ್ಯೆಗಳು) ಹೆಚ್ಚು ಗುರುತಿಸಿಕೊಳ್ಳುವುದು ದೇಶದ ಆರೋಗ್ಯದ ದೃಷ್ಟಿಯಿಂದ, ಒಳ್ಳೆಯದ್ದೋ ಅಥವಾ ಕೆಟ್ಟದ್ದೋ ಎಂಬುದು ಗಂಭೀರವಾಗಿ ಚರ್ಚಿಸಬೇಕಾದ ಸಂಗತಿಯಾಗಿದೆ. ನರೇಂದ್ರ ಮೋದಿಯ ನಕಲಿ ಪ್ರಚಾರಕ್ಕೆ ಯುವಜನರು ಇಡಿಯಾಗಿ ಮಾರುಹೋಗುವುದಿಲ್ಲ ಎಂಬುದು ಒಳ್ಳೆಯ ಸಂಗತಿ. ರಾಹುಲ್ ಗಾಂಧಿಯ ಹುಸಿ ಪೋಸುಗಳಿಗೂ ಈ ಸಮುದಾಯವು ಬೆಲೆ ಕೊಡುವುದಿಲ್ಲ ಎಂಬುದೂ ಸಕಾರಾತ್ಮಕವಾದದ್ದು. ಆದರೆ ಯುವಜನರು ದೇಶದ ಭವಿಷ್ಯದ ದೃಷ್ಟಿಯಿಂದ ಸಮಷ್ಟಿ ನೋಟ, ಚಿಂತನೆ ಮತ್ತು ಕ್ರಿಯಾಶೀಲತೆಯನ್ನು ಹೊಂದದಿರುವುದು ಸಕಾರಾತ್ಮಕವಲ್ಲ.


ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ರೂಪುಗೊಳ್ಳುತ್ತಿರುವ (ಮತ್ತು ಪ್ರಜ್ಞಾಪೂರ್ವಕವಾಗಿ ರೂಪಿಸಲಾಗುತ್ತಿರುವ) ಸಮುದಾಯ (ಕಮ್ಯುನಿಟಿ)ಗಳು, ನಮ್ಮ ದೃಶ್ಯ ಮಾಧ್ಯಮಗಳ ಉನ್ಮತ್ತ ಚಿತ್ರಾವಳಿ ರೂಪಿಸುವ ಅರೆಬರೆ ಅಭಿಪ್ರಾಯಗಳ ಸಮುದಾಯಗಳಿಗಿಂತ ಸಬಲವಾಗಿರುವ ಸಾಧ್ಯತೆಯಿದೆ. ಜೊತೆಗೆ ಇಂತಹದರಲ್ಲಿ ಸಕ್ರಿಯರಾಗಿರುವವರಲ್ಲಿ ಶೇ.85ಕ್ಕೂ ಹೆಚ್ಚು ಬಳಕೆದಾರರು ಯುವಜನರಾಗಿದ್ದಾರೆ. ಆದರೆ ಇಂದಿಗೂ ಇಂಟರ್ನೆಟ್‌ನಲ್ಲಿ ಸಮುದಾಯಗಳಾಗಿ ರೂಪುಗೊಳ್ಳುವ ಸಾಧ್ಯತೆಯಿರುವ ಯುವಜನರ ಪ್ರಮಾಣ ಭಾರತದಂತಹ ದೇಶದಲ್ಲಿ ಶೇ.20ನ್ನೂ ದಾಟಲಾರದು. ಬದುಕಿನ ವಾಸ್ತವಗಳಿಗಿಂತ ಭ್ರಾಮಕ ಜಗತ್ತಿನಲ್ಲೇ ಕ್ರಿಯಾಶೀಲರಾಗಿ, ಅಲ್ಲಿಯೇ ಎಲ್ಲವನ್ನೂ ಮುಗಿಸಿಬಿಡುವ ಅಥವಾ ಮುಳುಗಿಸಿಬಿಡುವ ಸುಳಿಗಳಾಗಿಯೂ ಈ ಜಾಲತಾಣಗಳು ಕೆಲಸ ಮಾಡುತ್ತಿವೆ. ಹಾಗಾಗಿ ಈ ಚುನಾವಣೆಯ ಮಟ್ಟಿಗೆ ಯುವಸಮುದಾಯದ ಆಲೋಚನೆ ಹಾಗೂ ಕ್ರಿಯೆಯನ್ನು ಸಗಟಾಗಿ ಪರಿವರ್ತಿಸಬಲ್ಲ ಶಕ್ತಿ ಅವಕ್ಕಿನ್ನೂ ಬಂದಿಲ್ಲ. ಹಳ್ಳಿಗಳಲ್ಲಿ ಯುವಕ, ಯುವತಿಯರ ಸಂಖ್ಯೆ ಸಾಪೇಕ್ಷವಾಗಿ ಕಡಿಮೆಯಾಗುತ್ತಿದೆಯಾದರೂ, ಶೇ.50ರಷ್ಟು ಜನಸಂಖ್ಯೆ ಇನ್ನೂ ಗ್ರಾಮಾಂತರ ಭಾಗಗಳಲ್ಲೇ ಇದೆ. ಹೊಸ ಮತದಾರರಲ್ಲಿ ಹೆಚ್ಚಿನವರು ಜಾತಿ, ಪ್ರಾದೇಶಿಕತೆ ಪ್ರಬಲವಾಗಿರುವ ರಾಜ್ಯಗಳಲ್ಲೇ ಇದ್ದಾರೆ ಎಂದು ಸಮೀಕ್ಷೆಗಳು ತಿಳಿಸುತ್ತಿವೆ. ಹಾಗಾಗಿ 2014ರ ಚುನಾವಣೆಯ ವಿಚಾರದಲ್ಲಿ ಖಚಿತವಾಗಿ ಹೇಳಬಹುದಾದ್ದೇನೆಂದರೆ, ಯುವಜನರು ಸಗಟಾಗಿ ಮತ ಹಾಕುವ ಸಾಧ್ಯತೆಯೇನೂ ಕಾಣುತ್ತಿಲ್ಲ. ಅದು ದೇಶವ್ಯಾಪಿಯಾದ ವಿದ್ಯಮಾನವಾಗಿರದೇ, ತಮ್ಮ ಇತರ ಗುರುತುಗಳೇ ಪ್ರಧಾನವಾಗಿ ಅವುಗಳಡಿಯಲ್ಲೇ ಯುವ ಮತದಾರರು ತಮ್ಮ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ.

1995ರಿಂದೀಚೆಗೆ ಕುಸಿದ ಚಳವಳಿಗಳ ಕಾರಣಕ್ಕೆ ಉಂಟಾಗಿದ್ದ ಸಿನಿಕತೆಯು ಇವತ್ತಿನ ಯುವಜನರಲ್ಲಿ ಇಲ್ಲ. ಏಕೆಂದರೆ ಅವರೆಲ್ಲರೂ ಪ್ರೌಢರಾಗಿ ಬೆಳೆದ ಸಂದರ್ಭದಲ್ಲಾಗಲೇ ಈ ಚಳವಳಿಗಳ ಅಸ್ತಿತ್ವ ಅಷ್ಟಾಗಿ ಇರಲಿಲ್ಲ. ಅದೇ ಸಂದರ್ಭದಲ್ಲಿ ಅವರಲ್ಲಿ ಬೃಹತ್ ಚಳವಳಿಗಳು ಮೂಡಿಸುವ ಆಶಾವಾದವೂ ಇಲ್ಲ. ಅದರ ಪ್ರಸ್ತುತ ರಾಜಕೀಯ ವ್ಯವಸ್ಥೆಯ ಕುರಿತಾದ ತಿರಸ್ಕಾರವಂತೂ ಇದೆ. ಇದು ಒಂದು ಕ್ರಿಯಾಶೀಲತೆಯನ್ನು ಹುಟ್ಟಹಾಕಿದ ಜಾಗತೀಕರಣವು ಹುಟ್ಟಿಸಿ ಬೆಳೆಸಿದ ಸ್ವಕೇಂದ್ರಿತ ಚಿಂತನೆ ಹಾಗೂ ಬದುಕಿನ ರೀತಿಗಳು ಅದನ್ನು ಬೃಹತ್ ಸಾಮೂಹಿಕ ಕ್ರಿಯೆಯಾಗಿಸಲು ಅನುವು ಮಾಡಿಕೊಡುತ್ತಿಲ್ಲ.

ಅಂತರ್ಜಾಲವು ಕೈಗೆಟುಕುತ್ತಿರುವ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗಗಳ ಯುವಜನರ ಒಂದು ವಿಭಾಗವು ಅದರ ಪ್ರಭಾವಕ್ಕೆ ಒಳಗಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ (ಟಿವಿಗಿಂತ ಭಿನ್ನವಾಗಿ) ಪ್ರತಿಯೊಬ್ಬರ ವ್ಯಕ್ತಿಗತ ಅಭಿವ್ಯಕ್ತಿಗೂ ಒಂದು ಅವಕಾಶವಿರುತ್ತದಾದ್ದರಿಂದ ಅದು ಅವರನ್ನು ಮತ್ತಷ್ಟು ಸೆಳೆಯುತ್ತಿದೆ. ಆಮ್ ಆದ್ಮಿ ಪಕ್ಷದ ವಿದ್ಯಮಾನವು ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದೆ.

ಇದನ್ನೂ ದಾಟಿ ಶೋಷಿತ ಸಮುದಾಯಗಳ (ದುರ್ಬಲ ವರ್ಗ ಮತ್ತು ಜಾತಿಗಳ) ಪರವಾಗಿಯೂ, ಮಹಿಳೆಯರ ಪರವಾಗಿಯೂ ಕ್ರಿಯಾಶೀಲವಾಗುವ ಮತ್ತು ದೇಶದ ಒಳಿತಿನ ಬಗ್ಗೆ ಆಲೋಚಿಸಬಲ್ಲ ರೀತಿಯಲ್ಲಿ ಒಂದು ಯುವ ಸಮೂಹ ರೂಪುಗೊಳ್ಳುತ್ತದೆಯಾ? ಆ ರೀತಿ ರೂಪುಗೊಳ್ಳಬೇಕೆಂದರೆ, ಆ ಸಮೂಹವು 'ಶೋಷಿತ ಪರ' ಇದ್ದರೆ ಸಾಲದು, ತಾನೇ ಶೋಷಿತ ಸಮುದಾಯಗಳೊಳಗಿಂದ ರೂಪುಗೊಳ್ಳಬೇಕು. ಅದು ಇಂಟರ್ನೆಟ್ ಲೋಕದ ಕ್ರಿಯಾಶೀಲತೆಯೂ ವಾಸ್ತವಲೋಕದ ಕ್ರಿಯೆಗಳೂ ಪರಸ್ಪರ ಪೂರಕವಾಗಿ ಜೊತೆಗೂಡಬೇಕಾಗುತ್ತದೆ. ಆ ರೀತಿ ಅರಳುವ ಯುವ ಸಮುದಾಯದ ಓಟನ್ನು ಪಡೆದುಕೊಳ್ಳುವ ಪ್ರಕ್ರಿಯೆಯು ತಾನೇ ಅದನ್ನು ರೂಪಿಸಲೂಬೇಕಾಗುತ್ತದೆ. ಇವತ್ತಿನ ಮಟ್ಟಿಗೆ ಆಮ್ ಆದ್ಮಿ ಪಕ್ಷವು ಅದನ್ನು ದೇಶವ್ಯಾಪಿಯಾಗಿ ಮಾಡುವ ಕೆಲಸದಲ್ಲಿ ತೊಡಗಿದೆ. ಆದರೆ ಅದು ಶೋಷಿತ ಸಮುದಾಯಗಳೊಳಗಿಂದ ರೂಪುಗೊಂಡಿಲ್ಲ ಮಾತ್ರವಲ್ಲ, ಶೋಷಿತರ ಪರ ಇರುವುದೂ ಅನುಮಾನವಾಗಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅಂತಹ ಸಾಧ್ಯತೆಯ ಕೇಂದ್ರದಲ್ಲಿರುವ ಅವಕಾಶವನ್ನು ಈಗಿಂದೀಗಲೇ ಸಕಾರಾತ್ಮಕವಾಗಿ ಬಳಸಿಕೊಳ್ಳುವ ಶಕ್ತಿಯನ್ನು ಹೊಂದಿದ್ದಂತೆ ಕಾಣುತ್ತಿಲ್ಲ. ಹಾಗಾಗಿ ಯುವಜನರ ಓಟು ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳ ಜೊತೆ ವಿವಿಧ ಜಾತಿ, ಧರ್ಮಗಳನ್ನು ಪ್ರತಿನಿಧಿಸುವ ಪಕ್ಷಗಳ ನಡುವೆಯೇ ಈ ಬಾರಿಯೂ ಹಂಚಿಕೆಯಾಗುವ ಸಾಧ್ಯತೆಯೇ ಹೆಚ್ಚು.



# ...್ಯಾರವಾನ್ ಪತ್ರಿಕೆ ತೆರೆದಿಟ್ಟ ಸತ್ಯಗಳು

...ಯೋತ್ಪಾದಕ ಯಾಸೀನ್ ಭಟ್ಕಳ್‌ನ
...ಧಿಯೊಬ್ಬನನ್ನು ಇತ್ತೀಚೆಗೆ ಪೊಲೀಸರು ಬಂಧಿಸಿದ್ದನ್ನೇ
...ಹಲವು ದಿನ ಪತ್ರಿಕೆಗಳು ಮುಖ್ಯ ವರದಿಯನ್ನಾಗಿ
...ದವು. ಹಲವು ತಿಂಗಳ ಹಿಂದೆ ಕರಾವಳಿಯಲ್ಲಿ
...ಶಾ ಎಂಬ ಮಹಿಳೆಯನ್ನು ಹವಾಲಾಕ್ಕೆ
...ಧಿಸಿದಂತೆ ಪೊಲೀಸರು ಬಂಧಿಸಿದಾಗಲೂ ಆಕೆಗೆ
...ಂದಿಗೆ ನಂಟಿದೆ ಎಂದು ಕೋಮುವಾದಿ ಪತ್ರಿಕೆಗಳು
...ಮಾಡಿದ್ದವು. ಹೋದ ವರ್ಷ ಅಮಾಯಕ ಮುಸ್ಲಿಮ್
...ಕರನ್ನು ಪೊಲೀಸರು ವಿಚಾರಣೆಗೆ ಕರೆದುಕೊಂಡು
...ಾಗಲೂ ಯಾವ ಆಧಾರವಿಲ್ಲದಿದ್ದರೂ ಅವರೆಲ್ಲ
...ಹಿದ್ದೀನ್, ತೋಯಿಬಾ ಸದಸ್ಯರು ಎಂದು ಪತ್ರಿಕೆಗಳು
...ಲೆಬ್ಬಿಸಿದ್ದವು.

...ದರೆ ಇದೇ ತಿಂಗಳು ದೇಶದ ಪ್ರಖ್ಯಾತ
...ೊಂದು ಎರಡು ವರ್ಷಗಳ ಕಾಲ ಸಂದರ್ಶನಗಳನ್ನು
... ಸಂಶೋಧನೆ ಮಾಡಿ, ಕರಾರುವಾಕ್ಕಾದ
...ತಿಗಳನ್ನು ಸಂಗ್ರಹಿಸಿ ಕೇಸರಿ ಭಯೋತ್ಪಾದನೆಯಲ್ಲಿ
...ನ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು
...ರಿವಾರದ ಮತ್ತೋರ್ವ ಮುಖ್ಯ ನಾಯಕ ಇಂದ್ರೇಶ್
...್ ಎಂಬಾತನ ಪಾತ್ರ ಇರುವುದರ ಬಗ್ಗೆ ಖಚಿತವಾದ
... ಮಾಡಿದೆ. ಆದರೂ ಯಾವ ಪತ್ರಿಕೆಯಾಗಲಿ, ಟಿವಿ
...್ ಆಗಲಿ ಅದರ ಬಗ್ಗೆ ಚಕಾರವೆತ್ತಿಲ್ಲ.

...ದರೆ ಆಕಸ್ಮಾತ್ ಆ ಪತ್ರಿಕೆಯು ಮುಸಲ್ಮಾನ್
...ೋತ್ಪಾದನೆ ಬಗ್ಗೆ ಇಷ್ಟೇ ಪ್ರಮುಖವಾದ ವರದಿಯನ್ನು
...ದ್ದರೆ ಇಷ್ಟು ಹೊತ್ತಿಗೆ ಅದು ಎಲ್ಲಾ ಪತ್ರಿಕೆಗಳಲ್ಲೂ
...ವಾಗಿ ಪ್ರಕಟವಾಗುತ್ತಿತ್ತಲ್ಲದೆ ಟಿವಿ ಚಾನೆಲ್‌ಗಳಲ್ಲಿ
...ೆ ಚರ್ಚಾವಸ್ತುವೂ ಆಗಿರುತ್ತಿತ್ತು. ಇದು ಏನನ್ನು
...ುತ್ತದೆ? ನಮ್ಮ ಮುಖ್ಯವಾಹಿನಿಯ ಪ್ರಮುಖ
...ಗಳು ಮತ್ತು ಟಿವಿ ಚಾನೆಲ್‌ಗಳು ಹಿಂದೂ
...ುವಾದಿಗಳ ವಾರ್ತಾ ಮಾಧ್ಯಮಗಳಾಗಿವೆ
...ದನ್ನಲ್ಲವೇ? ಹೆಚ್ಚಾಗಿ ಕಾರ್ಪೋರೇಟ್ ಕಂಪನಿಗಳ
...ಕತ್ವದಲ್ಲಿರುವ ಈ ಮಾಧ್ಯಮಗಳು ಜೊತೆಗೂಡಿ
...ಬೇಳೆ ಬೇಯಿಸಿಕೊಳ್ಳಲು ನರಹಂತಕ ನರೇಂದ್ರ
...ಯ ಪರ ನಿಂತಿವೆ ಮತ್ತು ಆ ಮೂಲಕ
...್ರೋಹಿಗಳಾಗಿವೆ ಎಂಬುದನ್ನಲ್ಲವೇ?

... ಕ್ಯಾರವಾನ್' ಎಂಬ ಇಂಗ್ಲಿಷ್ ಮಾಸಿಕದ
...ರುಲ್ಲೇನಿದೆ ಎಂಬುದರತ್ತ ಗಮನಹರಿಸೋಣ.
...ರ ಸಂಜೋತ ರೈಲು, ಅದೇ ವರ್ಷ
...ಾಬಾದ್‌ನ ಮೆಕ್ಕಾ ಮಸೀದಿಯಲ್ಲಿ ಮತ್ತು
...ೇರ್ ದರ್ಗಾಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟ,
... ಮತ್ತು 2008ರಲ್ಲಿ ಮಾಲೇಗಾಂವ್‌ನಲ್ಲಿ
...ಸಿದ ಬಾಂಬ್‌ಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ
... ಅಸೀಮಾನಂದ ಎಂಬಾತ ಈಗ ಅಂಬಾಲ
...ರಲ್ಲಿ ಬಂಧಿತನಾಗಿದ್ದಾನೆ. ಈ ಸ್ವಾಮಿ
...ಾನಂದನ ಕೃತ್ಯಗಳ ಬಗ್ಗೆ ಪತ್ರಿಕೆ ಸುದೀರ್ಘವಾಗಿ
...ಮಾಡಿತಲ್ಲದೆ ನಮ್ಮ ಸುರೇಶ್ ಭಟ್ ಬಾಕ್ರಬೈಲ್
... ಬರೆದಿರುವ (ಲಂಕೇಶ್ ಪ್ರಕಾಶನ ಪ್ರಕಟಿಸಿರುವ)
... ಭಯೋತ್ಪಾದನೆ' ಪುಸ್ತಕದಲ್ಲೂ ವಿವರಗಳಿವೆ.

...ಸೀಮಾನಂದ ಮತ್ತು ಆತನ ಕೇಸರಿ ಭಯೋತ್ಪಾದಕರು
...್‌ಗಳನ್ನು ಸ್ಫೋಟಿಸುವ ಮೂಲಕ ಕೊಂದಿರುವ
...ಯಕ ಜನರ ಸಂಖ್ಯೆ 119 ಎಂಬುದು ನೆನಪಿರಲಿ.


...ಂತಹ ಅಸೀಮಾನಂದನನ್ನು ಕಳೆದ ಎರಡು
...ಗಳಲ್ಲಿ 'ಕ್ಯಾರವಾನ್' ಪತ್ರಿಕೆಯ ಬರಹಗಾರ್ತಿ ಲೀನಾ
... ರೆಘುನಾಥ್ ಅವರು ನಾಲ್ಕು ಬಾರಿ ಜೈಲಿನಲ್ಲೇ
...ಿಸಿದ್ದಾರೆ. ಆತನೊಂದಿಗೆ ಆಕೆ ಕಳೆದ ಒಟ್ಟು ಸಮಯ
...ು ಗಂಟೆಗಿಂತಲೂ ಹೆಚ್ಚು. ಲೀನಾ ಅವರು ಮಾಡಿದ್ದು
...ುದೇ ಸ್ಟಿಂಗ್ ಆಪರೇಶನ್ ಅಲ್ಲ, ಬದಲಾಗಿ
...ರಿಗಳ ಅನುಮತಿ ಪಡೆದು ಅಸೀಮಾನಂದನ
...ರದೊಂದಿಗೆ ನಡೆಸಿದ ಸಂದರ್ಶನ ಎಂಬುದೂ ಇಲ್ಲಿ
...

... ಸಂದರ್ಶನಗಳಲ್ಲಿ ಅಸೀಮಾನಂದ ಯಾವ
...ುಮರೆ ಇಲ್ಲದೆ ತಾನು ಭಾಗಿಯಾಗಿದ್ದ ಎಲ್ಲಾ
...ೋತ್ಪಾದಕ ಕೃತ್ಯಗಳಿಗೆ ಆರೆಸ್ಸೆಸ್‌ನ ಹಾಲಿ ಮುಖ್ಯಸ್ಥ
...ನ್ ಭಾಗವತ್‌ನ ಸಮ್ಮತಿ ಇತ್ತು ಎಂದು ಸ್ಪಷ್ಟವಾಗಿ
...್ದಾನೆ. ಮಾತ್ರವಲ್ಲ "ಸ್ವಾಮೀಜಿಯವರೇ ನೀವು ಇಂತಹ
...ಲ್ಲಿ ತೊಡಗಲು ನಿರ್ಧರಿಸಿರುವುದು ನಮಗೆ ನೆಮ್ಮದಿ
.... ಇದು ಬಹಳ ಮುಖ್ಯವಾದ ಕೆಲಸ. ನೀವು
... ಮಾಡುವುದರಿಂದ ಯಾವ ತಪ್ಪೂ
...ಂತಾಗುವುದಿಲ್ಲ. ನಿಮ್ಮಂತಹವರು ಇಂತಹದರಲ್ಲಿ
...ಿದರೆ ಅದು ಕ್ರಿಮಿನಲ್ ಕೆಲಸವಾಗದೆ ನಮ್ಮ
...ತತ್ವ, ಬದ್ಧವಾಗಿರುವ ಕೃತ್ಯವಾಗುತ್ತದೆ. ಇದು
...ಂಗಳಿಗೆ ಮುಖ್ಯವಾಗಿದೆ. ದಯವಿಟ್ಟು ನೀವು
...ದನ್ನು ಮಾಡಿ. ಇದಕ್ಕೊಂದು ಸುನಿಲ್ ಎಂಬಾತನ
...್ತೂ ಪಡೆಯಿರಿ. ನಾವು ಇದರಲ್ಲಿ ನೇರವಾಗಿ ಭಾಗಿ

ಆಗುವುದಿಲ್ಲ. ನೀವೂ ಕೂಡ ಇದನ್ನು ಸಂಘಪರಿವಾರದೊಂದಿಗೆ ಲಿಂಕ್ ಮಾಡಕೂಡದು. ನಮ್ಮ ಆಶೀರ್ವಾದ ನಿಮಗೆ ಇರುತ್ತದೆ" ಎಂದು ಭಾಗವತ್ ಹೇಳಿದ್ದಾಗಿ ಅಸೀಮಾನಂದ ಒಪ್ಪಿಕೊಂಡಿದ್ದಾನೆ.

ಕೋಮುವಾದಿ ಆರೆಸ್ಸೆಸ್ ಬಹಳ ಕಾಲದಿಂದ ಕೊಲೆ, ಕೋಮುಗಲಭೆ, ಅಪಪ್ರಚಾರ, ಸುಳ್ಳು ಇತ್ಯಾದಿಗಳಲ್ಲಿ ತೊಡಗಿರುವುದು ಹಲವಾರು ಬಾರಿ ಸಾಬೀತಾಗಿದ್ದರೂ ಅದು ಎಲ್ಲ ಆರೋಪಗಳಿಂದ ನುಸುಳಿಕೊಳ್ಳುತ್ತಲೇ ಬಂದಿದೆ. ಮಹಾತ್ಮ ಗಾಂಧಿಯವರನ್ನು ನಾಥೂರಾಮ್ ಗೋಡ್ಸೆ ಕೊಂದಾಗ 'ಆತ ನಮ್ಮ ಸಂಘಟನೆಯವನೇ ಅಲ್ಲ' ಎಂದು ಆರೆಸ್ಸೆಸ್ ಹೇಳಿತ್ತು. ಕೆಲವು ವರ್ಷಗಳ ಹಿಂದೆ ಮಾಲೇಗಾಂವ್‌ನಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿದ್ದಕ್ಕೆ ಸಾಧ್ವಿ ಪ್ರಜ್ಞಾ ಸಿಂಗ್ ಎಂಬಾಕೆಯನ್ನು ಬಂಧಿಸಿದಾಗಲೂ 'ಆಕೆ ನಮ್ಮ ಎಬಿವಿಪಿಯನ್ನು ಕೆಲವು ವರ್ಷಗಳ ಹಿಂದೆಯೇ ತೊರೆದಿದ್ದರಿಂದ ಆಕೆಗೂ ನಮಗೂ ಸಂಬಂಧ ಇಲ್ಲ' ಎಂದು ವಾದಿಸಿತ್ತು.

ಆದರೆ ಅಸೀಮಾನಂದನ ವಿಚಾರದಲ್ಲಿ ಆರೆಸ್ಸೆಸ್ ಹಾಗೆ ಮಾಡಿಲ್ಲ. ಈಗ 63 ವರ್ಷ ಪ್ರಾಯದ ಅಸೀಮಾನಂದ ತನ್ನ ಇಡೀ ಬದುಕನ್ನು ಸಂಘಪರಿವಾರಕ್ಕೆ ಮೀಸಲಿಟ್ಟವನು. ಆತನ ನೇತೃತ್ವದ ವನವಾಸಿ ಕಲ್ಯಾಣ ಆಶ್ರಮ ಅರಣ್ಯ ಪ್ರದೇಶಗಳಲ್ಲಿ ಮಾಡಿದ 'ಮರುಮತಾಂತರ'ಗಳಿಗೆ ಮತ್ತು ಸುಟ್ಟ ಚರ್ಚ್‌ಗಳಿಗೆ ಲೆಕ್ಕವಿಲ್ಲ. ಇಷ್ಟೆಲ್ಲ 'ಸಾಧನೆ'ಗಳನ್ನು ಮಾಡಿದ್ದ ಅಸೀಮಾನಂದನಿಗೆ ಆರೆಸ್ಸೆಸ್ ತನ್ನ ಪ್ರತಿಷ್ಠಿತ 'ಗುರೂಜಿ ಸಮ್ಮಾನ್' ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತ್ತು. ಈಗಲೂ ಅಸೀಮಾನಂದನಿಗೆ ಕಾನೂನಿನ ನೆರವು ಕೊಡುತ್ತಿರುವವರು ಸಂಘ ಪರಿವಾರಕ್ಕೆ ಸೇರಿರುವ ವಕೀಲರೇ ಎಂಬುದೂ ಗಮನಾರ್ಹ.




ಅಸೀಮಾನಂದ ಕ್ಯಾರವಾನ್ ಪತ್ರಿಕೆಗೆ ಕೊಟ್ಟಿರುವ ಸಂದರ್ಶನಗಳಲ್ಲಿ ಆತ ಪಾಪಪ್ರಜ್ಞೆಯಿಂದ 'ತಪ್ಪೊಪ್ಪಿಗೆ' ಕೊಟ್ಟಿಲ್ಲ. ಬದಲಾಗಿ ತಾನು ದೊಡ್ಡ 'ಸಮಾಜ ಸೇವೆ' ಮಾಡಿದ್ದೇನೆ ಎಂಬ ಹೆಮ್ಮೆಯಲ್ಲೇ ತನ್ನ ಪಾಪಕೃತ್ಯಗಳ ಬಗ್ಗೆ ಹೇಳಿಕೊಂಡಿದ್ದಾನೆ. ಜೊತೆಗೆ ಬಾಂಬ್‌ಗಳನ್ನು ತಯಾರಿಸುವಲ್ಲಿ, ಅವುಗಳನ್ನು ಸ್ಫೋಟಿಸಲು ಬೇಕಾದ ಮೊಬೈಲ್ ಸಿಮ್‌ಗಳ ಖರೀದಿಯಲ್ಲಿ ಇತ್ಯಾದಿಗಳಲ್ಲಿ ಹೇಗೆ ಮೋಹನ್ ಭಾಗವತ್ ತನಗೆ ಸಹಾಯ ಮಾಡಿದ ಎಂದೂ ಹೇಳಿದ್ದಾನೆ.

ಇಷ್ಟಾದರೂ ಯಾವ ಪತ್ರಿಕೆ ಅಥವಾ ಚಾನೆಲ್ ಇದರತ್ತ ಗಮನ ಹರಿಸಿಲ್ಲ. ಬದಲಾಗಿ ಕಳೆದ ಕೆಲವು ದಿನಗಳಿಂದ ಇದು ಅಂತರಜಾಲದಲ್ಲಿ ಮಾತ್ರ ಚರ್ಚೆಯಾಗುತ್ತಿದೆ. ಈ ಕಾರಣಕ್ಕೇ ಇರಬೇಕು ಇವತ್ತು ಕ್ಯಾರವಾನ್ ಪತ್ರಿಕೆಯ ನಿರ್ವಾಹಕ ಸಂಪಾದಕ ವಿನೋದ್ ಕೆ ಜೋಸ್ ಅವರು ಒಂದು ಪತ್ರಿಕಾ ಹೇಳಿಕೆಯನ್ನು ಮತ್ತು ಅಸೀಮಾನಂದನ ಸಂದರ್ಶನದಲ್ಲಿ ಮೋಹನ್ ಭಾಗವತ್ ಅವರ ಹೆಸರು ಪ್ರಸ್ತಾಪವಾಗಿರುವ ರೆಕಾರ್ಡಿಂಗ್‌ನ ಕೆಲವು ಭಾಗಗಳನ್ನು ಬಿಡುಗಡೆ ಮಾಡಿದ್ದಾರೆ. ಇಷ್ಟೆಲ್ಲ ಆದನಂತರವೂ ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ಆರೆಸ್ಸೆಸ್ ಎಂತಹ ಭಯೋತ್ಪಾದಕ ಸಂಘಟನೆ ಎಂಬುದರ ಬಗ್ಗೆ ಗಮನ ಹರಿಸುತ್ತವೆ ಎಂಬ ಆಶೆ ನನಗಂತೂ ಇಲ್ಲ.

ಈ ಕ್ಯಾರವಾನ್ ಪತ್ರಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕು. ಈಗ ದೇಶದಾದ್ಯಂತ ಇಂಗ್ಲಿಷ್ ವಾರ ಪತ್ರಿಕೆಗಳಲ್ಲಿ ಇಂಡಿಯಾ ಟುಡೇ ಮತ್ತು ಔಟ್‌ಲುಕ್ ಹೆಸರುವಾಸಿಯಾಗಿವೆ. ಆದರೆ ಇವೆರಡೂ ಜನಪ್ರಿಯ ವಾರ ಪತ್ರಿಕೆಗಳಿಗಿಂತ ಚೆನ್ನಾಗಿ ಮೂಡಿಬರುತ್ತಿರುವುದು ಮಾಸಿಕ ಪತ್ರಿಕೆಯಾದ 'ದಿ ಕ್ಯಾರವಾನ್'. ದೆಲ್ಲಿ ಪ್ರೆಸ್ ಸಮೂಹದ ಮುಖ್ಯಸ್ಥರಾದ ಪರೇಶ್‌ನಾಥ್ ಅವರು ಈ ಮಾಸಿಕವನ್ನು ಹಲವಾರು ವರ್ಷಗಳ ಹಿಂದೆ ಪ್ರಾರಂಭಿಸಿದ್ದರೂ ಅದು ಅಷ್ಟು ಜನಪ್ರಿಯವಾಗದೆ ಉಳಿದಿತ್ತು. ಆದರೆ ಮೂರ್ನಾಲ್ಕು ವರ್ಷಗಳ ಹಿಂದೆ ಇದರ ಸಂಪಾದಕರಾಗಿ ನಾಥ್ ಅವರ ಪುತ್ರ ಅನಂತ್ ನಾಥ್ ಮತ್ತು ನಿರ್ವಾಹಕ-ಸಂಪಾದಕರಾಗಿ ವಿನೋದ್ ಕೆ ಜೋಸ್ ಅವರುಗಳು ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ಕ್ಯಾರವಾನ್ ಅದ್ಭುತವಾಗಿ ಮೂಡಿಬರುತ್ತಿದೆ.

ಇದರಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ಆಳವಾದ ಸಂಶೋಧನೆ ಮತ್ತು ವ್ಯಾಪಕ ಮಾಹಿತಿ ಸಂಗ್ರಹವನ್ನು ಒಳಗೊಂಡಿದ್ದು ಸಾವಿರಾರು ಪದಗಳಷ್ಟು ವಿಸ್ತಾರವಾಗಿರುತ್ತದೆ. ಯಾವುದೇ ವಿಷಯದ ಹಲವಾರು ಮಗ್ಗಲುಗಳನ್ನು ತೆರೆದಿಡುವ ಲೇಖನಗಳು ಜನಪರವೂ, ಪ್ರಗತಿಪರವೂ ಆಗಿರುತ್ತವೆ. ನನ್ನ ಮಿತ್ರರು ಹೇಳಿರುವ ಪ್ರಕಾರ ಈ ಪತ್ರಿಕೆಗೆ ಬರೆಯುವ ಲೇಖಕರು ಒಂದು ವರದಿಗೆ ಹಲವೊಮ್ಮೆ ತಿಂಗಳಾನುಗಟ್ಟಲೆ ಶ್ರಮಿಸುತ್ತಾರೆ.

ಕ್ಯಾರವಾನ್ ಪತ್ರಿಕೆಯ ಫೆಬ್ರವರಿ ತಿಂಗಳ ಮುಖಪುಟದ ವರದಿಯನ್ನು ಬರೆದಿರುವ ಲೀನಾ ಅವರೂ ತಮ್ಮ ಈ ವರದಿಯನ್ನು ತಯಾರಿಸಲು ತೆಗೆದು ಕೊಂಡ ಸಮಯ ಎರಡು ವರ್ಷ. ಅವರ ವರದಿ ಬರೋಬ್ಬರಿ 11,000 ಪದಗಳಷ್ಟು ಉದ್ದವಾಗಿದೆ.

ಯಾವ ಪ್ರಮುಖ ಮಾಧ್ಯಮವೂ ಮಾಡಿರದಿದ್ದನ್ನ ಸಾಧಿಸಿರುವುದಕ್ಕೆ ಕ್ಯಾರವಾನ್ ಪತ್ರಿಕೆಗೂ, ವಿನೋದ್ ಕೆ. ಜೋಸ್ ಮತ್ತು ಲೀನಾ ಗೀತಾ ರೆಘುನಾಥ್ ಅವರಿಗೂ ಹ್ಯಾಟ್ಸ್ ಆಫ್!

*********

ಇನ್ನು ಕೆಲವೇ ತಿಂಗಳುಗಳಲ್ಲಿ ಸಂಸತ್ತಿಗೆ ನಡೆಯುವ ಚುನಾವಣೆಯನ್ನು 'ಮೋದಿ ಅಲೆ'ಯ ಮೇಲೆ ಗೆದ್ದು ದೆಹಲಿಯಲ್ಲಿ ಅಧಿಕಾರ ಹಿಡಿಯುವ ಕನಸನ್ನು ಚೆಡ್ಡಿಗಳು ಕಾಣುತ್ತಿದ್ದರು. ಆದರೀಗ ಅವರ ಆಶಯಗಳಿಗೆ ತೊಡರಗಾಲುಗಳನ್ನು ಒಡ್ಡುವ ಒಂದೆರಡು ಬೆಳವಣಿಗೆಗಳು ನಡೆದಿವೆ. ಅದನ್ನು ಕಂಡು ಚೆಡ್ಡಿ ಪಾಳಯದಲ್ಲಿ ಗಾಬರಿ ಶುರುವಾಗಿದೆ.

ಮೊದಲನೆ ಬೆಳವಣಿಗೆ ದಿನದಿಂದ ದಿನಕ್ಕೆ ಏರುತ್ತಿರುವ ಆಮ್ ಆದ್ಮಿ ಪಕ್ಷದ ಜನಪ್ರಿಯತೆ. ದೆಹಲಿ ವಿಧಾನಸಭಾ ಚುನಾವಣೆಗಳ ಮುನ್ನ ಬಿಜೆಪಿ ಪಕ್ಷದ ನಾಯಕರು ಇದೇ ಆಮ್ ಆದ್ಮಿ ಪಕ್ಷವನ್ನು 'ಆಟಕ್ಕುಂಟು ಆದರೆ ಲೆಕ್ಕಕ್ಕಿಲ್ಲ' ಎಂಬಂತೆ ಲೇವಡಿ ಮಾಡುತ್ತಿದ್ದರು. ಆದರೆ ಯಾವಾಗ ಆಪ್ ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿತೋ, ಯಾವಾಗ ಕಾಂಗ್ರೆಸ್ ಬೆಂಬಲದೊಂದಿಗೆ ದೆಹಲಿಯಲ್ಲಿ ಅಧಿಕಾರವನ್ನೂ ಹಿಡಿಯಿತೋ ಆಗ ಬಿಜೆಪಿಗೆ ದೊಡ್ಡ ಶಾಕ್ ಆಗಿತ್ತು, ಯಾಕೆಂದರೆ ಆಪ್ ಕೇವಲ ಕಾಂಗ್ರೆಸ್‌ಗೆ ಮಣ್ಣುಮುಕ್ಕಿಸಿರಲಿಲ್ಲ, ಸ್ವತಃ ಬಿಜೆಪಿಯ ಮತಗಳಿಗೂ ಕನ್ನ ಹಾಕಿತ್ತು.

ಈಗ ಜಯಲಲಿತಾ ಕೂಡ ಬಿಜೆಪಿಗೆ ದೊಡ್ಡ ಶಾಕ್ ನೀಡಿದ್ದಾರೆ!

ಪಕ್ಕಾ ಜಾತಿವಾದಿಯೂ, ಮೋದಿ ಅಭಿಮಾನಿಯೂ ಆಗಿರುವ ಜಯಲಲಿತಾ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಾರೆ ಎಂಬ ನಿರೀಕ್ಷೆ ಚೆಡ್ಡಿಗಳದ್ದಾಗಿತ್ತು. ಆದರೆ ಜಯಲಲಿತಾ ಎಲ್ಲಕ್ಕಿಂತ ಮುಖ್ಯವಾಗಿ ಮಹತ್ವಾಕಾಂಕ್ಷಿ! ಪ್ರಧಾನಿ ಆಗುವ ಆಕೆಯ ಆಶಯದ ಮುಂದೆ ಬೇರೆ ಯಾರೂ ಮುಖ್ಯವಾಗುವುದಿಲ್ಲ ಎಂಬ ಸತ್ಯವನ್ನು ಚೆಡ್ಡಿಗಳು ಅರಿಯದೇ ಹೋದರು.

ಇತ್ತೀಚೆಗೆ ಕಮ್ಯೂನಿಸ್ಟರು ಜಯಲಲಿತಾ ಮುಂದೆ ತೃತೀಯ ರಂಗವನ್ನು ಕಟ್ಟುವ ಪ್ರಸ್ತಾಪ ಇಟ್ಟ ಕ್ಷಣದಲ್ಲೇ ಆಕೆಗೆ ಪ್ರಧಾನಿ ಆಗುವ ಅವಕಾಶ ಕಾಣಿಸಿತು. ಅತ್ತ ಕಾಂಗ್ರೆಸ್ ನೇತೃತ್ವದ ಯುಪಿಎ ಸೋತು, ಇತ್ತ ಮೋದಿ ನೇತೃತ್ವದ ಎನ್‌ಡಿಎ ಕೂಟಕ್ಕೆ 150ಕ್ಕಿಂತಲೂ ಹೆಚ್ಚು ಸೀಟುಗಳಲ್ಲಿ ಗೆಲುವ ಸಿಗದಿದ್ದರೆ; ಕಾಂಗ್ರೆಸ್ ಬೆಂಬಲಿತ ತೃತೀಯ ರಂಗದ ಪರವಾಗಿ ತಾನೇ ಪ್ರಧಾನಿ ಆಗುವ ಸಾಧ್ಯತೆಯ ಅರಿವಾಗಿದ್ದೇ ತಡ ಜಯಲಲಿತಾ ಸೈ ಅಂದಿದ್ದಾರೆ. ಇದು ಚೆಡ್ಡಿಗಳನ್ನು ದಂಗಾಗಿಸಿದೆ.

ಆ ಕಾರಣಕ್ಕೇ ಬಿಜೆಪಿಯ ನಾಯಕರೆಲ್ಲರೂ ನಿನ್ನೆ ತೃತೀಯ ರಂಗವನ್ನು ಲೇವಡಿ ಮಾಡಿದ್ದಾರೆ. ಮೋದಿ ಕೂಡ ಕೊಲ್ಕತ್ತಾದಲ್ಲಿ 'ತೃತೀಯ ರಂಗದಿಂದ ಮೂರನೆ ದರ್ಜೆ ರಾಷ್ಟ್ರ ಮಾತ್ರ ಸಾಧ್ಯ' ಎಂದು ಕೆಂಡಕಾರಿದ್ದಾನೆ.

ಚುನಾವಣೆಗಳಿಗೆ ಇನ್ನೂ ಸಮಯವಿದೆ. ಇಂದಿನಿಂದ ಅಲ್ಲಿಯತನಕ ಆಗುವ ರಾಜಕೀಯ ಬದಲಾವಣೆಗಳನ್ನು ಮತ್ತು ಮೈತ್ರಿಗಳನ್ನು ಊಹಿಸುವುದು ಕಷ್ಟ. ಆದರೂ ಚೆಡ್ಡಿಗಳಿಗೆ ಯಾಕೆ ಭೀತಿ ಆಗಿದೆ ಎಂದು ಸುಮ್ಮನೆ ನೋಡಿದರೆ ವಿಚಿತ್ರ ಸಾಧ್ಯತೆಯೊಂದು ಕಾಣಿಸುತ್ತದೆ.

## ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com


ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕಿದ್ದರೆ ಕನಿಷ್ಠ 272 ಸ್ಥಾನಗಳನ್ನು ಗೆಲ್ಲಬೇಕು. ಕೆಲವು ಸಮೀಕ್ಷೆಗಳನ್ನೂ ಪ್ರಕಾರ ಈ ಬಾರಿ ಕಾಂಗ್ರೆಸ್ 100 ಸೀಟುಗಳನ್ನು ಗೆಲ್ಲುವುದೇ ಕಷ್ಟ. ಇನ್ನು ಬಿಜೆಪಿ ನೇತೃತ್ವದ ಎನ್‌ಡಿಎ 150 ತಲುಪಬಹುದು ಎಂಬುದು ಅದೇ ಸಮೀಕ್ಷೆಗಳ ಅಂದಾಜು. ಹಾಗಾದರೆ ತೃತೀಯ ರಂಗಕ್ಕೆ ಎಷ್ಟು ಸಿಗಬಹುದು?


ಕೆಲವು ರಾಜಕೀಯ ಪಂಡಿತರ ಪ್ರಕಾರ ಜಯಲಲಿತಾ ಅವರು ತಮಿಳುನಾಡಿನಲ್ಲಿ 30-35 ಸೀಟುಗಳನ್ನು ಗೆಲ್ಲುವ ಶಕ್ತಿ ಹೊಂದಿದ್ದಾರೆ. (ಅದರಲ್ಲಿ ಈಗ ಚಿಂದಿಯಾಗಿರುವ ಪ್ರತಿಪಕ್ಷ ಡಿಎಂಕೆಯ ನೆರವೂ ಇರುತ್ತದೆ!) ಹಾಗೆಯೇ ಎಡಪಕ್ಷಗಳಾದ ಸಿಪಿಎಂ ಮತ್ತು ಸಿಪಿಐ ಒಟ್ಟು 20-25 ಸೀಟುಗಳನ್ನು ತಂದು ಕೊಡುತ್ತವೆ. ಬಿಜೆಪಿ ಇಲ್ಲದೆ ನಿತೀಶ್‌ಕುಮಾರ್ ಅವರು ಮೊದಲ ಬಾರಿಗೆ ಸಂಸತ್ ಚುನಾವಣೆ ಎದುರಿಸುತ್ತಿದ್ದರೂ ಅವರೂ ಬಿಹಾರದಲ್ಲಿ 30-10 ಸೀಟುಗಳನ್ನು ತಮ್ಮದಾಗಿಸಿಕೊಳ್ಳಬಹುದು. ಆಂಧ್ರದಲ್ಲಿ ಈಗ ಜಗನ್ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ಜೋರು. ಜಗನ್ ವೈಯಕ್ತಿಕವಾಗಿ ಕೋಮುವಾದಿ ವಿರೋಧಿ; ಅದರಲ್ಲೂ ಮೋದಿಯ ನಾಯಕತ್ವವನ್ನು ಆತ ಎಂದೂ ಒಪ್ಪಿಕೊಳ್ಳಲಾರ. ಆತ ಕೂಡ ಆಂಧ್ರದಲ್ಲಿ 20 ಸೀಟುಗಳನ್ನು ಗೆಲ್ಲಬಹುದು. ದೇವೇಗೌಡರ ಜಾತ್ಯತೀತ ಜನತಾದಳ ತಿಣುಕಾಡಿದರೆ ಹೆಚ್ಚೆಂದರೆ ಮೂರು ಸ್ಥಾನಗಳನ್ನು ಗಿಟ್ಟಿಸಬಹುದು. ಒಡಿಶಾದಲ್ಲಿ ನವೀನ್ ಪಟ್ನಾಯಕ್ ಇನ್ನೂ ತನ್ನ ನಿರ್ಧಾರವನ್ನು ಪ್ರಕಟಿಸಿಲ್ಲ. ಆದರೆ ಅವರೂ ತಮ್ಮ ರಾಜ್ಯದಲ್ಲಿ 15-20 ಸ್ಥಾನಗಳನ್ನು ಗೆಲ್ಲುವ ಶಕ್ತಿ ಹೊಂದಿದ್ದಾರೆ. ಅವರೂ ತೃತೀಯ ರಂಗದ ಭಾಗವಾದರೆ? ಈಗ ಕಾಂಗ್ರೆಸ್ ಜೊತೆ ಇರುವ ಶರದ್ ಪವಾರ್ ಅವರ ಎನ್‌ಸಿಪಿ ಸುಮಾರು ಹತ್ತು ಸ್ಥಾನಗಳನ್ನು ಗೆದ್ದು ಚುನಾವಣೆಯ ನಂತರ ಅಧಿಕಾರದ ಆಶೆಗೆ ಕಾಂಗ್ರೆಸ್‌ಗೆ ಕೈಕೊಡಬಹುದು. ಉತ್ತರ ಪ್ರದೇಶದಲ್ಲಿ ಈಗ ತೃತೀಯ ರಂಗದ ಭಾಗವಾಗಿರುವ ಸಮಾಜವಾದಿ ಪಕ್ಷ ಜನರ ಆಕ್ರೋಶಕ್ಕೆ ಗುರಿಯಾಗಿದೆ. ಅಲ್ಲಿ ಬಿಜೆಪಿ ಮತ್ತು ಮಾಯಾವತಿ ನೇತೃತ್ವದ ಬಿಎಸ್‌ಪಿ ನಡುವೆ ಸ್ಪರ್ಧೆ ಏರ್ಪಡಬಹುದು. ಹಾಗೊಮ್ಮೆ ಮಾಯಾವತಿ 20-30 ಸ್ಥಾನಗಳನ್ನು ಗೆದ್ದು ಆಕೆಯೂ ಚುನಾವಣೆಯ ನಂತರ ಬಿಜೆಪಿ ಅಥವಾ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಗಳಿಗೆ 'ನೋ' ಎಂದರೆ ಅಚ್ಚರಿ ಇಲ್ಲ.

ಇನ್ನು ಆಪ್ ಮರೆಯದಿರೋಣ. ಈ ಪಕ್ಷದ ಬಗ್ಗೆ ಈಗ ಬಿಜೆಪಿಯಲ್ಲಿ ಎಂತಹ ಭೀತಿ ಹುಟ್ಟಿದೆ ಎಂದರೆ ಅದಕ್ಕೆ ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ಗೆಲ್ಲುವ ಭರವಸೆಯೇ ಇಲ್ಲದಂತಾಗಿದೆ. ಆಕಸ್ಮಾತ್ ಆಪ್ ದೇಶದಾದ್ಯಂತ ನಗರಗಳ ಕ್ಷೇತ್ರಗಳಲ್ಲಿ ಹೊಸ ಅಲೆಯನ್ನು ಎಬ್ಬಿಸಿದರೆ ಅದು ಎಲ್ಲರ ನಿರೀಕ್ಷೆಗಳನ್ನು ಮೀರಿ ಹತ್ತಿರಹತ್ತಿರ 40 ಸೀಟುಗಳನ್ನು ಗೆದ್ದರೂ ಗೆಲ್ಲಬಹುದು!


ಇವೆಲ್ಲವನ್ನು ಲೆಕ್ಕ ಹಾಕಿದರೆ ಕಾಂಗ್ರೆಸ್-ಬಿಜೆಪಿ ಇತರರಿಗೆ ಹತ್ತಿರಹತ್ತಿರ 200 ಸ್ಥಾನಗಳು ಸಿಗಬಹುದು. ಸಿದ್ಧಾಂತಗಿದ್ಧಾಂತಗಳು ಬದಿಗಿರಲಿ. ಪ್ರತಿ ಪಕ್ಷದ ನಾಯಕರಿಗೆ 'ಪ್ರೊಗದಸ್ಥಾನ' ಹಣಕಾಸು, ರೈಲ್ವೆ, ಟೆಲಿಕಾಮ್ ತರಹದ ಇಲಾಖೆಗಳು ಸಿಗುತ್ತವೆಂದರೆ ಎಂತೆಂತಹ ಮೈತ್ರಿಗಳು ಏರ್ಪಡುತ್ತವೋ ಬಲ್ಲವರ್ಯಾರು?


ಅದಕ್ಕೇ ಚೆಡ್ಡಿಗಳಿಗೆ ಈಗ ಆತಂಕವಾಗಿರುವುದು!! ●


ವಿಶ್ವನಾಥ್


ರಾಮದಾಸ್


ಶೋಭಾ


ವಿಜಯಶಂಕರ್



# ಮೈಸೂರು-ಕೊಡಗು: ವಿಶ್ವನಾಥ್ ಸರ್ಕಸ್ ಮಾಡಬೇಕಿದೆ

ಲೋಕಸಭಾ ಚುನಾವಣೆ ಇನ್ನೇನು ಬರುತ್ತಿದೆ ಎನ್ನುತ್ತಿರುವಂತೆ, ರಾಜಕೀಯ ಪಕ್ಷಗಳ ಚಟುವಟಿಕೆಗಳು ಬಿರುಸುಗೊಳ್ಳುತ್ತಿವೆ. ಕರ್ನಾಟಕದಲ್ಲಿರುವ 28 ಕ್ಷೇತ್ರಗಳ ಪೈಕಿ, 20 ಕ್ಷೇತ್ರವನ್ನು ಗೆಲ್ಲುತ್ತೇವೆ ಎಂದು ಆಡಳಿತಾರೂಢ ಕಾಂಗ್ರೆಸ್ ಪಕ್ಷ ಹೇಳುತ್ತಿದೆ. ಸಮೀಕ್ಷೆಗಳು ಕೂಡ ಹಾಲಿ ಇರುವ 6ಕ್ಕೆ ಬದಲು 12ರಿಂದ 13 ಕ್ಷೇತ್ರಗಳು ಕಾಂಗ್ರೆಸಿಗೆ ದಕ್ಕಲಿದೆ ಎಂದು ಹೇಳುತ್ತಿವೆ. ಈ ಸಮೀಕ್ಷೆಗಳಲ್ಲಿ ಕೊಡಗು-ಮೈಸೂರು ಕ್ಷೇತ್ರವೂ ಒಳಗೊಂಡಿದೆಯೋ ತಿಳಿಯದು. ಈ ಕ್ಷೇತ್ರವಂತೂ ಕಾಂಗ್ರೆಸಿಗೆ ಪ್ರತಿಷ್ಠೆಯ ಕ್ಷೇತ್ರ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಬೇರೆ.

ಇಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಡುತ್ತದೋ ಅಥವಾ ನೇರ ಸ್ಪರ್ಧೆ ಇರುತ್ತದೋ ತಿಳಿಯದು. ಶ್ರೀಮತಿ ಪ್ರಮೋದಾದೇವಿ ಕಾಂಗ್ರೆಸಿನ ಅಭ್ಯರ್ಥಿಯಾಗುತ್ತಾರೆ ಎಂದು ತೇಲಿಬಿಡಲಾಗಿದೆ. ಇದರ ಜೊತೆಯಲ್ಲಿ ಕೊಡಗು-ಮೈಸೂರು ಕ್ಷೇತ್ರದ ನಂಟೇ ಇರದ, ಕೊಡಗು ಮೂಲದ ದೆಹಲಿ ನಿವಾಸಿ ಬ್ರಿಜೇಶ್ ಕಾಳಪ್ಪ ಅವರ ಹೆಸರನ್ನೂ ಮೆಲ್ಲಗೆ ತೇಲಿಬಿಡಲಾಗಿದೆ. ಬ್ರಿಜೇಶ್ ಈಗ ಕಾಂಗ್ರೆಸಿನ ವಕ್ತಾರ. ಕಪಿಲ್ ಸಿಬಲ್ ಅವರ ಆಪ್ತ ಹಾಗಾಗಿ ತಾನೂ ಸ್ಪರ್ಧೆಯಲ್ಲಿ ಇದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಅಂತಿಮವಾಗಿ ಕಾಂಗ್ರೆಸಿನಲ್ಲಿ ವಿಶ್ವನಾಥ್‌ರವರ ಸ್ಥಾನವೇ ಗಟ್ಟಿಯಾಗುವ ಸಾಧ್ಯತೆ ಇದೆ.

ಐವತ್ತು ತಿಂಗಳುಗಳ ಕಾಲ ಆರಾಮ ಜೀವಿಯಾಗಿ ಕಾಲ ಕಳೆದ ಕೊಡಗು-ಮೈಸೂರು ಸಂಸದ ಅಡಗೂರು ವಿಶ್ವನಾಥ್ ಈಗ ಅಂಡು ಸುಟ್ಟಂತೆ ಓಡಾಡುತ್ತಿದ್ದಾರೆ. ತಾನೇ ಮತ್ತೆ ಈ ಕ್ಷೇತ್ರದ ಅಭ್ಯರ್ಥಿ ಎಂದು ಸ್ವಯಂ ಘೋಷಿಸಿಕೊಂಡಿರುವ ವಿಶ್ವನಾಥ್, ಸುಮಾರು ಮೂರು ವರ್ಷಗಳ ಕಾಲ ಸಂಸದರಾಗಿ ಬಹಳ ನಿರ್ಲಿಪ್ತರಾಗಿದ್ದರು. ಮುಂದೆ ಅವರು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ, ಹಾಗಾಗಿ ಸಂಸತ್ ಕ್ಷೇತ್ರದ ಬಗ್ಗೆ ಒಲವು ತೋರುತ್ತಿಲ್ಲ ಎಂದು ಹೇಳಲಾಗಿತ್ತು. ಆದರೆ ವಿಧಾನಸಭೆ ಚುನಾವಣೆಯಲ್ಲಿ ಅವರು ಸ್ಪರ್ಧಿಸದೇ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ಮತ್ತೊಮ್ಮೆ ಲೋಕಸಭೆಗೆ ತೆರಳುವ ಆಸೆಯನ್ನು ಚಿಗುರಿಸಿಕೊಂಡು ಜಿಗಿದಾಡುತ್ತಿದ್ದಾರೆ. ಮೈಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಕೊಡಗು ಎಂದು ಹೇಳಿಕೊಂಡು, ಈಗ ಪ್ರತಿನಿತ್ಯ ಜನರಿಗೆ ದರ್ಶನ ನೀಡುತ್ತಿದ್ದಾರೆ. ಯಾವತ್ತೂ ಚಾಲನೆಯಲ್ಲಿ ಇರದೇ ಇದ್ದಂತಹ ಅವರ ಮೊಬೈಲ್ ಕೂಡ ಈಗ ತಟ್ಟೆಂದು ಉತ್ತರಿಸುತ್ತಿದೆ. ಯಾವುದೇ ಕಾರ್ಯಕ್ರಮವನ್ನು ತಪ್ಪಿಸಿಕೊಳ್ಳುತ್ತಿಲ್ಲ, ದೇವಾಲಯದ ಉದ್ಘಾಟನೆಯಾಗಲಿ, ಕಾರ್ಮಿಕ ಸಂಘದ ಸಭೆಯಾಗಲಿ, ಮೈಸೂರಿನಲ್ಲೇ ಇರಲಿ, ಕೊಡಗಿನಲ್ಲಿಯೇ ಇರಲಿ, ಭಾಗವಹಿಸಿಯೇ ಸಿದ್ಧ.

ಹಾಗೆ ನೋಡಿದರೆ ವಿಶ್ವನಾಥ್ ಕರ್ನಾಟಕದಲ್ಲಿರುವ ಕೆಲವೇ ಕೆಲವು ಸೂಕ್ಷ್ಮ ಸಂವೇದಿ ರಾಜಕಾರಣಿಗಳ ಪೈಕಿ ಒಬ್ಬರು. ತನ್ನ ಜಾತ್ಯತೀತ ಧೋರಣೆಯನ್ನು ಎಂದೂ ರಾಜಿ ಮಾಡಿಕೊಳ್ಳದ ವ್ಯಕ್ತಿತ್ವ. ಕೆಲವೊಮ್ಮೆ ಸತ್ಯವನ್ನು ಆಡಿ ಅರಗಿಸಿಕೊಂಡಂತಹ ವ್ಯಕ್ತಿ, ತನ್ನ ಪಕ್ಷದ ವಿರುದ್ಧವೇ ಹೇಳಿಕೆಯನ್ನೂ ನೀಡಿ, ಪಕ್ಷದಲ್ಲಿಯೇ ಉಳಿದುಕೊಂಡಿರುವ ಮನುಷ್ಯ. ಕೆಲವೇ ದಿನಗಳ ಹಿಂದೆ ವಿಧಾನಸೌಧವನ್ನು "ಮಾಲ್" ಎಂದು ಕರೆದು, ಅಲ್ಲಿ ಏನು ಬೇಕಾದರೂ ಖರೀದಿಗೆ ಸಿಗುತ್ತದೆ ಎಂದು ತಮ್ಮ ಪಕ್ಷ ಅಧಿಕಾರದಲ್ಲಿ ಇರುವಾಗಲೇ ಹೇಳುವ ಧೈರ್ಯ ಮಾಡಿದ ವ್ಯಕ್ತಿ. ಆದರೆ ಇವಿಷ್ಟೇ ಚುನಾವಣೆಯಲ್ಲಿ ಗೆಲುವು ತರಬಲ್ಲದ್ದಲ್ಲ. ಆಗಾಗ ದೇವೇಗೌಡರನ್ನು ಮತ್ತು ಜಾತ್ಯತೀತ ಜನತಾದಳವನ್ನು ಟೀಕಿಸುತ್ತಾ, ದೃಶ್ಯ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ವಿಶ್ವನಾಥ್, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಅತ್ಯಂತ ಪ್ರಭಾವಿ ಸಂಸದರಾಗಿ ಹೊರಹೊಮ್ಮಿದ್ದು ಸತ್ಯ. ಆದರೆ ಇದರ ಉಪಯೋಗವನ್ನು ವಿಶ್ವನಾಥ್ ಮಾಡಲೇ ಇಲ್ಲ. ಕ್ಷೇತ್ರದ ಅಭಿವೃದ್ಧಿಗಾಗಲಿ, ಪಕ್ಷದ ಬೆಳವಣಿಗೆಗಾಗಲಿ ತನ್ನ ಕೊಡುಗೆಯನ್ನು ನೀಡಲೇ ಇಲ್ಲ. ಸರ್ಕಾರದ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳೇ ತನ್ನ ಕಾರ್ಯಕ್ರಮ ಎಂದು ಸಮರ್ಥಿಸಿಕೊಳ್ಳುತ್ತಾರೆ. ತನ್ನ ವಿಶೇಷ ಕೊಡುಗೆಯ ಬಗ್ಗೆ ಮೌನ ವಹಿಸುತ್ತಾರೆ.

ಇಷ್ಟಾದರೂ ತಾನೇ ಮತ್ತೊಮ್ಮೆ ಸ್ಪರ್ಧಿಸುತ್ತೇನೆ ಎಂದು ಹೇಳಿಕೊಂಡು ವಿಶ್ವನಾಥ್ ಓಡಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಅತ್ಯಲ್ಪ ಮತದ ಅಂತರದಿಂದ ಗೆದ್ದಿದ್ದರು. ಆಗ ತ್ರಿಕೋನ ಸ್ಪರ್ಧೆ ಇತ್ತು, ಬಿಜೆಪಿಯಿಂದ ವಿಜಯಶಂಕರ್ ಸ್ಪರ್ಧಿಸಿದ್ದರೆ, ಬಿ.ಎ. ಜೀವಿಜಯ ದಳದಿಂದ ಸ್ಪರ್ಧಿಸಿದ್ದರು. ಹಾಗಾಗಿ ವಿಶ್ವನಾಥ್ ಅವರಿಗೆ ಪ್ರಯಾಸದ ಗೆಲುವು, ಜೀವಿಜಯ ಸ್ಪರ್ಧೆಯಿಂದ ಲಭಿಸಿತ್ತು. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಇದ್ದ ಕಾರಣ, ರಾಜ್ಯದಲ್ಲಿ ಆಗ ಬಿಜೆಪಿ ಸರ್ಕಾರ ಇದ್ದರೂ, ತನ್ನ ಕ್ಷೇತ್ರಕ್ಕೆ ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಿಸಬಹುದು ಎಂಬ ಭಾವನೆ ಜನರಲ್ಲಿ ಇತ್ತು. ವಿಶ್ವನಾಥ್ ಈ ಭರವಸೆಯನ್ನು ಹುಸಿಯಾಗಿಸಿದ್ದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರವಾದರೂ ಒಂದಷ್ಟು ಅಭಿವೃದ್ಧಿಯನ್ನು ಕಾಣಬಹುದು, ಜೊತೆಗೆ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೈತನ್ಯವನ್ನು ನೀಡಬಹುದು ಎಂಬುದನ್ನು ಕೂಡ ವಿಶ್ವನಾಥ್ ಹುಸಿಯಾಗಿಸಿದರು. ಕೆಲವೊಂದು ಪ್ರಮುಖ ಘಟ್ಟಗಳಲ್ಲಿ ತನ್ನ ಬಾಯಿ ತೆರೆಯಲೇ ಇಲ್ಲ. ಕೊಡಗಿನ ಮಟ್ಟಿಗಂತೂ ಇದರ ಲಾಭವನ್ನು ಆಗ ವಿಧಾನಸಭಾ ಅಧ್ಯಕ್ಷರಾಗಿದ್ದ ಕೆ.ಜಿ. ಬೋಪಯ್ಯ ಹಾಗೂ ಶಾಸಕರಾಗಿದ್ದ ಅಪ್ಪಚ್ಚು ರಂಜನ್ ಪಡೆದರು. ಕೇಂದ್ರ ಸರ್ಕಾರದ ಯೋಜನೆಗಳಿಗೆ ಕೂಡ ಬೋಪಯ್ಯ ಹಾಗೂ ರಂಜನ್, ವಿಶ್ವನಾಥ್‌ರವರನ್ನು ಕ್ಯಾರೇ ಅನ್ನದೆ, ಶಂಕುಸ್ಥಾಪನೆ, ಉದ್ಘಾಟನೆ ಮಾಡುತ್ತಾ ಹೋದರು. ಅದರ ವಿರುದ್ಧ ಪ್ರತಿಭಟಿಸುವುದು ಹಾಗಿರಲಿ, ಮಾತನಾಡುವ ತಾಕತ್ತನ್ನು ಕೂಡ ವಿಶ್ವನಾಥ್ ತೋರಲಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಕರೆದ ವೇಳೆಯಲ್ಲಿಯೇ ಉದ್ದೇಶಪೂರ್ವಕವಾಗಿ ಬೆಂಗಳೂರಿನಲ್ಲಿ ಅಧಿಕಾರಿಗಳ ಸಭೆಯನ್ನು ನಡೆಸುವ ಕೆಲಸವು ಹಿಂದಿನ ಸರ್ಕಾರದಿಂದ ಆಗಿತ್ತು, ಅದನ್ನೂ ಕೂಡ ವಿರೋಧಿಸಲು ವಿಶ್ವನಾಥ್ ಅವರಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಪ್ರಭಾವಿ ಸಂಸದ ವಿಶ್ವನಾಥ್ ಅತ್ಯಂತ ದುರ್ಬಲ ಸಂಸದ ಎನ್ನುವಂತಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಜಿ.ಬೋಪಯ್ಯ ವಿರುದ್ಧ ಬಳಸಬಹುದಾಗಿದ್ದ ಯಾವುದೇ ಅಸ್ತ್ರವನ್ನು ಬಳಸದೆ, ಅವರು ನಿರಾಯಾಸವಾಗಿ ಗೆಲ್ಲುವ ಅವಕಾಶವನ್ನು ಕಾಂಗ್ರೆಸ್ ಪಕ್ಷ ಮಾಡಿಕೊಟ್ಟಿತು. ಚುನಾವಣೆಯ ಚರ್ಚೆಯ ವಿಚಾರವಾಗಬೇಕಾಗಿದ್ದ ಶಾಸಕರುಗಳ ಸದಸ್ಯತ್ವದ ವಜಾ, ಆ ನಂತರ ಸರ್ವೋಚ್ಚ ನ್ಯಾಯಾಲಯ ವಿಧಾನಸಭಾ ಅಧ್ಯಕ್ಷರಿಗೆ ಛೀಮಾರಿ ಹಾಕಿದ್ದು ಚುನಾವಣೆಯ ವಿಚಾರವೇ ಆಗಿರಲಿಲ್ಲ. ಅವೆಲ್ಲಾ ಚರ್ಚೆಯ ವಿಚಾರವಾಗಿದ್ದರೆ, ಕೊಡಗಿನ ಎರಡೂ ಕ್ಷೇತ್ರವನ್ನು ಕಾಂಗ್ರೆಸ್ ಗೆಲ್ಲಬಹುದಿತ್ತು. ಆ ರಾಜಕಾರಣ ಮಾಡುವಲ್ಲಿ ವಿಶ್ವನಾಥ್ ನೇತೃತ್ವ ವಿಫಲವಾಗಿದ್ದು ಕೊಡಗಿನಲ್ಲಿ ಚುನಾವಣೆಯ ನಂತರ ಕಾಂಗ್ರೆಸ್ ಮತ್ತಷ್ಟು ದುರ್ಬಲವಾಗಲು ಕಾರಣವಾಯಿತು.

ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೇರಳ-ಕರ್ನಾಟಕವನ್ನು ಜೋಡಿಸುವ, ಮೈಸೂರು-ಕೇರಳ ರಸ್ತೆ, ಹುಣಸೂರಿನಿಂದ ವಿರಾಜಪೇಟೆಯವರೆಗೂ ಕಳೆದ ಐದು ವರ್ಷದಿಂದ ವಾಹನ ಸಂಚರಿಸಲು ಅಯೋಗ್ಯವಾದ ಸ್ಥಿತಿಯಲ್ಲಿ ಇದ್ದು, ಇದಕ್ಕೆ ಚಾಲನೆ ನೀಡಲು ಮಾತ್ರ ವಿಶ್ವನಾಥ್‌ರವರಿಗೆ ಸಾಧ್ಯವಾಗಿದೆ. ಈ ಕಾಮಗಾರಿ ನಡೆಯುತ್ತಿರುವ ವೇಗ ಗಮನಿಸಿದರೆ ಇದೂ ಪಂಚವಾರ್ಷಿಕ ಯೋಜನೆ ಎಂಬಂತೆ ಕಾಣುತ್ತದೆ. ಮುಖ್ಯಮಂತ್ರಿಗಳು, ಲೋಕೋಪಯೋಗಿ ಸಚಿವರು ಹಾಗೂ ವಿಶ್ವನಾಥ್ ಅವರು ಒಂದೇ ಕ್ಷೇತ್ರದವರಾಗಿದ್ದರೂ ಕೂಡ, ಅವರ ಕ್ಷೇತ್ರದಲ್ಲಿಯೇ ಬರುವ ಈ ಪ್ರಮುಖ ರಸ್ತೆ ಕಾಮಗಾರಿ ಮಾಡಿಸಲು ಚುನಾವಣೆಯ ವೇಳೆಯಲ್ಲಿಯೂ ಸಾಧ್ಯವಾಗದಿದ್ದರೆ, ಇವರ ಪ್ರಭಾವ ಎಷ್ಟಿದೆ ಎಂಬುದನ್ನು ಅಂದಾಜಿಸಬಹುದು.

ಸಂಸತ್ತಿನಲ್ಲಿ ತನ್ನ ಕ್ಷೇತ್ರದ ಬಗ್ಗೆ ಏನು ಮಾತನಾಡಿದ್ದಾರೋ ಬಹಿರಂಗವಾಗಿಲ್ಲ, ಆದರೆ ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಬರುವಂತಹ ಡಾ। ಕಸ್ತೂರಿ ರಂಗನ್ ಸಮಿತಿ ವರದಿಯ ಅನುಷ್ಠಾನದಿಂದ ಆಗಬಲ್ಲ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಸಮರ್ಥವಾಗಿ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವ ಅವಕಾಶವನ್ನು ವಿಶ್ವನಾಥ್ ಕೈಚೆಲ್ಲಿಕೊಂಡರು. ಮೈಸೂರು ಜಿಲ್ಲೆ ಹಾಗೂ ಕೊಡಗು ಜಿಲ್ಲೆಯಲ್ಲಿ ಈ ವರದಿ ಅನುಷ್ಠಾನದಿಂದ ಸಮಸ್ಯೆ ಆಗುತ್ತದೆ. ಹಾಗಾಗಿ ಇದರ ಬಗ್ಗೆ ಅವರು ಹೆಚ್ಚಿನ ಕಾಳಜಿ ತೋರಿದ್ದರೆ, ಮುಂದಿನ ಚುನಾವಣೆಯಲ್ಲಿ ಅವರಿಗೆ ಹಾದಿ ಸುಗಮವಾಗುತ್ತಿತ್ತು. ಇಂತಹ ಜನಪರ ವಿಚಾರಗಳಿಗೆ ಸ್ಪಂದಿಸದ ವಿಶ್ವನಾಥ್, ಕೊಡಗು ಜಿಲ್ಲೆಯಲ್ಲಿ ಒಂದು ವರ್ಗಕ್ಕೆ ಸೀಮಿತವಾಗಿ ನಡೆಯುತ್ತಿರುವ ಕೊಡಗು ಸ್ವಾಯತ್ತತೆ ಹೋರಾಟಗಾರರನ್ನು ರಾಷ್ಟ್ರಪತಿಗಳ ಭೇಟಿಗೆ ಕರೆದುಕೊಂಡು ಹೋಗಿ, ಮತ್ತೊಂದು ವರ್ಗದ ಕೋಪಕ್ಕೆ ತುತ್ತಾಗಿದ್ದಾರೆ. ಇದರ ಅರಿವು ಇದ್ದರೂ ಕೂಡ ಏನೂ ಆಗದಂತೆ ವರ್ತಿಸುತ್ತಿದ್ದಾರೆ. ಇದಕ್ಕೆ ವಿಶ್ವನಾಥ್ ಭಾರಿ ಬೆಲೆ ತೆರಬೇಕಾಗಬಹುದು.

ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ರಾಮ್‌ದಾಸ್,-ಶೋಭಾ ಕರಂದ್ಲಾಜೆ ಅಥವಾ ವಿಜಯಶಂಕರ್ ಅಭ್ಯರ್ಥಿಯಾಗಬಹುದು ಎಂಬ ಲೆಕ್ಕಾಚಾರಗಳು ಇವೆ. ಜಾತ್ಯತೀತ ಜನತಾದಳದಿಂದ ಯಾರು ಸ್ಪರ್ಧಿಸಬಹುದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ದೇವೇಗೌಡರಿಗೆ ಹೇಗಾದರೂ ಮಾಡಿ ವಿಶ್ವನಾಥ್ ಅವರನ್ನು ಸೋಲಿಸಲೇಬೇಕು ಎಂಬ ಭಾವನೆ ಇದೆ. ಹಾಗಾಗಿ ದಳದಿಂದ ಒಂದು ಡಮ್ಮಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ, ಶೋಭಾ ಸ್ಪರ್ಧಿಸಿದರೆ, ಆಕೆಯನ್ನು ಪರೋಕ್ಷವಾಗಿ ಬೆಂಬಲಿಸಿ ತಮ್ಮ ಒಕ್ಕಲಿಗ ಪ್ರೇಮವನ್ನು ಪ್ರದರ್ಶಿಸಿಕೊಳ್ಳುವ ಸಾಧ್ಯತೆ ಇದೆ. ರಾಮ್‌ದಾಸ್‌ಗೆ ಅವಕಾಶ ದೊರೆತರೆ, ವಿಶ್ವನಾಥ್ ಅವರಿಗೆ ಸ್ವಲ್ಪ ಪ್ರಮಾಣದ ಲಾಭವಾಗಬಹುದು ಎಂದು ಹೇಳಲಾಗುತ್ತಿದೆ.

ಈ ಕ್ಷೇತ್ರದಲ್ಲಿ ಮೋದಿ ಪ್ರಭಾವವಾಗಲಿ, ರಾಹುಲ್ ಪ್ರಭಾವವಾಗಲಿ ಇಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಈ ಕ್ಷೇತ್ರ ಪ್ರತಿಷ್ಠೆಯ ಕ್ಷೇತ್ರವಾಗಬಹುದು. ತಾನು ಪ್ರತಿನಿಧಿಸುವ ಕ್ಷೇತ್ರದ ಸಂಸದ ಸ್ಥಾನ ಇದಾಗಿರುವುದರಿಂದ ಮತ್ತು ತನ್ನ ಜನಾಂಗದ ವ್ಯಕ್ತಿಯೇ ವಿಶ್ವನಾಥ್ ಆಗಿರುವುದರಿಂದ, ಜೊತೆಯಲ್ಲಿ ತನ್ನನ್ನು ಕಾಂಗ್ರೆಸಿಗೆ ಕರೆ ತಂದು, ಮುಖ್ಯಮಂತ್ರಿಯಾಗಿಸಲು ಸಹಕರಿಸಿದ ವಿಶ್ವನಾಥ್ ಅವರ ಋಣ ತೀರಿಸುವ ಅವಕಾಶ ಇದು. ಇದನ್ನು ಅವರು ಹೇಗೆ ನಿಭಾಯಿಸುತ್ತಾರೆ ತಿಳಿಯದು.

ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷ ಪ್ರಬಲವಾಗಿದ್ದರೂ ಕೊಡಗಿನಲ್ಲಿ ಕಾಂಗ್ರೆಸ್ ಅತ್ಯಂತ ದುರ್ಬಲವಾಗಿದೆ. ಜೊತೆಗೆ ಗುಂಪುಗಾರಿಕೆಯಿಂದ ಹೈರಾಣವಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟು ಆಕಾಂಕ್ಷಿಗಳಾಗಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ ಸೇರಿದಂತೆ, ಹಲವರು ತಮಗೆ ಟಿಕೆಟು ದೊರೆಯಲು ವಿಶ್ವನಾಥ್ ಸಹಕರಿಸಲಿಲ್ಲ ಎಂಬ ಕಾರಣಕ್ಕೆ ಅವರನ್ನು ಸೋಲಿಸಲು ಟೊಂಕಕಟ್ಟಿ ನಿಂತಿದ್ದಾರೆ. ಬಿಜೆಪಿಯಲ್ಲಿ ಇಂತಹ ಯಾವುದೇ ಸೂಚನೆಗಳು ಇಲ್ಲ. ಶೋಭಾಗೆ ಟಿಕೆಟು ನೀಡಿದರೆ, ಮೂಲ ಬಿಜೆಪಿಯವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಯತ್ನ ನಡೆಸುತ್ತಾರೋ ತಿಳಿಯದು. ಸದ್ಯದ ಪರಿಸ್ಥಿತಿಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಯಡಿಯೂರಪ್ಪ ಬಿಜೆಪಿಯಲ್ಲಿ ಸಂತೋಷವಾಗಿ ಇಲ್ಲ. ಅಂದರೆ ಅವರು ನೆನೆದುಕೊಂಡಂತೆ ನಡೆಯುತ್ತಿಲ್ಲ. ಹಾಗಾಗಿ ಅವರ ಪರಮಾಪ್ತೆ ಶೋಭಾ ಸ್ಪರ್ಧಿಸಿದರೆ ಯಾವ ತಿರುವು ಪಕ್ಷದಲ್ಲಿ ಆಗುತ್ತದೆ ಎಂಬುದು ಹೇಳಲು ಕಾಲ ಪರಿಪಕ್ವವಾಗಿಲ್ಲ. ಕರ್ನಾಟಕದಲ್ಲಿ ಅಧಿಕಾರವನ್ನು ಕಳೆದುಕೊಂಡಿರುವ ಬಿಜೆಪಿಗೆ ಈಗ ಯಾವುದಾದರೂ ಒಂದು ಅಧಿಕಾರ ಬೇಕಾಗಿದೆ. ಹಾಗಾಗಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಪ್ರಯತ್ನಗಳನ್ನು ನಡೆಸುವ ಸಾಧ್ಯತೆಯೇ ಹೆಚ್ಚು.

ಕೊಡಗು ಜಿಲ್ಲೆಯ ಮಟ್ಟಿಗೆ ಈಗಲೂ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿ ಇದೆ ಎಂಬ ಭಾವನೆ ಬರುವ ರೀತಿಯಲ್ಲಿ ಕೆ.ಜಿ.ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ವರ್ತಿಸುತ್ತಿದ್ದಾರೆ. ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಮೇಲೆ ಕಾಂಗ್ರೆಸ್ ಪಕ್ಷಕ್ಕೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತಿಲ್ಲ. ಇತ್ತೀಚೆಗೆ ನಡೆದಂತಹ ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಜಾ ಕುಶಾಲಪ್ಪ ಅವರ ಮೇಲಿನ ಕೊಲೆ ಯತ್ನ ಪ್ರಕರಣದಲ್ಲಿ ಪೊಲೀಸರು ಬಿಜೆಪಿಯ ಅಣತಿಯಂತೆಯೇ ಕಾರ್ಯ ನಿರ್ವಹಿಸುತ್ತಿರುವುದು ಜಗಜ್ಜಾಹೀರಾಗಿದೆ. ಇಲ್ಲಿ ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದು, ರಾಜ್ಯ ಗೃಹ ಸಚಿವ ಕೆ.ಜೆ.ಜಾರ್ಜ್. ಪೊಲೀಸರು ಅವರಿಗೆ ಸವಾಲ್ ಹಾಕುವ ಸ್ಥಿತಿಯಲ್ಲಿ ಕಾರ್ಯಾಚರಣೆ ಮಾಡುತ್ತಿದ್ದಾರೆ. ಅಂದರೆ ಆಡಳಿತವನ್ನು ನಡೆಸಲು ಕಾಂಗ್ರೆಸ್ ಪಕ್ಷ ಬಿಜೆಪಿಗೆ ಬಿಟ್ಟುಕೊಟ್ಟಿದ್ದು ಈ ಪರಿಸ್ಥಿತಿಯಲ್ಲಿ ವಿಶ್ವನಾಥ್ ಮತ್ತೊಮ್ಮೆ ಹೇಗೆ ಚುನಾಯಿತರಾಗಲು ಸರ್ಕಸ್ ಹಾಗೂ ಗಿಮಿಕ್ ಮಾಡಬಹುದು ಎಂಬುದನ್ನು ನೋಡಬೇಕಾಗಿದೆ.

• ಮನು ಶೆಣೈ


# ಕರಾವಳಿ: ಟಿಕೆಟ್ ಸಂಕಟದಲ್ಲಿ ಸಂಘ ಪರಿವಾರ!

**ಸಂಘ ಪರಿವಾರಕ್ಕೆ ಕರಾವಳಿಯಲ್ಲಿ ಪ್ರಯೋಗಿಸಿದ ಅತಿರೇಕದ ಮತಾಂಧತೆಯೇ ಮಗ್ಗಲು ಮುಳ್ಳಾಗಿ ಕಾಡುತ್ತಿದೆ. ಹಿಂದೂತ್ವ ಕೆರಳಿಸಿ ಗೆಲ್ಲುವ 'ತಾಕತ್ತು' ಯಾರಿಗಿದೆ ಎಂಬ ಹುಡುಕಾಟ ನಡೆದಿದೆ. ಈ ಬಾರಿ ಕರಾವಳಿಯ ಮೂರೂ ಕ್ಷೇತ್ರಗಳಲ್ಲಿ ಗೆಲ್ಲುವುದು ಅಷ್ಟು ಸುಲಭ ಅಲ್ಲವೆಂಬುದು ಮನದಟ್ಟಾಗಿರುವ ಸಂಘ ಪರಿವಾರದ ಪರಾಕ್ರಮಿಗಳ ಟಿಕೆಟ್ ಸಂಕಟ ದಿನಕ್ಕೊಂದು ಆಯಾಮ ಪಡೆಯುತ್ತಿದೆ.**

ಕರಾವಳಿಯನ್ನು 'ಕರ್ಮ' ಕ್ಷೇತ್ರ ಮಾಡಿಕೊಂಡಿರುವ ...ಪರಿವಾರದ ಮೇಲೀಗ ಲೋಕಸಭೆ ಚುನಾವಣೆಯ ...ಕಾರಣ ಆವಾಹನೆ ಆಗಿದೆ! ಊರೂರಿಗೆ ಬೆಂಕಿ ...ಮ್ಮೆ ಕಾಯಿಸಿಕೊಳ್ಳುವ ಸಂಘ ಸಿದ್ಧಾಂತ ಬದ್ಧತೆಯ ...ರ್ಥಿಗಳ ಆಯ್ಕೆಗೆ ಆರೆಸ್ಸೆಸ್ ಹಿಕಮತ್ತುದಾರರು ಕಸರತ್ತು ...ಡುತ್ತಿದ್ದಾರೆ. ಕರಾವಳಿ ಬಿಜೆಪಿಯ ರಿಂಗ್ ಮಾಸ್ಟರ್ ...ಕ್ಕೆ ಪ್ರಭಾಕರ್ ಭಟ್ಟನ ಬಳಗ ತಲೆ ಕೆಡಿಸಿಕೊಂಡು ...ದೆ. ದಕ್ಷಿಣ ಕನ್ನಡ, ಉಡುಪಿ-ಚಿಕ್ಕಮಗಳೂರು ಮತ್ತು ...ರ ಕನ್ನಡ ಲೋಕಸಭೆ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ...ಡಬೇಕೆಂದು ಗೊತ್ತಾಗದೆ ಚಡಪಡಿಸುತ್ತಿದೆ. ಹಿಂದೂತ್ವ ...ಸಿ ಗೆಲ್ಲುವ 'ತಾಕತ್ತು' ಯಾರಿಗಿದೆ ಎಂಬ ಹುಡುಕಾಟ

ಬಚಾವಾಗಿದ್ದು ಬರೀ 27 ಸಾವಿರ ಮತದಂತರದಿಂದಷ್ಟೆ! ಸದಾ ಸಿಎಂ ಆದ ಬಳಿಕ ತೆರವಾದ ಈ ಕ್ಷೇತ್ರದಲ್ಲಿ ಬಿಜೆಪಿ ಬರೋಬ್ಬರಿ 50 ಸಾವಿರ ಮತದಂತರದಲ್ಲಿ ಮಣ್ಣು ಮುಕ್ಕಿತ್ತು. ಇಂಥ ಪ್ರತಿಕೂಲ ಕ್ಷೇತ್ರದಲ್ಲಿ ಸ್ಪರ್ಧಿಸುವ ಧೈರ್ಯ ಸದಾಗೆ ಎಲ್ಲಿಂದ ಬಂದೀತು? ಅದೂ ಜನ ಬಳಕೆಯ ಶಕ್ತಿಶಾಲಿ ಸಂಸದ ಜಯಪ್ರಕಾಶ್ ಹೆಗ್ಡೆ ಎದುರು ಸೆಣಸಾಟ ಈ ಪೊಕ್ಕು ಪುಢಾರಿಯಿಂದ ಸಾಧ್ಯವಾ?


ಬಿಜೆಪಿ-ಆರೆಸೆಸ್ ಟಿಕೆಟ್ ಹಂಚುವ ಕಮಿಟಿ ಮುಂದೆ ಈಗ ಉಳಿದಿರುವುದು ಚಿಕ್ಕಮಗಳೂರು ಎಮ್ಮೆಲ್ಲೆ ಸಿ.ಟಿ. ರವಿ ಎಂಬ ಬಾಯಿಬಡುಕ ಗೋಲ್‌ಮಾಲ್ ವೀರ, ಯಡ್ಡಿಯ ಪರಮಾಪ್ತೆ ಶೋಭಾ ಕರಂದ್ಲಾಜೆ ಮತ್ತು ಹಿಂದೂತ್ವ




ಜೋರಾಗಿದೆ. ಅನಂತ್ಮಾಣಿ ನಾಲ್ಕು ಬಾರಿ ಆಯ್ಕೆಯಾದರೂ ಕ್ಷೇತ್ರಕ್ಕೆ ಮೂರು ಬಿಲ್ಲಿ ಪ್ರಯೋಜನ ಆಗಲಿಲ್ಲ ಎಂಬುದೊಂದೇ ಅಲ್ಲ, ಆತ ಭ್ರಷ್ಟಾಚಾರ-ಅಕ್ರಮ ಆಸ್ತಿ


ಸಿಂಪಥಿ ಇಲ್ಲ, ಈತ ಪಾರ್ಟಿಗೊಂದು ಹೊರೆ ಎಂಬ ಭಾವನೆ ಬಂದಿದೆ. ಒಂದೂ ಕಾಲುದಶಕದ ಎಂಪಿಗಿರಿಯಲ್ಲಿ ಆತ ಜನರತ್ತಲೂ ತಿರುಗಿ ನೋಡಿದ್ದಿಲ್ಲ, ಯಾವ ಸಮಸ್ಯೆಗೂ ಸ್ಪಂದಿಸದೆ, ಏನು ಹೇಳಿದರೂ "ಇದು ನನ್ನ ಕೆಲ್ಸ ಅಲ್ಲಾರಿ... ಎಮ್ಮೆಲ್ಲೆಗಳದು..." ಎಂದು ಠೇಂಕರಿಸುತ್ತಿದ್ದ ಅನಂತ್ಮಾಣಿ ಪಕ್ಷದ-ಜನರ ನಡುವೆ ತಿರಸ್ಕಾರಕ್ಕೆ ತುತ್ತಾಗಿದ್ದಾನೆ.

ಸಂಘ ಪರಿವಾರದ ಹಿರಿಯರಿಗಂತೂ ಈ ಉದ್ಧಟತನ ವಿಕೃತ ಹಿಂದೂತ್ವ ತಲೆಬೇನೆಯಂತಾಗಿದೆ. ಈ ಹಿರಿಯರೇ ಈಗ ಸಚ್ಚಿದಾನಂದ ಹೆಗಡೆ ಅಥವಾ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಹೆಸರನ್ನು ಪರಿಶೀಲಿಸುತ್ತಿದ್ದಾರೆ. ತನ್ನ ವಾರಿಗೆಯ ಮಾಜಿ ಡಿಸಿಎಂ ಅಶೋಕ್, ಸಿ.ಟಿ. ರವಿ, ಯಡ್ಡಿ... ಮುಂತಾದವರು ಎಂಪಿ ಟಿಕೆಟ್ ಬೇಡಿಕೆ ಇಡುತ್ತಿರುವಾಗ ತಾನೇಕೆ ಒಂದು ಕೈ ನೋಡಬಾರದೆಂಬ ಆಸೆ ಕಾಗೇರಿಗೆ. ಬಿಜೆಪಿಗೆ ಈತ ಪ್ರಬಲ ಹುರಿಯಾಳಾಗೋದೂ ಖಂಡಿತ. ಆದರೆ ಟಿಕೆಟ್ ತಪ್ಪಿದ ಸಿಟ್ಟಿಗೆ ಅನಂತ್ಮಾಣಿ ಕೊಳ್ಳಿ ಇಡದೇ ಬಿಡಲಾರ. ಈ ಅಂಜಿಕೆ ಕಾಗೇರಿಯನ್ನು ಕಾಡುತ್ತಿದೆ. ಹಾಗಂತ ತನಗೂ ಕೆಲವೊಮ್ಮೆ ತೊಂದರೆ ಕೊಟ್ಟಿದ್ದ ಸಚ್ಚಿಗೆ ಟಿಕೆಟ್ ಕೊಡುವುದೂ ಬೇಕಾಗಿಲ್ಲ. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್ (ಶಾಸ್ತ್ರಿ) ಸಚ್ಚಿ ಪರವಾಗಿ










ಸಿ.ಟಿ. ರವಿ





...ಿದೆ. ಈ ಬಾರಿ ಕರಾವಳಿಯ ಮೂರೂ ಕ್ಷೇತ್ರಗಳಲ್ಲಿ ...ಲ್ಲುವುದು ಅಷ್ಟು ಸುಲಭ ಅಲ್ಲವೆಂಬುದು ...ದಟ್ಟಾಗಿರುವ ಸಂಘ ಪರಿವಾರದ ಪರಾಕ್ರಮಿಗಳ ಟಿಕೆಟ್ ...ಟ ದಿನಕ್ಕೊಂದು ಆಯಾಮ ಪಡೆಯುತ್ತಿದೆ.

...ಸಂಘ ಪರಿವಾರಕ್ಕೆ ಕರಾವಳಿಯಲ್ಲಿ ಪ್ರಯೋಗಿಸಿದ ...ರೇಕದ ಮತಾಂಧತೆಯೇ ಮಗ್ಗಲು ಮುಳ್ಳಾಗಿ ಕಾಡುತ್ತಿದೆ; ...ದರಾದ ನಳಿನಕುಮಾರ್ ಕಟೀಲ್, ಸದಾನಂದ ಗೌಡ ...ಜಿ ಸಿಎಂ) ಮತ್ತು ಅನಂತಕುಮಾರ್ ಹೆಗಡೆ ...ಕಾಲಹರಣ ಮಾಡಿ ಸ್ವಾರ್ಥ ಮಾತ್ರ ಸಕತ್ತಾಗಿ ...ಸಿಕೊಂಡಿದ್ದು ಬಿಜೆಪಿಗೆ ಗಂಡಾಂತರಕಾರಿ ಆಗಿಬಿಟ್ಟಿದೆ. ...ನಾಲಾಯಕರಿಗೆ ಮತ್ತೆ ಟಿಕೆಟ್ ಕೊಡಲಾಗದೆ, ಸರಿಯಾದ ...ಸ ಅಭ್ಯರ್ಥಿಗಳೂ ಸಿಗದೆ ಬಿಜೆಪಿ-ಆರೆಸೆಸ್ ...ನಾಯಕರು ಒದ್ದಾಡುತ್ತಿದ್ದಾರೆ. ಜನರ ತಾತ್ಸಾರ, ತಿರಸ್ಕಾರಕ್ಕೆ ...ತ್ತಾಗಿರುವ ಕಟೀಲ್-ಹೆಗಡೆಯನ್ನು ಈ ಬಾರಿ ಹಿಂದೂತ್ವ ...ಪ್ರಾಣ, ಹಿಂದೂ ಹೆಣ್ಣಿನ ಮಾನ ಎಂಬ ಸಂಘ ...ವಾರದ ಸೋಗಲಾಡಿ ಸಿದ್ಧ ಸೂತ್ರವೂ ಗೆಲ್ಲಿಸುವುದು ...ವೇ ಇಲ್ಲವೆಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ...ಪಿಗಳ' ಹರಾಮಿತನ ಹಿಂದೂತ್ವವನ್ನೇ ಕೆಲಸಕ್ಕೆ ...ರದಂತಾಗಿಸಿ ಬಿಟ್ಟಿದೆ. ಬಿಜೆಪಿಯ ತಳಮಟ್ಟದ ...ರ್ಯಕರ್ತರೇ ಈ ಭಂಡರಿಬ್ಬರಿಗೆ ಟಿಕೆಟ್ ಕೊಡದಂತೆ ...ಚ್ಚಿ ಹೊಡೆಯುತ್ತಿದ್ದಾರೆ. ಮಜಾಯೆಂದರೆ, ಆರೆಸ್ಸೆಸ್‌ನವರು ...ಟ್ ಕೊಡ್ತೇವೆಂದರೂ, ಮಾಜಿ ಸಿಎಂ- ಹಲ್ಮುಕಿ ...ನಂದ ಗೌಡ "..... ಬೇಡ ಪ್ಲೀಸ್ ನಂಗೆ ಟಿಕೆಟ್ ...ತ..." ಎಂದು ಅಂಗಲಾಚುತ್ತಿದ್ದಾರೆ.

ಆರೆಸ್ಸೆಸ್ ಸರದಾರರು ಅದೆಷ್ಟು ...ಂದಲಗೊಂಡಿದ್ದಾರೆಂದರೆ, ಬೈಠಕ್ ಮೇಲೆ ಬೈಠಕ್ ...ಡಿದರೂ ಕರಾವಳಿಯಲ್ಲಿ ಮೂರು ಸಮಾಧಾನಕರ ...ಡುವವಾರರು ಸಿಗುತ್ತಿಲ್ಲ, ಕಲ್ಲಡ್ಕ ಭಟ್ಟ ಅಳಿದೂ- ...ಗಿ. ಅಂತಿಮವಾಗಿ ಸೋತರೂ ಪರವಾಗಿಲ್ಲ, ತನ್ನ ...ರಾಮ ನಳಿನ್‌ಕುಮಾರ್ ಕಟೀಲ್‌ನೇ ದಕ್ಷಿಣ ಕನ್ನಡಕ್ಕೆ ...ಪಿಯ ಡಾರ್ಕ್ ಹಾರ್ಸ್ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ...ಗಂತ ಉಡುಪಿ-ಚಿಕ್ಕಮಗಳೂರು ಮತ್ತು ಉತ್ತರ ಕನ್ನಡಕ್ಕೆ ...ಗ್ಯವಾದ ಚಡ್ಡಿ ಕಲಿ ಆರೆಸೆಸ್ ಗ್ಯಾಂಗಿಗೆ ಈವರೆಗೂ ...ಸಿಲ್ಲ. ಮಾಜಿ ಸಿಎಂ ಸದಾನಂದ ಗೌಡ ಉಡುಪಿ- ...ಮಗಳೂರು ಕ್ಷೇತ್ರದ ಉಸಾಬರಿ ತನಗೆ ಹಚ್ಚಬೇಡಿ ...ಪ ಆರೆಸ್ಸೆಸ್ ಭೂಪರಿಗೆ ಕಡ್ಡಿ ಮುರಿದಂತೆ ಹೇಳಿ ...ನ್ನುಡೋ ಕಾಲವಾಗಿ ಹೋಗಿದೆ. ತವರುಕ್ಷೇತ್ರ ದಕ್ಷಿಣ ...ಡದಲ್ಲಿ ಸೋಲಿನ ಖಾತ್ರಿಯಿಂದು ಪಕ್ಷದ ಉಡುಪಿ- ...ಮಗಳೂರಿಗೆ ಪಲಾಯನ ಮಾಡಿದ್ದ ಸದಾ ಅಲ್ಲಿ

ತತ್ವಾಂಧ ಅಂಕಣಕೋರ ಪ್ರತಾಪ ಸಿಂಹ ಎಂಬ ಮೂರು ಹೆಸರು ಮಾತ್ರ. ಇವರಲ್ಲಿ ರವಿಗೆ ಎಂಪಿ ಆಗುವ ತೆವಲು ತೀವ್ರವಾಗಿ ಕಾಡಲು ಶುರುವಾಗಿ ಆರೆಂಟು ತಿಂಗಳು ಕಳೆದಿದೆ. ಚಿಕ್ಕಮಗಳೂರು ಜಿಲ್ಲೆಯ ಬಲಾಢ್ಯ ಒಕ್ಕಲಿಗ ಸಮುದಾಯದ ತನಗೆ ದತ್ತ ಪೀಠದ ಕಿತಾಪತಿ ಕೆರಳಿಸಿದ ಕ್ಯಾಲಿಬರ್ ಇದೆಯೆಂದು ಸಂಘಪರಿವಾರದ ದೊಡ್ಡವರ ಮುಂದೆ ರವಿ ವಾದ ಮಂಡಿಸಿದ್ದಾನೆ. ಆದರೆ ಈತನ ಅಧಿಕ ಪ್ರಸಂಗ, ಡಬ್ಬಲ್ ಗೇಮ್, ಭ್ರಷ್ಟಾಚಾರ ಮತ್ತು ಜೀವರಾಜ್ ಮತ್ತಿತರ ಬಿಜೆಪಿ ಮುಂದಾಳುಗಳೊಂದಿಗಿನ ಶತ್ರುತ್ವ ಆರೆಸ್ಸೆಸ್ ಗ್ಯಾಂಗ್ ಅನ್ನು ಚಿಂತೆಗೀಡುಮಾಡಿದೆ. ಒಂದು ಹಂತದಲ್ಲಿ ಈ ರವಿಗೆ ಟಿಕೆಟ್ ಕೊಡಲು ಬಿಜೆಪಿ ಹೈಕಮಾಂಡ್ ಮನಸ್ಸು ಮಾಡಿತ್ತು. ಆಗ ರವಿ 'ಅಕಸ್ಮಾತ್' ತಾನು ಗೆದ್ದರೆ ತೆರವಾಗುವ ಚಿಕ್ಕಮಗಳೂರು ಅಸೆಂಬ್ಲಿ ಕ್ಷೇತ್ರದಲ್ಲಿ ತನ್ನ ಧರ್ಮಪತ್ನಿ ಪಲ್ಲವಿಗೇ ಛಾನ್ಸ್ ಕೊಡಬೇಕೆಂದು ಷರತ್ತು ಹಾಕಿಬಿಟ್ಟ.

ಆಗ ಆರೆಸ್ಸೆಸ್ ಸೂತ್ರಧಾರರು ಕೆರಳಿದರು. ಹೊಸ ಮುಖದ ಹುಡುಕಾಟಕ್ಕೆ ಇಳಿದರು. ಆಗ ಕಂಡಿದ್ದು 'ಕನ್ನಡ ಪ್ರಭ'ದ ಸುಪ್ರಸಿದ್ಧ ಹಿಂದೂ ಅಂಕಣ ಗೀಚುಗಾರ ಪ್ರತಾಪ ಸಿಂಹ! ಈತನ ಒಕ್ಕಲಿಗ ಜಾತಿ, ಮತಾಂಧ ಮನಸ್ಸು ಆರೆಸ್ಸೆಸ್‌ಗೆ ಇಷ್ಟವಾಗಿತ್ತು. ಹಾಸನ ಕಡೆಯವನಾದ ಈತನನ್ನು ರವಿ-ಸುನಿಲ್‌ಕುಮಾರ್ ಪಟಾಲಮ್ ಸೋಲಿಸಲು ಹೆಣಗಿದರೆ ಗತಿಯೇನೆಂಬ ಆತಂಕವೂ ಶುರುವಾಯ್ತು. ಚುನಾವಣಾ ರಾಜಕೀಯದಲ್ಲಿ ಪಳಗಿರುವ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಎದುರು ಈ ಸಿಂಹದ ಸದ್ದಡಗಬಹುದೆಂಬ ಕೂಗೂ ಕೇಳಿಬಂತು. ಅದೇ ಹೊತ್ತಿಗೆ ಯಡ್ಡಿ ಎಂಬ ಎಡಬಿಡಂಗಿ ಬಿಜೆಪಿಗೆ ಪುನರ್ ಪಾದಾರ್ಪಣೆ ಮಾಡಿದ್ದರು. ಆತನ ಕಷ್ಟ-ಸುಖದ ನಿಷ್ಠ ನಾರಿಮಣಿ ಶೋಭಾ ಕರಂದ್ಲಾಜೆ ಹೆಸರು ಇದ್ದಕ್ಕಿದ್ದಂತೆ ಸಂಭವನೀಯ ಹುರಿಯಾಳುಗಳ ಸಾಲಿಗೆ ಸೇರಿಕೊಂಡಿತು. ಒರಿಜಿನಲ್ ಚಡ್ಡಿಗಳಿಗೆ ಒಮ್ಮೆ ಚಡ್ಡಿ ಕಳಚಿದ್ದ ಶೋಭಾರ ಬಗ್ಗೆ ವಿಶ್ವಾಸ ಮೂಡುತ್ತಿಲ್ಲ.

ಹೀಗಾಗಿ ಸದ್ಯಕ್ಕೆ ಸಿ.ಟಿ. ರವಿಯೇ ಸಂಘ ಪರಿವಾರಕ್ಕೆ ಗತಿ ಎಂಬಂತಾಗಿದ್ದಾನೆ.

ಅತ್ತ ಉತ್ತರ ಕನ್ನಡ ಟಿಕೆಟ್ ಹಂಚಿಕೆ ಬಿಜೆಪಿ ಪರಿವಾರಕ್ಕೆ ಬಿಡಿಸಲಾಗದ ಸಮಸ್ಯೆ ಎಂಬಂತಾಗಿದೆ. ಆರಂಭದಿಂದಲೂ ಹಾಲಿ ಸಂಸದ ಅಧಿಕ ಪ್ರಸಂಗಿ ಅನಂತ್ಮಾಣಿ ಯಾನೆ ಅನಂತಕುಮಾರ್ ಹೆಗಡೆಗೇ ಛಾನ್ಸ್ ಎಂಬ ಅಘೋಷಿತ ಅಭಿಪ್ರಾಯ ಮೂಡಿತ್ತು. ಆದರೆ ಆರೆಸ್ಸೆಸ್ ಒಳಗೆ ಈ ಅನಂತ್ಮಾಣಿಗೆ ಟಾಂಗ್ ಕೊಡುವ ಕಸರತ್ತು ಈಗ

ಶೇಖರಣೆಯಲ್ಲಿ ಭಾಗಿಯಾಗಿ ಹೆಸರು ಕೆಡಿಸಿಕೊಂಡಿದ್ದಾನೆಂಬ ಅಂಶವೂ ಸಂಘ ಪರಿವಾರದ ಬಿಡಾರದ ಬೈಠಕ್‌ನಲ್ಲಿ ಚರ್ಚೆಗೆ ಬರುತ್ತಿದೆ. ಒಂದು ಕಾಲದಲ್ಲಿ ಆರೆಸ್ಸೆಸ್‌ನ ವಿಷ ಬಿತ್ತುವ ಬುತ್ತಿ ಮಾಣಿಯಾಗಿದ್ದ ಈತ ಇವತ್ತು ಅರಣ್ಯ ಅತಿಕ್ರಮಣ, ಅವ್ಯವಹಾರ, ಸರ್ಕಾರಿ ಅನುದಾನ ಸ್ವಾಹಾ, ಸ್ತ್ರೀಶಕ್ತಿ ಸಂಘಗಳ ದುರ್ಬಳಕೆ, ಆತನ ಹೆಂಡತಿಯ ಬಾಸ್‌ಗಿರಿಯ 'ಕದಂಬ' ಟ್ರಸ್ಟ್‌ನ ಕರ್ಮಕಾಂಡದಿಂದ ಕೋಟ್ಯಾಧಿಪತಿಯಾಗಿದ್ದಾನೆ. ಹಿಂದೂತ್ವದ ಹುಂಬ ಪೋರನಾಗಿದ್ದವ ಈಗ ಪಕ್ಕಾ ಭ್ರಷ್ಟ-ವ್ಯವಹಾರಸ್ಥ-ವೃತ್ತಿನಿರತ ರಾಜಕಾರಣಿ ಆಗಿದ್ದಾನೆ! ಹಾಗಂತ ಈ ಅವಾಂತರಕಾರಿಗೆ ಆರೆಸ್ಸೆಸ್ ಏನೂ ಕಡಿವಾಣ ಹಾಕಲಿಲ್ಲ. ಸಂಘ ಪರಿವಾರದಲ್ಲಿ ಲಾಗಾಯ್ತಿನಿಂದ ಕುದುರಿಸಿಕೊಂಡು ಬಂದಿದ್ದ ಆಶ್ರಯದಾತರು ಈತನಿಗೇ ಟಿಕೆಟ್ ಪಕ್ಕ ಕೂಡ ಮಾಡಿದ್ದರು.

ಸಂಘ ಪರಿವಾರದಲ್ಲಿ ಇದು 'ಪೇಯ್ಡ್ ಟಿಕೆಟ್' ಎಂಬ ಕೂಗು ಇದ್ದಕ್ಕಿದಂತೆ ಭುಗಿಲೆದ್ದಿದೆ. ಉತ್ತರ ಕನ್ನಡದಲ್ಲಿನ ಆತನ ಕಡು ವಿರೋಧಿ ಬ್ರಾಹ್ಮಣ ವಲಯ ಒಂದಿದೆ. ಸಂಘ ಪರಿವಾರದಲ್ಲಿ ಈ ಪಡೆಗೆ ವಿಶೇಷ ಗೌರವವೂ ಇದೆ. ಅದಕ್ಕೆ ಮಾಜಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯೇ ನಾಯಕ. ಮತ್ತೊಂದು ಪಕ್ಕಾ ಹಿಂದೂತ್ವದ ಗ್ಯಾಂಗ್ ಜಿಲ್ಲಾ ಬಿಜೆಪಿಯಲ್ಲಿದೆ. ಅದಕ್ಕೆ ಲೀಡರ್ ಮನುವಾದಿ ಸಚ್ಚಿದಾನಂದ ಹೆಗಡೆ. ಈಗ ಸಂಘ ಪರಿವಾರ ಡಾನ್‌ಗಳ ನಿಕಟ ನಂಟಿರುವಾತ. ಬಿಜೆಪಿ ಪರ್ವದಲ್ಲಿ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷನಾಗಿದ್ದ ಈತ ಧರ್ಮದ ಅಮಲುಕೋರ 'ಕ್ಯಾತ' ಪತ್ರಕರ್ತ ವಿಷ ಭಟ್ಟನ ಸೋದರ ಮಾವ! ಈ ಸಚ್ಚಿಗೆ ಅನಂತ್ಮಾಣಿ ಮೂತಿ ಕಂಡರಾಗದು. ಬೀದಿ ಬಡಿದಾಟಗಾರನಾದ ಅನಂತ್ಮಾಣಿ ಸಂಸದನಾಗಿದ್ದು ಈ ಸ್ವಯಂಪೋಷಿತ ಬೃಹಸ್ಪತಿಗೆ ಇವತ್ತಿಗೂ ಸಹಿಸಲಸಾಧ್ಯ ಸಂಗತಿಯಾಗಿ ಕಾಡುತ್ತಿದೆ. ಹಿಂದೆಲ್ಲ ತುಂಬ ರಹಸ್ಯವಾಗಿ ಎಂಪಿ ಟಿಕೆಟ್‌ಗೆ ಕಟಿಪಿಟಿ ನಡೆಸಿದ್ದ ಸದ್ರಿ ಸಚ್ಚಿ ಅನಂತ್ಮಾಣಿಯ ಕಡಿ-ಕೊಚ್ಚು ಶೈಲಿಯ ರಾಷ್ಟ್ರ ಪ್ರೇಮದ ಪ್ರಖರತೆಯಲ್ಲಿ ಮಂಕಾಗಿದ್ದರು.

ಈ ಬಾರಿ ಮತ್ತೆ ಸಚ್ಚಿ ಬಿಜೆಪಿ ಟಿಕೆಟ್‌ಗೆ ಪ್ರಯತ್ನ ನಡೆಸಿದ್ದಾರೆ. ಬಿಜೆಪಿಯಲ್ಲಿನ ತನ್ನ ಹೈಲೆವೆಲ್ ಸಂಪರ್ಕ ಬಳಸಿ ಅನಂತನಿಗೆ ಟಿಕೆಟ್ ಸಿಗದಂತೆ ಮಾಡಲು ಹವಣಿಸುತ್ತಿದ್ದಾರೆ. ಬಿಜೆಪಿಯಲ್ಲಿ ಎದ್ದಿರುವ ಆ್ಯಂಟಿ ಅನಂತ್ಮಾಣಿ ಆವಾಜೇ ಸಚ್ಚಿಗೆ ಬಲವಾಗಿದೆ. ಹಿರಿಯರು-ಕಿರಿಯರು ಎನ್ನದೆ ಯಾರಿಗೂ ಕ್ಯಾರೇ ಮಾಡದೆ ಸೊಕ್ಕಿದ ಮದ್ದಾನೆಯಂತೆ ಘೀಳಿಡುತ್ತ ಒನ್‌ಮ್ಯಾನ್ ರಾಜಕಾರಣ ಮಾಡಿದ ಅನಂತ್ ಬಗ್ಗೆ ಜಿಲ್ಲಾ ಬಿಜೆಪಿಯಲ್ಲಿ ಯಾರ್‍ಯಾರಿಗೂ

ಲಾಬಿ ಮಾಡುತ್ತಿರುವುದರಿಂದ ಕಾಗೇರಿ ದಾರಿಗಾಣದೆ ತಣ್ಣಗಾಗಿದ್ದಾರೆ.

ಉತ್ತರ ಕನ್ನಡ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಚ್ಚಿ ಬೇರುಗಳು ಸಂಘ ಪರಿವಾರದಲ್ಲಿ ಆಳಕ್ಕೆ ಇಳಿದಿದೆ. 1970ರ ದಶಕದಲ್ಲಿ ಇಂಗ್ಲಿಷ್ ದೈನಿಕ ಒಂದರ ವರದಿಗಾರನಾಗಿದ್ದ ಈ ಚಡ್ಡಿ ಚತುರ ಜನಸಂಘದ ಪತ್ರಕರ್ತನೆಂದೇ ಅಂದು ಹೆಸರುವಾಸಿ ಆಗಿದ್ದಾತ. ಸಂಯುಕ್ತ ಜನತಾದಳ ಸ್ಥಾಪನೆಯಾದಾಗ ಅದರ ಕಚೇರಿ ಕಾರ್ಯದರ್ಶಿಯೂ ಆಗಿದ್ದ. ಆಗ ಸಂಘಪರಿವಾರದ ಪ್ರತಿನಿಧಿಯಾಗಿದ್ದನೇ ಹೊರತು ಅಧಿಕಾರ ಯಾವುದೂ ದಕ್ಕಿರಲಿಲ್ಲ. ನಂತರ ಜಿಲ್ಲೆಗೆ ಬಂದಿದ್ದ ಈತ ಮನು ಸಿದ್ಧಾಂತದ ಧ್ಯೇಯ ನಿಷ್ಠೆಯ ಪತ್ರಿಕೆ ಮಾಡಿ ದಿವಾಳಿಯೂ ಆಗಿದ್ದ. ಯಡ್ಡಿ ಸಿಎಂ ಯುಗದಲ್ಲಿ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷತೆ ಪಡೆದುಕೊಂಡು ಸಾಲ-ಸೂಲದಿಂದ ಹೊರಬಂದಿದ್ದ. ಈಗ ಸಂಸದನಾಗುವ ಕನಸು ಸಚ್ಚಿಯ ನಿದ್ದೆ ಗೆಡಿಸುತ್ತಿದೆ.

ನರಿ ತಂತ್ರಗಾರಿಕೆಯಲ್ಲಿ ನಿಸ್ಸೀಮನಾದ ಸಚ್ಚಿ ಹೈರಾಣಾಗಿರುವ ಸಂಸದ ಅನಂತ್ಮಾಣಿಯನ್ನು ಅರಣ್ಯಗಳ್ಳ-ಭ್ರಷ್ಟ-ಕರ್ಮಗೇಡಿ ಎಂದು ಬಿಂಬಿಸಲು ಸ್ಕೆಚ್ ಹಾಕಿದ್ದಾರೆ. ತತ್ಪರಿಣಾಮವಾಗಿ ಅನಂತ್ಮಾಣಿ ಕರ್ಮಕಾಂಡಗಳು ಧಾರಾವಾಹಿಯಾಗಿ ಸಂಘ ಪರಿವಾರದ ಒಲವಿನ ದೈನಿಕ ಒಂದರಲ್ಲಿ ಬರುತ್ತಿದೆ. ಇದಕ್ಕೆ ಆತನ ಅಳಿಯನಾದ ಪತ್ರಕರ್ತನ ಸಹಕಾರವೂ ಸಿಕ್ಕಿದೆ. ಒಟ್ಟಿನಲ್ಲಿ ತಾನು ಸರ್ವಶಕ್ತ ಪ್ರಶ್ನಾತೀತ ಹಿಂದೂ ಜಾಗರಣಾ ವೇದಿಕೆಯ ಸೇನಾಧಿಪತಿ, ತನ್ನನ್ನು ಎದುರಿಸುವವರ್‍ಯಾರೂ ಜಿಲ್ಲಾ ಬಿಜೆಪಿಯಲ್ಲಿಲ್ಲ ಎಂಬ ಅಹಂಕಾರದಲ್ಲಿ ಅಗ್ನಿ ಭಕ್ಷಕ ರಾಜಕಾರಣ ಮಾಡುತ್ತಿದ್ದ ಅನಂತ್ಮಾಣಿಗೆ ಸ್ವಜಾತಿ- ಸ್ವಸಂಘಗಳೇ ವೈರಿಗಳಾಗಿ ಸತಾಯಿಸುತ್ತಿದ್ದಾರೆ. ಹಾಗಂತ ಅಷ್ಟು ಸುಲಭಕ್ಕೆ ಅನಂತ್ಮಾಣಿ ಹಿಮ್ಮೆಟ್ಟಲಾರ. ಆರೆಸ್ಸೆಸ್‌ನಲ್ಲಿ ಆತನ ಪೇಯ್ಡ್ ಲಾಯರ್‌ಗಳಿದ್ದಾರೆ.


ಒಂದು ಕಡೆ ಕಾರ್ಯಕರ್ತರ ವಿರೋಧ, ಮತ್ತೊಂದು ಕಡೆ ಪಕ್ಷದ ಹಿತಶತ್ರುಗಳ ಕಾಲೆಳೆದಾಟ, ಮಗದೊಂದು ಕಡೆ ಮತದಾರರ ತಾತ್ಸಾರದಿಂದ ಅನಾಯಕಾರಿ ಎಂಪಿ ಅನಂತ್ಮಾಣಿ ಸಂಕಷ್ಟಕ್ಕೆ ಸಿಲುಕಿದ್ದಾನೆ. ಸಂಘ ಪರಿವಾರ ಕೊನೆ ಗಳಿಗೆಯಲ್ಲಿ ಮಾಣಿಯನ್ನು ಮನೆಗೆ ಕಳಿಸಿ ಹೊಸ ಚಡ್ಡಿಯನ್ನು ಅಶ್ವಮೇಧಕ್ಕೆ ಇಳಿಸುವ ಸಂಕೇತಗಳು ಈಗ ಕಾಣಿಸುತ್ತಿವೆ. ಈ ಒಳಸುಳಿಯ ರಾಜಕಾರಣ ಕರಾವಳಿಯ ಬಿಜೆಪಿಗೆ ಈ ಬಾರಿ ಗಂಡಾಂತರಕಾರಿಯಾಗಿದೆ. ಟಿಕೆಟ್ ಹಂಚಿಕೆ ಬಿಜೆಪಿ-ಆರೆಸ್ಸೆಸ್‌ಗೆ ದಿನ ಕಳೆದಂತೆ ಕಗ್ಗಂಟಾಗುತ್ತಿದೆ.

• ವರದಿಗಾರ

ಪರಸ್ಪರ ಪ್ರೀತಿಸಿದರೂ ಅಲೋಕ್ ದೀಕ್ಷಿತ್, ಲಕ್ಷ್ಮಿ ಒಟ್ಟಿಗೆ ಬಾಳುವ ನಿರ್ಧಾರ ಕೈಗೊಂಡರೂ ಅವರು ಮದುವೆಯಾಗಲು ಬಯಸಲಿಲ್ಲ. ಮದುವೆ ಎನ್ನುವ ಸಂಪ್ರದಾಯದ ಕಟ್ಟುಪಾಡು ಇಲ್ಲದೆ ಒಬ್ಬರನ್ನೊಬ್ಬರು ಗೌರವಿಸುವ, ಪ್ರೀತಿಸುವ, ಸ್ಪಂದಿಸುವ 'ಲಿವಿಂಗ್ ಟುಗೆದರ್' ಬಾಂಧವ್ಯದಲ್ಲಿ ಒಟ್ಟಿಗೇ ಬದುಕು ಸವೆಸುತ್ತಿದ್ದಾರೆ. ಈ ವಿಷಯದಲ್ಲೂ ಅವರು ಸಮಾಜದಿಂದ ಕೊಂಚ ಪ್ರತಿರೋಧ ಎದುರಿಸಬೇಕಾಯಿತು. ಅವರಿಬ್ಬರ ದಿಟ್ಟತನ, ನಿಷ್ಕಲ್ಮಷ ಪ್ರೀತಿಯ ಮುಂದೆ ಆ ತಡೆಯೂ ನಿಲ್ಲಲಿಲ್ಲ. ಈಗ ಇಬ್ಬರೂ ಜೊತೆಗೂಡಿ ಆ್ಯಸಿಡ್ ಪೀಡಿತರಿಗೆ ನ್ಯಾಯ ಒದಗಿಸಲು ಹೋರಾಡುತ್ತಿದ್ದಾರೆ.



ಆ್ಯಸಿಡ್ ದಾಳಿಯ ಮುನ್ನ ಹೀಗಿದ್ದಳು ಲಕ್ಷ್ಮಿ



ಲಕ್ಷ್ಮಿ ಮತ್ತು ಅಲೋಕ್

# ಬೆಂಕಿಯಲ್ಲಿ ಅರಳಿದ 'ಏಕ್ ಪ್ರೇಮ್ ಕಹಾನಿ'

ಆಕೆಯ ಹೆಸರು ಲಕ್ಷ್ಮಿ. ದೂರದ ದಿಲ್ಲಿಯವಳು. ಸೀದಾಸಾದಾ ಕನಸುಗಳ ಮಾಮೂಲಿ ಹುಡುಗಿ. ಆದರೆ ಇಲ್ಲಿಗೆ ಹತ್ತು ವರ್ಷಗಳ ಹಿಂದೆ, ಅಂದರೆ ಆಕೆಯ ಹದಿನೈದನೇ ವಯಸ್ಸಲ್ಲಿ ಘಟಿಸಿದ ಕಹಿ ಕೃತ್ಯವೊಂದು ಅವಳ ಬದುಕನ್ನು ಕೆಂಪು ಕೆನ್ನಾಲಿಗೆಗೆ ದೂಡಿ ಗಹಗಹಿಸಿತ್ತು.

ಪ್ರತಿ ದಿನದಂತೆ 2004ರ ಏಪ್ರಿಲ್ ಮಾಹೆಯ ಆ ದಿನವು ಕೂಡಾ ಆಕೆ ತಾನು ಸೇಲ್ಸ್‌ಗರ್ಲ್ ಆಗಿ ಕೆಲಸ ಮಾಡುತ್ತಿದ್ದ ಪುಟ್ಟ ಬುಕ್‌ಶಾಪ್‌ನತ್ತ ತರಾತುರಿಯಲ್ಲಿ ಹೆಜ್ಜೆ ಹಾಕಿದ್ದಳು. ಖಾನ್ ಮಾರ್ಕೆಟ್‌ನ ಜನಸಂದಣಿಯನ್ನು ಸೀಳಿಕೊಂಡು ತನ್ನ ಪಾಡಿಗೆ ತಾನು ನಡೆಯುತ್ತಿದ್ದ ಲಕ್ಷ್ಮಿಯ ಭುಜವನ್ನು ಹಿಂದಿನಿಂದ ಯಾರೊ ತಡೆದು ನಿಲ್ಲಿಸಿದಂತಾಯ್ತು. ಗಕ್ಕನೆ ತಿರುಗಿ ನಿಂತವಳಿಗೆ ಕಂಡದ್ದು ಒಂದು ಪರಿಚಿತ ಮುಖ. ತನ್ನನ್ನು ಪ್ರೀತಿಸು, ಮದುವೆಯಾಗು ಅಂತೆಲ್ಲಾ ಗೋಳುಹೊಯ್ದುಕೊಳ್ಳುತ್ತಿದ್ದ ಕಿಡಿಗೇಡಿಯ ಮುಖವದು. ಪ್ರತಿಕ್ರಿಯಿಸುವ ಮುನ್ನವೇ ಆ ವ್ಯಕ್ತಿ ಲಕ್ಷ್ಮಿಯ ಮುಖದ ಮೇಲೆ ಅದೇನನ್ನೊ ಎರಚಿಬಿಟ್ಟಿದ್ದ. ನೀರಹನಿಗಳಂತೆ ಮುಖವನ್ನು ರಾಚಿಕೊಂಡ ಅದು ತಕ್ಷಣಕ್ಕೇ ತಣ್ಣಗಾದಂತಾದರು ನಂತರದ ಕ್ಷಣದಲ್ಲೆ ಮುಖಕ್ಕೆ ಬೆಂಕಿ ಇಟ್ಟಂತೆ ಉರಿ ಶುರುವಾಗಿತ್ತು. ನೋಡನೋಡುತ್ತಿದ್ದಂತೆಯೇ ಮುಖದ ಚರ್ಮ ಕರಗಿ ಕಿತ್ತು ಬರಲು ಆರಂಭಿಸಿತ್ತು. ಆಕೆ ಮುಖ ಮುಚ್ಚಿಕೊಂಡೇ ತನಗೆ ಸಹಾಯ ಮಾಡುವಂತೆ ರೋದಿಸುತ್ತಿದ್ದರೂ ಅಲ್ಲಿ ನೆರೆದಿದ್ದ ಯಾರೊಬ್ಬರೂ ಆಕೆಯ ಸಹಾಯಕ್ಕೆ ಬರಲಿಲ್ಲ. ಕಣ್ಣು ಬಿಡಲಾಗದೆ ಉರಿ ತಾಳಲಾರದೆ ರಸ್ತೆಯಲ್ಲಿ ಅಡ್ಡಾದಿಡ್ಡಿ ಅಂಗಲಾಚುತ್ತಿದ್ದ ಲಕ್ಷ್ಮಿಯನ್ನು ರಸ್ತೆಯ ವಾಹನಗಳು ತಿವಿದುಕೊಂಡು ಹೋದವೇ ಹೊರತು ಮಾನವೀಯತೆ ಅಲ್ಲಿ ಮಡುಗಟ್ಟಲೇ ಇಲ್ಲ. ತಾನು ಆ್ಯಸಿಡ್ ದಾಳಿಗೆ ತುತ್ತಾಗಿರುವುದು ಲಕ್ಷ್ಮಿಗೆ ಅರಿವಾಗುವ ಮುನ್ನವೇ ಅವಳ ಬದುಕು ಛಿದ್ರವಾಗಿ ಹೋಗಿತ್ತು.




ಪ್ರತಿಭಟನೆಯಲ್ಲಿ ಲಕ್ಷ್ಮಿ

ಬಾಹ್ಯ ಸೌಂದರ್ಯವೇ ಬಂಡವಾಳವಾಗಿರುವ ಈ ದುನಿಯಾದಲ್ಲಿ ಲಕ್ಷ್ಮಿಯಂತಹ ಹುಡುಗಿಯೊಬ್ಬಳ ಭವಿಷ್ಯ ಬಣ್ಣಗೆಡಲು ಇದಕ್ಕಿಂತ ಕಾರಣ ಬೇಕೆ. ಅದು ಲಕ್ಷ್ಮಿಗೂ ಅರ್ಥವಾಗಿತ್ತು. ಎಲ್ಲಾ ಅಸಹಾಯಕ ಹೆಂಗಸರಂತೆ ಆಕೆಯೂ ತನ್ನ ದೀನ ಬದುಕನ್ನು ಒಪ್ಪಿಕೊಂಡು ನಾಲ್ಕು ಗೋಡೆಯ ನಡುವೆ ಬಂಧಿಯಾದಳು. ಚಂದದ ಜೀವನವನ್ನು ಹೀಗೆ ನರಕವಾಗಿಸಿದ ಪುರುಷ ಪ್ರಾಣಿಗಳ ಮೇಲೆ ಅಪಾರ ಸಿಟ್ಟು, ಆಕ್ರೋಶ ಅವಳ ಮನದಲ್ಲಿ ತಹತಹಿಸಲು ಆರಂಭಿಸಿತು. ತನ್ನ ಸ್ಥಿತಿಗೆ ಕಾರಣವಾದ 'ಪ್ರೀತಿ' 'ಪ್ರೇಮ'ಗಳೆಂಬ ಪದಗಳು ಕಿವಿ ಮೇಲೆ ಬಿದ್ದರೂ ರೊಚ್ಚಿಗೇಳುವಷ್ಟು ಲಕ್ಷ್ಮಿ ಕನಲಿಹೋಗಿದ್ದಳು. ಆದರೂ ಕತ್ತಲ ಕೋಣೆಯಲ್ಲಿ ಕೊರಗುವುದು ಬಿಟ್ಟು ತನಗೆ ಮತ್ಯಾವ ದಾರಿಯೂ ಇಲ್ಲವೆನ್ನುವ ತೀರ್ಮಾನಕ್ಕೆ ಬಂದು, ಅದರಂತೆಯೇ ಐದಾರು ವರ್ಷ ಮನೆ ಬಿಟ್ಟು ಹೊರಗೆ ಬರದೆ ಸಮಾಜದಿಂದ ದೂರವಾಗಿಯೇ ಬದುಕು ಸವೆಸಿದಳು. ಆದರೆ ಅವಳ ಬದುಕಿನಲ್ಲಿ ಅಲೋಕ್ ದೀಕ್ಷಿತ್‌ನ ಆಗಮನ ಎಲ್ಲವನ್ನೂ ಬದಲಾಯಿಸಿಬಿಟ್ಟಿತು.

ಈ ಅಲೋಕ್ ದೀಕ್ಷಿತ್, ಲಕ್ಷ್ಮಿಯ ಬದುಕನ್ನು ಹೊಕ್ಕುವ ಕೆಲ ವರ್ಷಗಳ ಮುನ್ನ ಭಾರತೀಯ ವಾಯುಸೇನೆಯಲ್ಲಿ ಸಿಪಾಯಿಯಾಗಿ ಕೆಲಸ ಮಾಡಿದ್ದ. ತನ್ನ ತುಡಿತ ಇಂತಹ ಮುಖ್ಯವಾಹಿನಿಯ 'ಜಾಬ್'ಗಳಿಗೆ ಮಾತ್ರ ಸೀಮಿತವಾದುದಲ್ಲ ಎಂಬುದನ್ನು ಮನಗಂಡು 2009ರಲ್ಲಿ ರಾಜೀನಾಮೆ ನೀಡಿ ಪತ್ರಕರ್ತನಾಗಲು ಬಯಸಿದ್ದ. ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಜರ್ನಲಿಸಮ್ ಅಂಡ್ ನ್ಯೂ ಮೀಡಿಯಾ ಸಂಸ್ಥೆಯಲ್ಲಿ ಫೆಲೋಶಿಪ್ ಪಡೆದು ಅದಕ್ಕೆ ಬೇಕಾದ ಕೋರ್ಸನ್ನೂ ಪೂರೈಸಿದ್ದ. ಮುಂಬೈನ ಟಿವಿ 9 ನ್ಯೂಸ್ ಹಾಗೂ ಬೆಂಗಳೂರು ಮಿರರ್ ಪತ್ರಿಕೆಗಳಲ್ಲಿ ಜರ್ನಲಿಸ್ಟ್ ಆಗಿ ಕೆಲ ಉತ್ತಮ ಕೆಲಸಗಳನ್ನೂ ಮಾಡಿದ್ದ. ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಪೊಲೀಸರು ನಡೆಸುತ್ತಿದ್ದ ಸುಲಿಗೆಯನ್ನು ಬೆಂಗಳೂರ್ ಮಿರರ್ ಪತ್ರಿಕೆಯಲ್ಲಿ ವರದಿ ತಪ್ಪಿತಸ್ಥ ಖಾಕಿಗಳಿಗೆ ಶಿಕ್ಷೆ ಆಗುವಂತೆ ಮಾಡಿದ್ದು ಇದೆ ಅಲೋಕ್ ದೀಕ್ಷಿತ್.

⏭ 08

## ವಿಕೃತಿಗೆ ಕೊನೆ ಎಂದು?



ಕೊಕ್ಕನೂರಿನಲ್ಲಿ ಆ್ಯಸಿಡ್ ದಾಳಿಗೆ ಗುರಿಯಾದ ಶಿಕ್ಷಕಿ


ಆ್ಯಸಿಡ್ ದಾಳಿಯ ವಿರುದ್ಧ ಅಲೋಕ್ ದೀಕ್ಷಿತ್‌ನಂತವರು, ಲಕ್ಷ್ಮಿಯಂತಹ ದಿಟ್ಟ ಸಂತ್ರಸ್ತೆಯರು ಹೋರಾಟ ನಡೆಸುತ್ತಿದ್ದರೂ ಅದರ ಪಿಡುಗು ಕಡಿಮೆಯೇನೂ ಆಗಿಲ್ಲ. ಮೊನ್ನೆಯಷ್ಟೆ ಹರಿಹರದ ಕೊಕ್ಕನೂರಿನಲ್ಲಿ ಪ್ರೀತಿಸಲಿಲ್ಲ ಎಂಬ ಕಾರಣಕ್ಕೆ ಶಿಕ್ಷಕಿಯೊಬ್ಬಳ ಮೇಲೆ ನಡೆದ ಆ್ಯಸಿಡ್ ದಾಳಿ ವಸ್ತುಸ್ಥಿತಿಯನ್ನು ತೆರೆದಿಡುತ್ತದೆ. ಇದೊಂದು ವಿಕೃತಿ ಎಂಬುದನ್ನು ಸಮಾಜ ಅರ್ಥಮಾಡಿಕೊಳ್ಳದೇ ಇರುವುದು ಮತ್ತು ಆ್ಯಸಿಡ್ ಎರಚಿದ ಅಪರಾಧಿಗಳನ್ನು ಪರಿಣಾಮಕಾರಿ ಶಿಕ್ಷೆಗೆ ಗುರಿಪಡಿಸದೇ ಇರುವುದೇ ಈ ವಿಕೃತಿಯ ಅಸ್ತಿತ್ವದ ಜೀವಾಳ. ದಾಳಿಯ ನಂತರ ಸಂತ್ರಸ್ತರು ಅನುಭವಿಸುವ ಯಾತನೆ, ತಿರಸ್ಕಾರಗಳನ್ನು ಒಂದೇ ಒಂದು ಕ್ಷಣ ಆಲೋಚಿಸಿದರೂ ಸಮಾಜ ಎಚ್ಚೆತ್ತುಕೊಳ್ಳಬಹುದೇನೋ. ಲಕ್ಷ್ಮಿ ಹೇಳುವಂತೆ "ನಮ್ಮಂತಹ ಆ್ಯಸಿಡ್ ಸಂತ್ರಸ್ತೆಯರದು ಅತ್ಯಾಚಾರಕ್ಕೆ ಒಳಗಾದವರಿಗಿಂತ ಹೀನ ಬದುಕು. ಯಾಕೆಂದರೆ ನಮ್ಮ ಮುಖಗಳೇ ಕುರೂಪಗೊಳ್ಳುವುದರಿಂದ ಈ ಸಮಾಜದಲ್ಲಿ ನಮಗಿದ್ದ ಐಡೆಂಟಿಟಿಯೇ ಕಳೆದುಹೋಗುತ್ತದೆ. ಎಷ್ಟೇ ಕಾಲವಾದರು ಜನ ನಮ್ಮ ಮೇಲೆ ನಡೆದ ದೌರ್ಜನ್ಯವನ್ನು ಮರೆಯಲಾರದಂತ ಗುರುತು ನಮ್ಮ ಮುಖದ ಮೇಲೆ ಶಾಶ್ವತವಾಗಿ ಉಳಿದುಬಿಡುತ್ತದೆ. ದುಡಿಮೆಗೋಸ್ಕರ ಒಂದು ಕೆಲಸ ಗಿಟ್ಟಿಸಿಕೊಳ್ಳುವುದೂ ದುಸ್ತರವಾಗಿಬಿಡುತ್ತದೆ. ನಾನೂ ಕೂಡ ಹಲವಾರು ಕಡೆ ಕೆಲಸಕ್ಕಾಗಿ ಅಲೆದಾಡಿದೆ. ಆದರೆ ನನ್ನನ್ನು ನೌಕರಳನ್ನಾಗಿಸಿಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಎಷ್ಟೋ ಕಡೆ- ನಿನಗೆ ಕೆಲಸ ಕೊಟ್ಟರೆ ಕಚೇರಿಗೆ ಬರುವ ಜನ ನಿನ್ನನ್ನು ನೋಡಿ ಹೆದರಿ ಓಡಿಬಿಡುತ್ತಾರೆ- ಎಂದು ಹೇಳಿ ಕಳಿಸಿದರು. ನಾನು ಸಮಾಜವನ್ನು ಕೇಳುವುದು ಒಂದೇ ಪ್ರಶ್ನೆ: ಇದರಲ್ಲಿ ನನ್ನ ತಪ್ಪೇನಿದೆ? ಹುಟ್ಟುತ್ತಲೇ ಅಂಗವಿಕಲರಾಗಿ ಹುಟ್ಟಿದವರಿಗೂ ಇಲ್ಲಿ ಮಾನ್ಯತೆ ಇದೆ. ಆದರೆ ನಮಗ್ಯಾಕೆ ಈ ಅನ್ಯಾಯ?" ಲಕ್ಷ್ಮಿಯ ಪ್ರಶ್ನೆಗಳು ಸಮಾಜವನ್ನು ತಣ್ಣಗೆ ಅಣಕಿಸುತ್ತಿವೆ. ಲಕ್ಷ್ಮಿಗೇನೊ ಅಲೋಕ್ ದೀಕ್ಷಿತ್‌ನಂತಹ ಒಬ್ಬ ವ್ಯಕ್ತಿ ಸಿಕ್ಕ. ಆದರೆ ಇನ್ನುಳಿದವರ ಇಂತಹ ಪ್ರಶ್ನೆಗಳಿಗೆ ಉತ್ತರವೇನು.....

## ಇಷ್ಟವಿಲ್ಲದ ಮದುವೆಗೆ ಅರ್ಥವೇನು?

ಲಕ್ಷ್ಮಿ ಮತ್ತು ಅಲೋಕ್ ಒಬ್ಬರನ್ನೊಬ್ಬರು ಪ್ರೀತಿಸಿ ಜೋಡಿಯಾಗಲು ಸಮ್ಮತಿಸಿಕೊಂಡರೂ ಅವರು 'ಮದುವೆ'ಯಾಗಲು ಒಪ್ಪದೆ ಲಿವ್-ಇನ್ ಬಾಂಧವ್ಯದಲ್ಲೇ ಬಾಳುತ್ತಿದ್ದಾರೆ. ಮದುವೆಯನ್ನು ತಿರಸ್ಕರಿಸಲೂ ಅವರಲ್ಲಿ ಕಾರಣವಿದೆ. ಅದನ್ನು ಅಲೋಕ್ ಮಾತಿನಲ್ಲೇ ಕೇಳಿದರೆ ಚೆನ್ನ. ಓವರ್ ಟು ಅಲೋಕ್ ದೀಕ್ಷಿತ್....

"ಕೆಲವೊಮ್ಮೆ ನಾವು ಸಮಾಜದ ಕೆಲ ಸಾಂಪ್ರದಾಯಿಕ ಕಲ್ಪನೆಗಳನ್ನು ಮೀರಿ ನಿಲ್ಲಬೇಕಾಗುತ್ತದೆ. ಅಂತವುಗಳಲ್ಲಿ ಈ ಮದುವೆಯೂ ಒಂದು. ನಮ್ಮಿಬ್ಬರ ಪ್ರೀತಿಯ ವಿಷಯದಲ್ಲಂತು ಮದುವೆ ನಮ್ಮನ್ನು ಬೆಸೆಯುವ ಬದಲು ಒತ್ತಡ, ಉದ್ವೇಗಗಳಿಗೆ ದೂಡುವ ಅಪಾಯವೇ ಹೆಚ್ಚಿತ್ತು. ಮದುವೆಗೆ ಆಗಮಿಸಬಹುದಿದ್ದ ನಮ್ಮ ಬಾಂಧವರು ನಮ್ಮಂತಹ 'ವಿಚಿತ್ರ' ಜೋಡಿಯನ್ನು ನೋಡುವ ಕುತೂಹಲದಿಂದ ಬರುತ್ತಿದ್ದರೇ ಹೊರತು ನಮಗೆ ಅರಸುವ ಕಾಳಜಿ ಅವರಲ್ಲಿ ಖಂಡಿತ ಇರುತ್ತಿರಲಿಲ್ಲ. ಇಂತಹ ಪ್ರದರ್ಶನ ಮುಖ್ಯವಾಗಿ ಲಕ್ಷ್ಮಿಗೆ ಬಲು ವಿಪರ್ಯಾಸವಾಗಿ ಆಕೆಯ ಮನಸ್ಸನ್ನು ಮತ್ತಷ್ಟು ಘಾಸಿಗೊಳಿಸಬಹುದಾದ ಸಾಧ್ಯತೆ ಇರುತ್ತಿತ್ತು. ಇದೆಲ್ಲಕ್ಕಿಂತ ಮುಖ್ಯವಾಗಿ ಮತ್ತೊಂದು ಕಾರಣವಿದೆ. ನಾವಿಬ್ಬರೂ ಸಮಾಜದಲ್ಲಿ ಮಹಿಳೆಯನ್ನು ದಿಗ್ಬಂಧಿಸುವ ಪ್ರಕ್ರಿಯೆಗಳ ವಿರುದ್ಧ ಧ್ವನಿ ಎತ್ತಬೇಕು ಎಂದುಕೊಂಡಿರುವವರು. ಅಂತಹ ಸಾಮಾಜಿಕ ದಿಗ್ಬಂಧನಗಳಲ್ಲಿ ಮದುವೆಯೂ ಒಂದು. ನಾವೇ ವಿರೋಧಿಸುತ್ತಿರುವ ಅಂತಹ ವ್ಯವಸ್ಥೆಗೆ ನಾವೇ ಒಂದು ಭಾಗವಾಗುವುದಾದರು ಹೇಗೆ? ಹಾಗಾಗಿ ನಮ್ಮ ಪ್ರೀತಿಗೆ ಮುಜುಗರ ಉಂಟುಮಾಡಬಹುದಾದ ಯಾವೊಂದನ್ನು ಸಂಪ್ರದಾಯದ ಹೆಸರಲ್ಲಿ ಹೇರಲು ನಾವು ಬಯಸಲಿಲ್ಲ. ನಮ್ಮ ಪ್ರೀತಿಯನ್ನು ನಮ್ಮಷ್ಟೇ ಗೌರವಿಸುವ ಲಿವ್-ಇನ್ ಬಾಂಧವ್ಯಕ್ಕೆ ಬದ್ಧರಾಗಲು ನಾವು ನಿರ್ಧರಿಸಿದ್ದೇವೆ."

# ನಮೋ ಭಕ್ತನೊಬ್ಬನೊಂದಿಗೆ ಒಂದು ಕಾಲ್ಪನಿಕ ಸಂಭಾಷಣೆ



ನಮೋ ಭಕ್ತರ ಹಾವಳಿ ಈಗ ಪ್ರಜ್ಞಾವಂತರಿಗೆ ದೊಡ್ಡ ತಲೆನೋವಾಗಿದೆ. ಅರ್ಥ, ತರ್ಕವಿಲ್ಲದ ನಮೋ ಭಕ್ತರ ವಾದಗಳೂ ಹಾಸ್ಯಾಸ್ಪದವಾಗಿರುತ್ತದೆ. ಇಲ್ಲಿ ಅಂತಹ ಒಬ್ಬ ಕಾಲ್ಪನಿಕ ವ್ಯಕ್ತಿಯೊಂದಿಗಿನ ಸಂಭಾಷಣೆ ಇದೆ. ನಮೋ ಬ್ರಿಗೇಡಿನ ಪೆದ್ದುತನವನ್ನು ಬಿಂಬಿಸುವ ಈ ಲೇಖನವನ್ನು ಹಾಗೇ ಸುಮ್ಮನೆ ಮಸ್ತ್ ಮಜಾ ಮಾಡಿ!

ಇದೊಂದು ಕಾಲ್ಪನಿಕ ಸಂಭಾಷಣೆ. ಆದರೆ ಇಲ್ಲಿರುವ ...ಮೋ ಭಕ್ತ ಖಂಡಿತವಾಗಿಯೂ ಕಾಲ್ಪನಿಕ ವ್ಯಕ್ತಿ ಅಲ್ಲ. ...ಬಸ್‌ನಲ್ಲಿ ನಿಮ್ಮ ಪಕ್ಕ ಕೂತಿರುವವನಾಗಿರಬಹುದು, ...ಮ್ಮ ಆಫೀಸಿನಲ್ಲಿ ನಿಮ್ಮ ಸೀನಿಯರ್ ಆಗಿರಬಹುದು ...ಥವಾ ನಿಮ್ಮ ಮನೆಯಲ್ಲಿ ನಿಮ್ಮ ತಂದೆಯೋ, ...ಯಿಯೋ ಆಗಿರಲೂಬಹುದು! ಹುಷಾರ್, ಅವರ ...ಗ್ಗೆ ಎಚ್ಚರಿಕೆಯಿಂದಿರಿ. ಯಾಕೆಂದರೆ ಅವರು ನಿಮ್ಮ ...ಡನುಳನ್ನು ತಿಂದು ಬ್ರೈನ್ ಮಸಾಲಾ ಮಾಡಿಬಿಡುತ್ತಾರೆ. ...ಸ್ತವವಾಗಿ ಇಂತಹ ನಮೋ ಭಕ್ತರು ಭಾರತಕ್ಕೆ ...ಕಿಸ್ತಾನಕ್ಕಿಂತಲೂ ಅಪಾಯಕಾರಿಯಾಗಿದ್ದು ಅವರನ್ನು ...ಲ್ಲಿಯಾದರೂ ಕಟ್ಟಿಹಾಕಬೇಕಿದೆ.

ನಾನು: ಹಾಯ್, ನಿಮ್ಮ ಹೆಸರೇನು?

ನಮೋ ಭಕ್ತ: ನಮೋ ನಮಃ.

ನಾನು: ಹೌದು? ವಿಚಿತ್ರವಾಗಿದೆಯಲ್ಲ. ಹೇಗಿದ್ದೀರಿ ...ಮೋ ನಮಃ?

ನಮೋ ಭಕ್ತ: ನಮೋನೇ ದೇವರು. ದೇವರು ಸದಾ ...ಣ್ಣಾಗಿರುತ್ತಾನೆ. ಆದರೆ ನಾನು ದೇವರಲ್ಲ, ನಾನು ಆತನ ...ಬಾಲಕ.

ನಾನು: ನನಗೆ ಅರ್ಥವಾಗಲಿಲ್ಲ.

ನಮೋ ಭಕ್ತ: ನಮೋ ನಮಃ! ನಿಮಗೆ ನಮೋ ...ಗ್ಗೆ ಗೊತ್ತಿಲ್ಲವೇ?? ನಿಮ್ಮಪ್ಪ. . . ಈ ದೇಶದ ಮುಂದಿನ ...ಪ್ರಧಾನಿ ಆಗುವವರು ನಮೋ. ಅದನ್ನು ತಡೆಯಲು ...ಯಾವರಿಂದಲೂ ಸಾಧ್ಯವಿಲ್ಲ.

ನಾನು: ಓ, ನೀವು ನರೇಂದ್ರ ಮೋದಿ ಬಗ್ಗೆ ...ಮಾತನಾಡುತ್ತಿದ್ದೀರಾ?

ನಮೋ ಭಕ್ತ: ಹೌದು. ಈಗ 'ನಮೋ ನಮಃ' ...ಅಂತ ಹೇಳು.

ನಾನು: ಯಾಕೆ? ನನಗೆ ನಮೋ ಇಷ್ಟವಿಲ್ಲ.

ನಮೋ ಭಕ್ತ: ಲೌಡಿ. . .

ನಾನು: ಮಚ್ಚಾ ಚಿಲ್ ಮಾಡು! ನಮೋ ಇಲ್ಲಿಯತನಕ ...ದೇಶಕ್ಕೆ ಯಾವುದೇ ನಿರ್ದಿಷ್ಟ ಯೋಜನೆಯನ್ನು ಘೋಷಿಸಿಲ್ಲ.

ನಮೋ ಭಕ್ತ: ಅವರು ಗುಜರಾತಿನಲ್ಲಿ ಅತಿ ಎತ್ತರದ ...ಪ್ರತಿಮೆಯನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಅವರು ...ದೇಶದ ಐಕ್ಯತೆ ಬಗ್ಗೆ ಅದೆಷ್ಟು ಯೋಚಿಸುತ್ತಾರೆ ಅಂತ ...ನಿಗೆ ಗೊತ್ತಾ?

ನಾನು: ಆದರೆ ಅದು ದುಂದುವೆಚ್ಚ ಅಲ್ಲವಾ? ಬಿಜೆಪಿ ...ಇಂತಹ ದುಂದು ವೆಚ್ಚವನ್ನು ವಿರೋಧಿಸುತ್ತೆ ಅಂತ ನಾನು ...ಅಂದುಕೊಂಡಿದ್ದೆ. ಅದಕ್ಕೆ ಅಲ್ಲವಾ ದೆಹಲಿಯಲ್ಲಿ ಕೇಜ್ರಿವಾಲ್ ...0 ಕೋಟಿ ಸಬ್ಸಿಡಿಯಾಗಿ ಕೊಟ್ಟಿದ್ದನ್ನು ಬಿಜೆಪಿ ...ವಿರೋಧಿಸಿದ್ದು? ಆದರೀಗ ಯಾಕೆ ಮೋದಿಯನ್ನು ಬಿಜೆಪಿ ...ಬೆಂಬಲಿಸುತ್ತಿದೆ?

ನಮೋ ಭಕ್ತ: ಬಾಯಿಮುಚ್ಚು! ನಮೋ ನಮಃ, ...ನಮೋನೇ ದೇವರು. ದೇವರು ಮಾಡುವುದೆಲ್ಲ ಸರಿ!

ನಾನು: ದೇಶದ ಐಕ್ಯತೆ ಬಗ್ಗೆ ಮಾತನಾಡಿದಿರಿ. ಆದರೆ ...ಯಾಕೆ ಮುಸಲ್ಮಾನರು ಆತನಿಂದ ದೂರ ಉಳಿದಿದ್ದಾರೆ?

ನಮೋ ಭಕ್ತ: ಯಾಕೆಂದರೆ ಮುಸಲ್ಮಾನರು ಭಾರತದ ...ವಿರೋಧಿಗಳು!

ನಾನು: ನಿಮ್ಮ ಪ್ರಕಾರ ಮೋದಿಯನ್ನು ವಿರೋಧಿಸುವ ಮುಸಲ್ಮಾನರೆಲ್ಲರೂ ಭಾರತದ ವಿರೋಧಿಗಳಾ?

ನಮೋ ಭಕ್ತ: ಅಲ್ಲ, ಮೋದಿಯವರನ್ನು ವಿರೋಧಿಸುವವರೆಲ್ಲರೂ ಭಾರತದ ವಿರೋಧಿಗಳು. ಅವರು ಹಿಂದೂಗಳಾಗಿದ್ದರೂ ಸಹ!

ನಾನು: (ಆತನ ಲಾಜಿಕ್ ಕಂಡು ಬೆರಗಾಗಿ) ಅದೆಂತಹ ತರ್ಕ? ಇರಲಿ, ಆತ ಯಾಕೆ ತನ್ನನ್ನು ಹಿಂದೂ ರಾಷ್ಟ್ರೀಯವಾದಿ ಎಂದು ಕರೆದುಕೊಂಡದ್ದು? ರಾಷ್ಟ್ರೀಯವಾದಕ್ಕೆ ಧರ್ಮವಿಲ್ಲ ಅಂತ ಅಂದುಕೊಂಡಿದ್ದೆ.

ನಮೋ ಭಕ್ತ: ಯಾಕೆಂದರೆ ಹಿಂದೂಗಳು ಮಾತ್ರ ರಾಷ್ಟ್ರಭಕ್ತರು. ಗರ್ವದಿಂದ ಹೇಳು ನಾನು ಹಿಂದೂ ಎಂದು!

ನಾನು: (ವಿಷಯವನ್ನು ಬದಲಾಯಿಸಲು ಯತ್ನಿಸುತ್ತಾ) ಮೋದಿಯ ಅಭಿವೃದ್ಧಿ ಯೋಜನೆಗಳ ಬಗ್ಗೆ ಒಂದಿಷ್ಟು ಹೇಳು.

ನಮೋ ಭಕ್ತ: ಅವರು ಭಾರತವನ್ನು ಗುಜರಾತಿನಂತೆ ಮಾಡುತ್ತಾರೆ.

ನಾನು: ಯಾಕೆ, ಗುಜರಾತಿಯಲ್ಲಿ ವಿಶೇಷವಾದದ್ದು ಏನಿದೆ?

ನಮೋ ಭಕ್ತ: ಅಲ್ಲಿ ಅವರು ಸರ್ದಾರ್ ಪಟೇಲರ ಪ್ರತಿಮೆಯನ್ನು ಸ್ಥಾಪಿಸಲಿದ್ದಾರೆ.

ನಾನು: ಜೊತೆಗೆ?

ನಮೋ ಭಕ್ತ: ನಮೋ ನಮಃ.

ನಾನು: ಜೊತೆಗೆ?

ನಮೋ ಭಕ್ತ: ಅಹಮದಾಬಾದಿನಲ್ಲಿ ಮೆಟ್ರೋ ಪ್ರಾರಂಭಿಸಲಿದ್ದಾರೆ.

ನಾನು: ಅದರಲ್ಲಿ ವಿಶೇಷ ಎಂತಹದ್ದು? ಈಗಾಗಲೇ ದೆಹಲಿ, ಮುಂಬೈ, ಕೊಚ್ಚಿ ಬೆಂಗಳೂರು ಮತ್ತು ಜೈಪುರಗಳಲ್ಲೂ ಮೆಟ್ರೋ ಇದೆಯಲ್ಲ?

ನಮೋ ಭಕ್ತ: ಆದರೆ ಅಹಮದಾಬಾದಿನಲ್ಲಿ ಬರುವ ಮೆಟ್ರೋ ವಿಶೇಷವಾದದ್ದು. ಯಾಕೆಂದರೆ ಅದನ್ನು ನಿರ್ಮಿಸುತ್ತಿರುವುದು ನಮೋ.

ನಾನು: ಯಾಕೆ, ಅಲ್ಲಿನ ಮೆಟ್ರೋ ರೈಲು ಕಂಬಿಗಳ ಮೇಲೆ ಸಾಗದೆ ಹಾರುತ್ತದೆಯಾ?

ನಮೋ ಭಕ್ತ: ನಮೋ ಹೇಳಿದರೆ ಅವು ಹಾರುತ್ತವೆ!!

ನಾನು: ಹಾಗೇನು? ನಮೋ ಇನ್ನೇನನ್ನು ಸಾಧಿಸಿದ್ದಾರೆ?

ನಮೋ ಭಕ್ತ: ಕೇಜ್ರಿವಾಲ್ ಒಬ್ಬ ಅರಾಜಕ ಮನುಷ್ಯ.

ನಾನು: ಆದರೆ ನಾನು ಕೇಜ್ರಿವಾಲ್ ಬಗ್ಗೆಯೇ ಮಾತನಾಡಲಿಲ್ಲ, ಅವರ ಪ್ರಸ್ತಾಪ ಯಾಕೆ?

ನಮೋ ಭಕ್ತ: ಅವನು ಪಾಕಿಸ್ತಾನಿ ಏಜೆಂಟ್. ಕಾಶ್ಮೀರವನ್ನು ಪಾಕಿಗಳಿಗೆ ಕೊಡಲೂ ಅವನು ಸಿದ್ಧ.

ನಾನು: ಯಾಕೆ ಕೇಜ್ರಿವಾಲ್ ಬಗ್ಗೆ ಮಾತನಾಡುತ್ತಿದ್ದೀರಾ? ನಾವು ನಮೋ ಅವರ ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚಿಸುತ್ತಿದ್ದೆವು.

ನಮೋ ಭಕ್ತ: ಯಾಕೆಂದರೆ ಕೇಜ್ರಿವಾಲ್‌ಗೆ ಫೋರ್ಡ್ ಫೌಂಡೇಷನ್ ಜೊತೆ ನಂಟಿದೆ. ಆತ ಭ್ರಷ್ಟ.

ನಾನು: ನಿಮಗೇನು ಹುಚ್ಚಾ? ಮೋದಿ ನಮ್ಮ ದೇಶಕ್ಕೆ ಏನೇನು ಮಾಡುತ್ತಾರೆ ಎಂದು ನಾನು ಕೇಳಿದ್ದು.

ನಮೋ ಭಕ್ತ: ಅವರು ರಾಹುಲ್ ಗಾಂಧಿ ಮತ್ತು ಕೇಜ್ರಿವಾಲ್ ವಿರುದ್ಧ ಚುನಾವಣೆಯಲ್ಲಿ ಗೆದ್ದು ಈ ದೇಶವನ್ನು ರಕ್ಷಿಸುತ್ತಾರೆ.

ನಾನು: ಓಹೋ, ಅದೋ ಅವರ ಅಭಿವೃದ್ಧಿಯ ಯೋಜನೆ?

ನಮೋ ಭಕ್ತ: ಹೌದು.

ನಾನು: ಹಾಗಾದರೆ ನಾವು ಶೀಘ್ರದಲ್ಲೇ ಚೈನಾದ ಅಭಿವೃದ್ಧಿಯನ್ನೂ ಹಿಂದಕ್ಕೆ ಹಾಕುತ್ತೇವೆ.

ನಮೋ ಭಕ್ತ: ಕರೆಕ್ಟ್.

ನಾನು: ಜನಸಂಖ್ಯೆ ಮತ್ತು ಬಡತನದಲ್ಲಿ ಚೀನಾವನ್ನು ದಾಟಿ ಮುಂದಕ್ಕೆ ಹೋಗುತ್ತೇವೆ ಅಂತ ನಾನು ಅಂದಿದ್ದು.

ನಮೋ ಭಕ್ತ: ಜನಸಂಖ್ಯೆ ನಿಯಂತ್ರಣಕ್ಕೂ ನಮ್ಮ ಬಳಿ ಯೋಜನೆಗಳಿವೆ.

ನಾನು: ಹೌದಾ? ಎಂತಹ ಯೋಜನೆ?

ನಮೋ ಭಕ್ತ: ಗುಜರಾತ್ ಗಲಭೆಗಳ ಪುನರಾವರ್ತನೆ!

ನಾನು: ಏನೂ? ನಿಮಗೆ ಹುಚ್ಚು ಹಿಡಿದಿದೆ ಅನ್ನಿಸುತ್ತೆ.

ನಮೋ ಭಕ್ತ: ಬಾಯಿಮುಚ್ಚು ಹಿಂದೂ ದ್ವೇಷಿ! ನಿಮ್ಮಂತಹ ಜನರಿಂದಲೇ ಭಾರತ ಹಿಂದುಳಿದಿರುವುದು!

ನಾನು: (ವಿಷಯವನ್ನು ಬದಲಾಯಿಸಲು ಮತ್ತೆ ಯತ್ನಿಸುತ್ತಾ) ಅದೆಲ್ಲ ಇರಲಿ, ಮೋದಿ ಏನನ್ನು ಸಾಧಿಸಲಿದ್ದಾರೆ ಎಂಬುದಕ್ಕೆ ನಿಮ್ಮ ಹತ್ತಿರ ಸಾಕ್ಷಿಗಳಿವೆಯಾ?

ನಮೋ ಭಕ್ತ: (ಹೆಮ್ಮೆಯಿಂದ ಒಂದು ಫೋಟೋ ತೋರಿಸಿದ) (ಚಿತ್ರ 1)

ನಾನು: ಇದು ಗುಜರಾತ್‌ನ ಫೋಟೋನಾ?


ನಮೋ ಭಕ್ತ: ಹೌದು. ನಮೋ ಎಂತಹ ಸಾಹಸಿ ಅಂತ ಈಗ ನಿನಗೆ ಅರ್ಥವಾಯಿತಾ?

ನಾನು: (ನಗುತ್ತಾ) ಹೌದೌದು. ಅವರು ಮಹಾನ್ ಸಾಹಸಿ. ಯಾಕೆಂದರೆ ಗುಜರಾತ್ ಇರುವುದು ಹೀಗೆ (ಎನ್ನುತ್ತ ಆತನಿಗೆ ಇನ್ನೊಂದು ಫೋಟೋ ತೋರಿಸಿದ) (ಚಿತ್ರ 2)

1



2



ನಮೋ ಭಕ್ತ: ಬಾಯಿಮುಚ್ಚು. ಇದು ಫೇಕ್ ಫೋಟೋ.

ನಾನು: ನನ್ನ ಫೋಟೋ ಫೇಕ್ ಅಲ್ಲ, ನಿನ್ನ ಫೋಟೋ ಫೇಕ್. ಯಾಕೆಂದರೆ ನನ್ನ ಫೋಟೋದಲ್ಲಿರುವುದು ಗುಜರಾತ್, ನಿನ್ನ ಫೋಟೋದಲ್ಲಿರುವುದು ಕೊರಿಯಾ!

ನಮೋ ಭಕ್ತ: ಅದಕ್ಕೇ ಹೇಳಿದ್ದು ನಮೋ ಎಂತಹ ಅದ್ಭುತ ಸಾಧನೆ ಮಾಡುತ್ತಾರೆ ಎಂದು!

ನಾನು: ಹೋಗಲಿ, ನಮೋ ಸಾಧನೆ ಬಗ್ಗೆ ಬೇರೆ ಏನನ್ನು ತೋರಿಸಬಲ್ಲೆ?

ನಮೋ ಭಕ್ತ: ಇದು ಸಬರಮತಿ ನದಿಯ ಚಿತ್ರ. ನೋಡು ಇದರಲ್ಲಿ ನೀರು ಆಕಾಶದಷ್ಟೇ ನೀಲಿಯಾಗಿದೆ. (ಚಿತ್ರ 3)

⏭ 08

3



4



# ಬೆಂಕಿಯಲ್ಲಿ...


16 ⏮

ಆಪ್ಪಾದರು ಪತ್ರಕರ್ತನಾಗಿ ಸಮಾಜಸೇವೆಯ ತನ್ನ ಪ್ರವೃತ್ತಿಯನ್ನು ಈಡೇರಿಸಿಕೊಳ್ಳಬಹುದೆಂದು ಬಂದ ಆತನಿಗೆ ಮಾಧ್ಯಮ ಪ್ರಪಂಚವೂ ನಿರಾಸೆಯನ್ನೇ ನೀಡಿತ್ತು. ಈ ಕ್ಷೇತ್ರ ಕೂಡ ತನಗೆ ತಕ್ಕುದಾದುದಲ್ಲ ಎಂಬುದನ್ನರಿತ ಆತ ಆಯ್ದುಕೊಂಡದ್ದು ಆ್ಯಸಿಡ್ ದಾಳಿಗೆ ತುತ್ತಾದವರ ಧ್ವನಿಯಾಗಿ ನಿಂತು, ಸಮಾಜದಲ್ಲಿ ಅವರಿಗೆ ಮಾನ್ಯತೆ ಕಲ್ಪಿಸುವ ಜೊತೆಗೆ ಅಂತಹ ವಿಕೃತಿಯನ್ನು ತೊಡೆದುಹಾಕುವ ಆತ್ಮತೃಪ್ತಿಯ ಕಾಯಕವನ್ನು. ಆತ ಪತ್ರಕರ್ತನಾಗಿದ್ದಾಗ ಒಮ್ಮೆ ಆ್ಯಸಿಡ್ ಸಂತ್ರಸ್ತರ ಕುರಿತು ನೀಡಿದ ಒಂದು ವರದಿಯೇ ಆತನ 'ಸ್ಟಾಪ್ ಆಸಿಡ್ ಅಟ್ಯಾಕ್' ಅಭಿಯಾನದ ಪ್ರೇರಣೆ.

ದೇಶಾದ್ಯಂತ ಹೀಗೆ ಆ್ಯಸಿಡ್ ವಿಕೃತಿಗೆ ತುತ್ತಾದವರನ್ನು ಸಂಪರ್ಕಿಸಿ, ಅವರಲ್ಲಿ ಜೀವನೋತ್ಸಾಹ ಆತ್ಮಸ್ಥೈರ್ಯಗಳನ್ನು ತುಂಬಿ ತಮ್ಮ ಹಕ್ಕಿಗಾಗಿ ಹೋರಾಡಲು ಅವರನ್ನು ಪ್ರೋತ್ಸಾಹಿಸುವುದು ಮತ್ತು ಆ ಹೋರಾಟದ ಜೊತೆಗಿದ್ದು ಇಂತಹ ವಿಕೃತ ಮನೋಭಾವಕ್ಕೆ ಅಂತ್ಯ ಹಾಡುವುದು ದೀಕ್ಷಿತ್‌ನ ಕನಸು. ಹೀಗೆ ಸುಮಾರು 50ಕ್ಕೂ ಹೆಚ್ಚು ನತದೃಷ್ಟರನ್ನು ಆತ ಪತ್ತೆ ಹಚ್ಚಿ ಸಂಕೋಚ-ಕೀಳರಿಮೆಗಳಿಂದ ಅವರನ್ನು ಹೊರಗೆಳೆದು ಹೋರಾಡುತ್ತಲೇ ಬರುತ್ತಿದ್ದಾನೆ. ಅಂತಹ ಐವತ್ತು ಜನರಲ್ಲಿ ಲಕ್ಷ್ಮಿಯನ್ನೂ ಆತ ಕಳೆದ ವರ್ಷ ಭೇಟಿಯಾಗಿದ್ದ. ಅಷ್ಟರಲ್ಲಾಗಲೆ ಲಕ್ಷ್ಮಿಗೂ ತಾನು ಹೀಗೆ ಬಂಧಿಯಾಗಿ ಬದುಕು ಸವೆಸುವುದಕ್ಕಿಂತ ಬದಲಾವಣೆಗೆ ಹಾದಿಯಾಗಬೇಕೆನ್ನುವ ತುಡಿತ ಶುರುವಾಗಿತ್ತು. ಆದರೆ ಅದಕ್ಕೆ ಬೇಕಾದ ಸ್ಫೂರ್ತಿ ಆಕೆಗೆ ಸಿಕ್ಕಿರಲಿಲ್ಲ.

2013ರ ಜುಲೈ ತಿಂಗಳಲ್ಲಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯು ಆ್ಯಸಿಡ್ ದಾಳಿಗೆ ತುತ್ತಾಗಿಯೂ ದಿಟ್ಟ ಬದುಕು ಕಟ್ಟಿಕೊಳ್ಳುತ್ತಿರುವ ಮಹಿಳೆಯರ ಸರಣಿ ವರದಿಯೊಂದನ್ನು ಪ್ರಕಟಿಸಿತ್ತು. ಆ ಸರಣಿಯಲ್ಲಿ ಒಮ್ಮೆ ಲಕ್ಷ್ಮಿಯ ವೃತ್ತಾಂತ ಪ್ರಸ್ತಾಪವಾಗಿತ್ತು. ಆಲೋಕ್ ಮತ್ತು ಲಕ್ಷ್ಮಿಯನ್ನು ಬೆಸೆಯುವಲ್ಲಿ ಅದು ಪ್ರಮುಖ ಪಾತ್ರ ವಹಿಸಿತು.

ಸಂತ್ರಸ್ತರ ಹಕ್ಕಿಗಾಗಿ ಹೋರಾಡಬೇಕೆಂದು ಆಲೋಕ್‌ಗೆ ಅನ್ನಿಸಿದ್ದಾಗಲಿ, ಭ್ರಮಾತ್ಮಕ ಅಸಹಾಯಕತೆಯನ್ನು ಧಿಕ್ಕರಿಸಿ ಬದುಕಬೇಕೆಂದು ಲಕ್ಷ್ಮಿಗೆ ಅನ್ನಿಸಿದ್ದಾಗಲಿ, ಹೋರಾಟದ ಹಾದಿಯಲ್ಲಿ ಈ ಇಬ್ಬರೂ ಪರಸ್ಪರ ಭೇಟಿಯಾದದ್ದಾಗಲಿ ಎಲ್ಲವೂ ಒಂದು ಸಾಮಾಜಿಕ ಸಂಚಲನೆಯ ಭಾಗ. ಆ ಸಂಚಲನೆಯಲ್ಲಿ ಅವರಿಬ್ಬರ ಭಾವನೆಗಳೂ ಬೆಸೆದುಕೊಂಡವು. ಪರಸ್ಪರ ಗೌರವ, ಮೆಚ್ಚುಗೆ, ಒಡನಾಟಗಳು ಇಬ್ಬರಲ್ಲೂ ಪ್ರೇಮವನ್ನು ಅಂಕುರಿಸಿದ್ದವು. ದೇಹ ಸೌಂದರ್ಯವನ್ನೂ ಮೀರಿ ಆತ್ಮ ಸೌಂದರ್ಯದ ಪರಿಧಿಯಲ್ಲಿ ಮೊಳೆತ ಪ್ರೇಮ ಅವರದು. ಯಾಕೆಂದರೆ ಸತತ ಏಳು ಸರ್ಜರಿಗಳಾದ ಮೇಲೂ ಲಕ್ಷ್ಮಿಯ ಮುಖ ಫ್ಯಾಂಟಸಿಯ ಪ್ರೇಮಕ್ಕೆ ಒಗ್ಗುವಂತದ್ದಾಗಿರಲಿಲ್ಲ. ಪ್ರೇಮ ಒಂದು ನವಿರು ಭಾವನೆಯೇ ಹೊರತು ಕಣ್ಣಳತೆಯ ಸೆಳೆತವಲ್ಲ ಎಂಬುದನ್ನು ಅವರ ಪ್ರೇಮ ರುಜುವಾತು ಮಾಡಿದೆ. ಸ್ವತಃ ಆಲೋಕ್ ಹೇಳಿಕೊಳ್ಳುವಂತೆ "ನಾನು ಮೊದಲ ಬಾರಿ ಲಕ್ಷ್ಮಿಯನ್ನು ಭೇಟಿಯಾಗಲು ಹೋದಾಗ ಎಲ್ಲಾ ಸಂತ್ರಸ್ತೆಯರಂತೆ ತಮ್ಮ ಕುರೂಪಿ ಮುಖವನ್ನು ಮುಚ್ಚಿಕೊಂಡು, ತಮ್ಮ ಸ್ಥಿತಿಗೆ ಮರುಕವನ್ನು ಹೊತ್ತುಕೊಂಡು ಎದುರಾಗುತ್ತಾಳೆ ಎಂದೇ ಭಾವಿಸಿದ್ದೆ. ಆದರೆ ಅಲ್ಲಿ ನನಗೆ ಅಚ್ಚರಿಯಾಯಿತು. ಯಾಕೆಂದರೆ ಲಕ್ಷ್ಮಿ ತನ್ನ ಮುಖವನ್ನು ಮುಚ್ಚಿಕೊಳ್ಳುವ ಪ್ರಯತ್ನವನ್ನೂ ಮಾಡದೆ, ಮುಜುಗರವಿಲ್ಲದೆ ನಮ್ಮ ಮುಂದೆ ಬಂದಳು. ಆಗ ಆಕೆಯಲ್ಲಿ ನನಗೊಬ್ಬ ಹೋರಾಟಗಾತಿ ಕಂಡಳು. ಲಕ್ಷ್ಮಿಯ ದಿಟ್ಟತನ, ಆತ್ಮವಿಶ್ವಾಸ, ಜೀವನಪ್ರೀತಿಗೆ ನಾನು ಆ ಕ್ಷಣವೇ ಸೋತುಹೋಗಿದ್ದೆ. ನಿಧಾನಕ್ಕೆ ಅದು ಪ್ರೀತಿಯಾಗಿ ಬದಲಾಗಿದೆಯಷ್ಟೆ." ಪುರುಷರೆಂದರೇ ಉರಿದು ಬೀಳುತ್ತಿದ್ದ ಲಕ್ಷ್ಮಿ, ಆಲೋಕ್‌ನನ್ನು ಪ್ರೀತಿಸಿದ ಕುರಿತು ಹೀಗೆನ್ನುತ್ತಾಳೆ "ಪ್ರೀತಿ ನನ್ನ ಬದುಕನ್ನೇ ವಿಕಾರವಾಗಿಸಿದ ದುರಂತ. ಆಲೋಕ್ ಆಗಮನಕ್ಕೂ ಮುನ್ನ ನಾನೂ ಎಲ್ಲರಂತೆ ಪ್ರೀತಿ, ಪ್ರೇಮದ ಸಿನಿಮಾ ಹಾಡುಗಳನ್ನು ಅಭ್ಯಾಸ ಬಲದಿಂದ ಗುನುಗಾಡುತ್ತಿದ್ದೆ. ಆಗೆಲ್ಲ ಹಾಡಿನ ಪದಗಳು ಟೊಳ್ಳಾಗಿರುವಂತೆ, ನನ್ನ ಬದುಕನ್ನು ಅಣಕಿಸುತ್ತಿರುವಂತೆ ಭಾಸವಾಗುತ್ತಿತ್ತು. ದಾಳಿಯ ಕೆಲಕಾಲದ ನಂತರ ನಾನು ದೇಹಕ್ಕೆ ಆಗಿದ್ದ ಗಾಯಗಳ ನೋವುಗಳನ್ನು ಸಹಿಸಿಕೊಳ್ಳುವುದನ್ನೇನು ಕಲಿತೆ, ಆದರೆ ಈ ಸಮಾಜ ನನ್ನೊಂದಿಗೆ ವರ್ತಿಸಿದ ರೀತಿ ಗಾಯಗಳಿಗಿಂತಲೂ ಹೆಚ್ಚಾಗಿ ನನ್ನನ್ನು ನೋಯಿಸಿತು. ಸ್ವಂತ ಬಂಧುಗಳೇ ನನ್ನನ್ನು ನೋಡುವುದರಿಂದ ತಪ್ಪಿಸಿಕೊಳ್ಳುತ್ತಿದ್ದರು. ಎಂಟು ವರ್ಷಗಳ ಕಾಲ ಮನೆಯೊಳಗೇ ಬದುಕು ಕಳೆದೆ. ಅನಿವಾರ್ಯವಾಗಿ ಹೊರಬರಬೇಕಾದಾಗ ಮುಖದ ಮೇಲೆ ಬಟ್ಟೆ ಇರಲೇಬೇಕಿತ್ತು. ಒಟ್ಟಿನಲ್ಲಿ ನನ್ನ ಜೀವನ ಉಸಿರುಗಟ್ಟಿಸಿದ ಪ್ರಯಾಸದಾಯಕ ಅನ್ನಿಸುತ್ತಿತ್ತು. ಆದರೆ ಆಲೋಕ್ ನನ್ನ ಉಸಿರಿಗೆ ತಾಜಾ ಗಾಳಿಯಾಗಿ ತೂರಿಕೊಂಡ. ನನ್ನೆಲ್ಲಾ ಪ್ರಯಾಸಗಳನ್ನು ಆತ ಹಂಚಿಕೊಳ್ಳಬಲ್ಲನೆಂಬ ಭರವಸೆ ನನಗೆ ಮೂಡಿತು. ಅದು ಪ್ರೇಮವಾಗಿ ಬದಲಾಯಿತು. ಈಗ ನಾವಿಬ್ಬರೂ ಖುಷಿಯಾಗಿದ್ದೇವೆ. ವಿಪರ್ಯಾಸ ನೋಡಿ. ಒಬ್ಬ ಗಂಡಸು ನನ್ನ ಜೀವನವನ್ನೇ ಕತ್ತಲಾಗಿಸಿ ಹೋದ, ಮತ್ತೊಬ್ಬ ಗಂಡಸು ಅದೇ ಜೀವನವನ್ನು ಬೆಳಕಾಗಿಸಲು ಹೋರಾಡುತ್ತಿದ್ದಾನೆ."




ನಿರೀಕ್ಷೆಯಂತೆ ಆಲೋಕ್ ದೀಕ್ಷಿತ್‌ನ ತಂದೆ ಇದನ್ನು ವಿರೋಧಿಸಿದರು. ಕಾಲೇಜೊಂದರ ಪ್ರಾಂಶುಪಾಲರಾಗಿದ್ದರೂ ಅವರು ತಮ್ಮ ಮಗ ಕುರೂಪಿ ಹೆಣ್ಣೊಬ್ಬಳ ಜೊತೆ ಬಾಳು ಹಂಚಿಕೊಳ್ಳುತ್ತಾನೆಂಬುದನ್ನು ಅವರು ವಿಶಾಲಾರ್ಥದಲ್ಲಿ ನೋಡಲಾಗಲಿಲ್ಲ. ಕೊಂಚ ಕೌಟುಂಬಿಕ ಕೊಸರಾಟ ನಡೆದೇ ಇತ್ತು. ಆಗ ಆಲೋಕ್‌ನ ಸಹಾಯಕ್ಕೆ ಬಂದದ್ದು ಆತನ ತಾಯಿ. ಸಮಾಜಮುಖಿ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಲೇ ಕಾನ್ಪುರದಲ್ಲಿ ಹೆಣ್ಮಕ್ಕಳ ಶಿಕ್ಷಣಕ್ಕಾಗಿ ಶಾಲೆಯೊಂದನ್ನು ತೆರೆದು ನಡೆಸುತ್ತಿರುವ ಆಕೆ ಮೊದಲಿನಿಂದಲೂ ಮಗನ ಮಾನವೀಯ ಸೆಲೆಯ ಆಲೋಚನೆಗಳ ಬೆನ್ನುತಟ್ಟುತ್ತಲೇ ಬಂದಿದ್ದರು. ಲಕ್ಷ್ಮಿಯನ್ನು ಪ್ರೇಮಿಸುವ ವಿಚಾರದಲ್ಲೂ ಆಕೆ ಮಗನನ್ನು ಬಲವಾಗಿ ಬೆಂಬಲಿಸಿ ಪ್ರೋತ್ಸಾಹಿಸಿದ್ದಳು.

ಪರಸ್ಪರ ಪ್ರೀತಿಸಿದರೂ, ಒಟ್ಟಿಗೆ ಬಾಳುವ ನಿರ್ಧಾರ ಕೈಗೊಂಡರೂ ಅವರು ಮದುವೆಯಾಗಲು ಬಯಸಲಿಲ್ಲ. ಮದುವೆ ಎನ್ನುವ ಸಂಪ್ರದಾಯದ ಕಟ್ಟುಪಾಡು ಇಲ್ಲದೆ ಒಬ್ಬರನ್ನೊಬ್ಬರು ಗೌರವಿಸುವ, ಪ್ರೀತಿಸುವ, ಸ್ಪಂದಿಸುವ 'ಲಿವಿಂಗ್ ಟುಗೆದರ್' ಬಾಂಧವ್ಯದಲ್ಲಿ ಒಟ್ಟಿಗೇ ಬದುಕು ಸವೆಸುತ್ತಿದ್ದಾರೆ. ಈ ವಿಷಯದಲ್ಲೂ ಅವರು ಸಮಾಜದಿಂದ ಕೊಂಚ ಪ್ರತಿರೋಧ ಎದುರಿಸಬೇಕಾಯಿತು. ಅವರಿಬ್ಬರ ದಿಟ್ಟತನ, ನಿಷ್ಕಲ್ಮಷ ಪ್ರೀತಿಯ ಮುಂದೆ ಆ ತಡೆಯೂ ನಿಲ್ಲಲಿಲ್ಲ.

ಈಗ ಇಬ್ಬರೂ ಜೊತೆಗೂಡಿ ಆ್ಯಸಿಡ್ ಪೀಡಿತರಿಗೆ ನ್ಯಾಯ ಒದಗಿಸಲು ಹೋರಾಡುತ್ತಿದ್ದಾರೆ. ಇತ್ತೀಚೆಗಷ್ಟೆ 'ಸ್ಪಾಟ್ ಆಫ್ ಶೇಮ್' ಎಂಬ ಹೆಸರಿನಲ್ಲಿ ದೇಶದಾದ್ಯಂತ ಒಂದು ಆಂದೋಲನವನ್ನೇ ಹುಟ್ಟು ಹಾಕಿದ್ದಾರೆ. ಈಗಾಗಲೇ 7 ನಗರಗಳಲ್ಲಿ ಅದು ಕಾರ್ಯಾಚರಣೆಗೂ ಬಂದಿದೆ. ಆ್ಯಸಿಡ್ ದಾಳಿ ನಡೆದ ಜಾಗಕ್ಕೇ ಹೋಗಿ ಅಲ್ಲಿಯೇ ಜನರಲ್ಲಿ ಈ ವಿಕೃತಿಯ ತೊಡೆದುಹಾಕಲು ಬದ್ಧತೆ ಮೂಡಿಸುವ, ಸಂತ್ರಸ್ತರನ್ನು ಸಮಾನರಾಗಿ ಕಾಣುವಂತೆ ಪ್ರೇರೇಪಿಸುವ, ಮಹಿಳೆ ಮೇಲೆ ಸಾರ್ವಜನಿಕವಾಗಿ ಎಂತಹುದೇ ದೌರ್ಜನ್ಯ ನಡೆಯುತ್ತಿದ್ದರೂ ಸಹಾಯಕ್ಕೆ ಧಾವಿಸುವಂತೆ ಜನರಲ್ಲಿ ಜಾಗೃತಿ ಕೆರಳಿಸುವ ಜಾಥಾ ಅದು. ಅವರ ಈ ಕೆಲಸಕ್ಕೆ ನೂರಾರು ಪ್ರಗತಿಪರರು, ಸಮಾನಮನಸ್ಕರು, ಸ್ನೇಹಜೀವಿಗಳು ಕೈಜೋಡಿಸಿ ಅಭಿಯಾನವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇದಕ್ಕೋಸ್ಕರ ರಾಜಕಾರಣಿಗಳಿಂದಾಗಲಿ ಅಥವಾ ಕಾರ್ಪೋರೇಟ್ ವಲಯಗಳಿಂದಾಗಲಿ ಹಣ ಸಂಗ್ರಹಿಸದೆ ಇಂತಹ ಚಿಂತನೆಯನ್ನು ಮನಃಪೂರ್ವಕವಾಗಿ ಪ್ರೋತ್ಸಾಹಿಸುವ ಸಮಾನಮನಸ್ಕರ ನೆರವಿನಿಂದ ಇಂತದ್ದೊಂದು ಆಂದೋಲನವನ್ನು ನಡೆಸುತ್ತಿರುವುದೂ ವಿಶೇಷ. ಅಂದಹಾಗೆ, ಆಲೋಕ್ ಮತ್ತು ಲಕ್ಷ್ಮಿ, ಅವರ ಸಂಗಡಿಗರ ಹೋರಾಟ ಕಳೆದ ವರ್ಷ ಆ್ಯಸಿಡ್‌ನ ಮುಕ್ತ ಮಾರಾಟದ ಮೇಲೆ ಸರ್ಕಾರ ನಿರ್ಬಂಧ ಹೇರುವಂತೆ ಮಾಡುವಲ್ಲಿಯೂ ಯಶಸ್ವಿಯಾಗಿದೆ.

ಪ್ರೇಮಕ್ಕೆ 'ಆಲೋಕ್-ಲಕ್ಷ್ಮಿ' ಬದುಕಿಗಿಂತಲೂ ಸೂಕ್ತ ಅರ್ಥ ಹುಡುಕಲು ಸಾಧ್ಯವೆ....

● ಗಿರೀಶ್ ತಾಳಿಕಟ್ಟೆ

# ಒಂದು ಕಾಲ್ಪನಿಕ ಸಂಭಾಷಣೆ

07 ⏮

ನಾನು: ಹಾಗಾದರೆ ಈ ಚಿತ್ರದಲ್ಲಿರುವ ನದಿ ಯಾವುದು? (ಚಿತ್ರ 4)

ನಮೋ ಭಕ್ತ: ಇದು ಫೋಟೋಶಾಪ್ ಮಾಡಿರುವ ಚಿತ್ರ. ಬೇಕಂತಲೇ ನೀಲಿ ನೀರನ್ನು ಮಣ್ಣಿನ ಬಣ್ಣಕ್ಕೆ ಬದಲಾಯಿಸಿ ಅದರ ಮೇಲೆ ನಮೋ ಫೋಟೋವನ್ನು ಅಂಟಿಸಲಾಗಿದೆ.

ನಾನು: ಅದೆಲ್ಲ ಬಿಡಪ್ಪ, ಗಾಂಧಿ ಅವರ ಪೂರ್ತಿ ಹೆಸರೇನು?

ನಮೋ ಭಕ್ತ: ಮೋಹನ್‌ಲಾಲ್ ಕರಮಚಂದ್ ಗಾಂಧಿ.

ನಾನು: ಇಲ್ಲ, ಅವರ ಪೂರ್ಣ ಹೆಸರು ಮೋಹನ್‌ದಾಸ್ ಕರಮ ಚಂದ್ ಗಾಂಧಿ.

ನಮೋ ಭಕ್ತ: ಆದರೆ ನಮೋ ಅವರಿಗೆ ಮರುನಾಮಕರಣ ಮಾಡಿದ್ದಾರೆ.

ನಾನು: ಹಾಗೇನು? ಭ್ರಷ್ಟಾಚಾರ ತಡೆ, ಅಭಿವೃದ್ಧಿ ಮಾರ್ಗ, ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿ, ಬಡತನ ನಿರ್ಮೂಲನೆ ಇತ್ಯಾದಿಗಳ ಬಗ್ಗೆ ನಿಮ್ಮ ಮೋದಿ ಏನು ಹೇಳುತ್ತಾರೆ? ಈ ಪ್ರಶ್ನೆ ಯಾಕೆಂದರೆ ಇವತ್ತಿಗೂ ಗುಜರಾತ್‌ನಲ್ಲಿ ಬಡತನವಿದೆ, ಅಲ್ಲಿನ ಶಿಕ್ಷಣ ವ್ಯವಸ್ಥೆಯೂ ಕೆಟ್ಟದಾಗಿದೆ. ಸಚಿವರು ಭ್ರಷ್ಟರಾಗಿದ್ದಾರೆ. ಗುಜರಾತಿನ ರಸ್ತೆಗಳು ಗುಂಡಿಗಳಿಂದ ತುಂಬಿಹೋಗಿವೆ.

ನಮೋ ಭಕ್ತ: ಕೇಜ್ರಿವಾಲ್ ಅರಾಜಕ ವ್ಯಕ್ತಿ, ಅವರು ಮಾವೋವಾದಿಗಳ ನಾಯಕ. ರಾಹುಲ್ ಗಾಂಧಿಗೆ ಬುದ್ಧಿ ಇಲ್ಲ, ನಾವು ವಂಶಾಡಳಿತವನ್ನು ಕಿತ್ತು ಹಾಕುತ್ತೇವೆ.

ನಾನು: ಬಿಜೆಪಿಗೆ ಎಲ್ಲಿಂದ ಹಣ ಬರುತ್ತದೆ? ಅದನ್ನು ಅವರು ಎಂದೂ ಬಹಿರಂಗಪಡಿಸಿಲ್ಲ ಯಾಕೆ?

ನಮೋ ಭಕ್ತ: ದೇಶವನ್ನು ನಾಶಮಾಡಲು ಹೊರಟಿರುವ 'ಆಪ್'ನಿಷ್ಠರು ಕೇಜ್ರಿವಾಲ್‌ಗೆ ಹಣ ಕೊಡುತ್ತಿದ್ದಾರೆ. ಆತ ಪಾರದರ್ಶಕವಾಗಿಲ್ಲ.

ನಾನು: (ನಿರಾಶೆಗೊಂಡು) ಅಲ್ರೀ, ಅವರು ಎಲ್ಲ ವಿವರಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಹಾಕಿದ್ದಾರಲ್ಲ?

ನಮೋ ಭಕ್ತ: ಅದನ್ನು ನೋಡೋದಿಕ್ಕೆ ನನಗೆ ಪುರುಸೊತ್ತಾಗಿಲ್ಲ. ಅವರೆಲ್ಲ ಸುಳ್ಳುಬುರುಕರು.

ನಾನು: ನಿಮ್ಮ ತರ್ಕ ವಿಚಿತ್ರವಾಗಿದೆ. ಅಲ್ಲಾ, ಕಾಂಪಟ್ರೋಲರ್ ಆಡಿಟರ್ ಜನರಲ್ ಅವರು ಮೋದಿಯ ನೀತಿಗಳಿಂದಾಗಿ ಗುಜರಾತ್‌ನ ಬೊಕ್ಕಸಕ್ಕೆ 16,000 ರೂಪಾಯಿ ನಷ್ಟವಾಗಿದೆ ಎಂದಿದ್ದರಲ್ಲ? ಅದರ ಬಗ್ಗೆ ಏನಂತೀರಾ?

ನಮೋ ಭಕ್ತ: ಕಾಂಗ್ರೆಸ್‌ನ 'ಬಿ'ಟೀಂ ಅಷ್ಟೇ ಆಪ್.

ನಾನು: ಅಯ್ಯಯ್ಯೋ!

ನಮೋ ಭಕ್ತ: ಅಯ್ಯಯ್ಯೋ ಅಲ್ಲ, ಆಪ್!

ನಾನು: ಹುಚ್ಚ, ತೊಲಗು ಇಲ್ಲಿಂದ.

ನಮೋ ಭಕ್ತ: ನನಗೆ ಗೊತ್ತಿತ್ತು ನೀನು ಆಪ್ ಬೆಂಬಲಿಗ ಅಂತ.

ನಾನು: ನಾನು ಆಪ್ ಬೆಂಬಲಿಗನೂ ಅಲ್ಲ, ಕಾಂಗ್ರೆಸ್ ಬೆಂಬಲಿಗನೂ ಅಲ್ಲ. ನೀನು ತೊಲಗು!

ನಮೋ ಭಕ್ತ: ದೇಶದ್ರೋಹಿ!

ನಾನು: ಒಂದು ಕೊಡ್ತೀನಿ ನೋಡೀಗ!

ನಮೋ ಭಕ್ತ: ನೀವು ಹಿಂಸಾವಾದಿಗಳು. ಆದರೆ ಬಿಜೆಪಿ ಅಹಿಂಸೆಯನ್ನು ನಂಬುವ ಪಕ್ಷ.

ನಾನು: ಹೌದಾ? ಅಯೋಧ್ಯೆಯಲ್ಲಿ, ಗೋಧ್ರಾದಲ್ಲಿ ಹಿಂಸಾಚಾರ ಮಾಡಿದವರು ಯಾರು?

ನಮೋ ಭಕ್ತ: 1984ರ ಸಿಖ್ ಹತ್ಯಾಕಾಂಡಕ್ಕೆ ಕಾರಣವಾಗಿದ್ದವರು ಯಾರು?

ನಾನು: ಜನರನ್ನು ಕೊಲ್ಲೋದು, ಕೋಮುಗಲಭೆ ಸೃಷ್ಟಿಸೋದು, ಆಮೇಲೆ ಬೇರೆಯವರೂ ಇದನ್ನೇ ಮಾಡಿದ್ದಾರೆ ಅಂತ ವಾದಿಸುತ್ತೀಯಲ್ಲ?

ನಮೋ ಭಕ್ತ: ಅವರು 3000 ಜನರನ್ನು ಕೊಂದರು. ನಾವು ಕೇವಲ 1,000 ಜನರನ್ನು ಕೊಂದೆವು. ಆದ್ದರಿಂದ ನಾವೇ ಅವರಿಗಿಂತ ಬೆಟರ್.

ನಾನು: @#*$&$@%)^&

ನಮೋ ಭಕ್ತ: (ದೆವ್ವದಂತೆ ನಗುತ್ತಾ) ಹಹಹ, ನಿನ್ನನ್ನು ಸೋಲಿಸುವಲ್ಲಿ ನಾನು ಕೊನೆಗೂ ಯಶಸ್ವಿಯಾದೆ! ನಾವು ಹೀಗೆ ಮಾಡುತ್ತಾ ಈ ದೇಶದಲ್ಲಿ ಬರೀ ನಮೋ ಭಕ್ತರು ಮತ್ತು ಬ್ರೈನ್ ವಾಶ್ ಆಗಿರುವ ಜಿಹಾದಿಗಳು ಇರುವಂತೆ ಮಾಡುತ್ತೇವೆ. ನೀನು ಮೋದಿಯನ್ನು ಬೆಂಬಲಿಸಲ್ಲ ಎಂದೆ. ಅದಕ್ಕೆ ಈಗ ನಿನನ್ನು ಬ್ರೈನ್‌ವಾಶ್ ಆಗಿರುವ್ ಜಿಹಾದಿಯಂತೆ ಮಾಡಿದ್ದೇನೆ! ಹಹಹ!!!

ಈಗ ನಾನು ಯೋಚಿಸುವ ಸಾಮರ್ಥ್ಯವನ್ನು ಮತ್ತು ನಮೋ ಭಕ್ತರೊಂದಿಗೆ ಚರ್ಚೆ ನಡೆಸುವ ಶಕ್ತಿಯನ್ನೂ ಕಳೆದುಕೊಂಡಿದ್ದೇನೆ. ಈಗ ನಮೋ ಭಕ್ತ ಎಂಬ ಪದ ಕೇಳಿದರೇನೇ ನನ್ನಲ್ಲಿ ನಡುಕ ಉಂಟಾಗುತ್ತದೆ. ನಮೋ ಭಕ್ತರ ಸಂಖ್ಯೆ ಈಗ ಹೆಚ್ಚಾಗಿದ್ದು ಅವರೆಲ್ಲ ಮರುಜೀವ ಪಡೆದಿರುವ ಹೆಣಗಳಂತೆ ತಮ್ಮ ಹಾದಿಯಲ್ಲಿ ಸಿಕ್ಕವರನ್ನೆಲ್ಲಾ ತಿಂದು ಹಾಕುತ್ತಿದ್ದಾರೆ. ಹುಷಾರ್!

● ಮನೀಶ್ ಪಾಲ್
ಕನ್ನಡಕ್ಕೆ: ಸಾವಂತ್ರಿ

ತೆ ಅಪ್ರತಿಮ ಸುಂದರಿ. ಪತಿಯು ಗ್ರಾಮಾಂತರ ವಿಭಾಗದಲ್ಲಿ ಾಲೆಯ ಮುಖ್ಯೋಪಾಧ್ಯಾಯರು. ಆದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಾಲವಾಗಲಿ ಎಂದು ಮಕ್ಕಳನ್ನೂ ನಗರ ಪ್ರದೇಶದ ಶಾಲೆಗೆ ಸೇರಿಸಿ, ನಿಗಾವಣೆಯಲ್ಲಿ ಮಕ್ಕಳ ವಿದ್ಯಾಭ್ಯಾಸ ಸುಸೂತ್ರವಾಗಿ ನೆರವೇರುತಿದೆ ನೆಮ್ಮದಿಯಾಗಿ ತನ್ನ ಕಾಯಕದಲ್ಲಿ ತೊಡಗಿಸಿಕೊಂಡ ಪತಿ. ಆದರೆ, ವಿರಾರು ವಿದ್ಯಾರ್ಥಿಗಳಿಗೆ ಅನ್ನವನ್ನಿತ್ತು ಪೋಷಿಸಿದ ಕೊಡುಗೈ ತಾಯಿ. ಮನೆ ಅತಿಥಿ ಅಭ್ಯಾಗತರ ಸಲುವಾಗಿ ಸದಾ ತೆರೆದಿತ್ತು, ಹಾಗಿರಬೇಕೆಂದು ಆದೇಶ.

ೀಗಿರುವಾಗ, ರಾತ್ರಿಯ ಊಟಕ್ಕೆಂದು ಒಬ್ಬ ಮಾಸ್ತರ ಬಂದ. ಅವನಿಗೆ ಕ್ಕಿದ ನಂತರ ತನ್ನ ಕೊನೆಯ ಬಸ್ ಕೂಡಾ ಹೋಯಿತೆಂದು ಅಲ್ಲಿಯೇ . ಮುಂದಿನ ಹೊರ ಕೋಣೆಯಲ್ಲಿ ಅವನಿಗೆ ವ್ಯವಸ್ಥೆ ಮಾಡಲಾಯಿತು. ರಾತ್ರಿಯಾಗುತ್ತಿದ್ದಂತೆಯೇ ಆ ವ್ಯಕ್ತಿ ಕೀಚಕನ ಅಪರಾವತಾರವಾದ. ಹೊರ ಕೋಣೆಯಲ್ಲಿ ಚಳಿಯಾಗುತ್ತಿದೆ; ಮನೆಯೊಳಗಡೆ ಬರಲು ಕೊಡಿ" ಎಂದು ಬಾಗಿಲು ಕುಟ್ಟತೊಡಗಿದ.

ಂಟು ವರ್ಷ ದಾಟದ ಇಬ್ಬರು ಗಂಡು ಮಕ್ಕಳು... ವಿವೇಕಾನಂದ ರವಿವರ್ಮ ಕುಮಾರ್... ದೊಡ್ಡ ಹೆಸರಿನ ಚಿಕ್ಕ ಮಕ್ಕಳು ತಮ್ಮನ್ನು ಲು ಕೊಡದಿರುವ ತಾಯಿಯತ್ತ ನೋಡುತ್ತಾ ಕಣ್ಣವೆ ಎಳೆಯುತ್ತಿದ್ದಂತೆಯೇ ಆದೇಶ ಮಾಡಿದಳು: "ಏಳು ರವಿ... ಆ ಕುರ್ಚಿಯನ್ನು ಬಾಗಿಲಿನ ತಳ್ಳು. ಅದರ ಮೇಲೆ ಹತ್ತಿ ನೀನು ಕೂತ್ಕೊ." ಆಗ ತೊಟ್ಟಿಲಿನಲ್ಲಿದ್ದ ವಿದ್ಯಾಸಾಗರ ಚಿಟ್ಟನೆ ಚೀರಿತು. ತಾಯಿ ದೊಡ್ಡ ಗಂಟಲಿನಲ್ಲಿ ಅವನಿಗೆ ಾಡುತ್ತಾ, ಅದು ಕಣ್ಣು ಮುಚ್ಚುತ್ತಿದೆ ಎಂದಾಗ ಅದನ್ನು ಚಿವುಟುತ್ತಿದ್ದಳು. ಮತ್ತೊಮ್ಮೆ ಚಿಟ್ಟನೆ ಚೀರುತ್ತಿತ್ತು. ಹೀಗೆ ಹಟಮಾರಿ ರಾತ್ರಿ ಕಳೆದು ಕಿರಣ ಬೆಳಕ ಸೂಸತೊಡಗಿದಾಗ ಆ ಮಾಸ್ತರ ತಲೆ ಮರೆಸಿಕೊಂಡು ಂಡ.

ಕೆ ಇಡೀ ಬದುಕನ್ನು ಸವೆಸಿದ್ದು ಹಾಗೆಯೇ. ತನ್ನ ಕುಟುಂಬವನ್ನು ಯುತ್ತಾ, ತನ್ನ ಏಳು ಮಕ್ಕಳಿಗೆ ಅಕ್ಷರ ಕಲಿಸುತ್ತಾ, ಅವರಿಗೆ ಮೌಲ್ಯಗಳ ಗೆಗಳನ್ನು ನೀಡುತ್ತಾ, ಪತಿಗೆ ಎಂದಿಗೂ ಹೊರೆಯಾಗದೆ, ಪತಿಯ ಯ ಚೌಕಟ್ಟಿನಲ್ಲಿ ತನ್ನ ಮಕ್ಕಳ ಸರ್ವ ಬೇಡಿಕೆಗಳನ್ನೂ ಪೂರೈಸುತ್ತಾ, ರಳಿಗೆ ಬಂದ ಯಾವ ಮಗುವೂ ಉಪವಾಸ ಮಲಗದಂತೆ ಆಕೆ ಕೈಗಳ 'ಅಮ್ಮ'ನಾಗಿದ್ದು ಆಕೆಯ ವೈಶಿಷ್ಟ್ಯ.

ತನ್ನ ತೊಂಭತ್ತು ವರ್ಷಗಳ ಸಾರ್ಥಕ ಜೀವನವನ್ನು ಬಾಳಿ ಮೊನ್ನೆ 3-2-2014ರಂದು ತಮ್ಮ ಮಗನಾದ ಕರ್ನಾಟಕದ ಪ್ರಧಾನ ಾದಿಯಾದ ರವಿವರ್ಮ ಕುಮಾರ್ ಅವರ ಮನೆಯಲ್ಲಿ ವಿಧಿವಶರಾದಾಗ ಎಷ್ಟೋ ನೆನಪುಗಳು ಅವರ ಮಕ್ಕಳ ನೆನಪಿನಲ್ಲಿ ಮತ್ತು ಅನ್ನವನ್ನಿಕ್ಕಿದ ವಾತ್ಸಲ್ಯದಲ್ಲಿ ಮಿಂದ ನೂರಾರು ವಿದ್ಯಾರ್ಥಿಗಳ ಮನದಂಗಳದಲ್ಲಿ...

ಯಿಯಾದ ಪುಟ್ಟರಂಗಮ್ಮನವರು ತಮ್ಮ ಪತಿಯಾದ ಕೆಂಗರಾಮಯ್ಯನವರ ವನ್ನು ಎಂದಿಗೂ ಪ್ರಶ್ನಿಸಿದವರಲ್ಲ, ಮಕ್ಕಳ ಎದುರಿನಲ್ಲಿ ತಾವಿಬ್ಬರೂ ಎಂಬಂತೆ ಬಿಂಬಿಸಿದರೂ ಮಾತ್ರ ಹೃದಯದ ತುಡಿತ ಎಲ್ಲಾ ಗಳನ್ನೂ ನಿಭಾಯಿಸುವ ಅದ್ಭುತ ಸಾಮರ್ಥ್ಯವನ್ನು ನೀಡಿತ್ತು, ಎಲ್ಲಾ ಕೂಡಾ ಉನ್ನತ ಹುದ್ದೆಗಳಿಗೇರಿದ್ದರೂ ಪರಮ ವಿಧೇಯರು.


ದರೆ, ರವಿವರ್ಮ ಕುಮಾರ್ ಮಾತ್ರ ಬಂಡಾಯದ ಬಾವುಟ ಹಾರಿಸುವ ವನ್ನು ಕೈಗೊಂಡಿದ್ದು ಆಕೆಗೆ ಸಾಕಷ್ಟು ಇರಿಸುಮುರಿಸಾಗಿತ್ತು, ಪತಿ ಕುಮಾರರಾಮನ ವಂಶಸ್ಥರ ಕುಲಗುರು ಬೇರೆ ಆಗಿದ್ದರಲ್ಲಾ... ಆ ದೆಯನ್ನು ಕಾಪಾಡುವ ಭಾರ ಕೂಡಾ ಆ ತಾಯಿಯ ಹೆಗಲ ಮೇಲೆ

ಭತ್ತರ ಶತಕದ ಕರ್ನಾಟಕದ ಚಳವಳಿಗಳಲ್ಲಿ ಕ್ರಿಯಾಶೀಲವಾಗಿ ಂಸಿದ ರವಿವರ್ಮ ಕುಮಾರ್ ತಮ್ಮ ಸಂಗಾತಿಯಾಗಿ ಆಯ್ಕೆ ಮಾಡಿದ್ದು ಸರ್ ಶಾರದಾ ಅವರನ್ನು, ಆದರೆ ರವಿವರ್ಮ ಅವರ ಈ ನಡೆ ಆ



# ಪುಟ್ಟರಂಗಮ್ಮ ಎಂಬ ಅಮ್ಮನ ನೆನಪಿನಲ್ಲಿ

ತಂದೆ ತಾಯಿಗಳಿಗೆ ನುಂಗಲಾರದ ತುತ್ತಾಗಿತ್ತು. ಪತಿಯ ಆದೇಶ ಪಾಲನೆಯ ಹೊಣೆಗಾರಿಕೆ ಒಂದೆಡೆಯಾದಲ್ಲಿ ಬೆಳೆದ ಮಗ ಒಬ್ಬಂಟಿಯಾಗಿರುವ ಸಂಕಟ ಇನ್ನೊಂದೆಡೆ. ಏಕೆಂದರೆ, ರವಿವರ್ಮ ತಮ್ಮ ತಾಯಿಗೆ ಸ್ಪಷ್ಟವಾಗಿ ನುಡಿದಿದ್ದರು "ನೋಡಮ್ಮಾ, ಶಾರದಾಳನ್ನು ಮದುವೆಯಾಗಬೇಡ ಅಂತ ಅನ್ನು. ನಾನು ಪಾಲಿಸ್ತೀನಿ. ಆದರೆ, ಇನ್ನೊಬ್ಬಾಕೆಯನ್ನು ತೋರಿಸಿ ಇವಳನ್ನು ಆಗು ಅನ್ನೋ ಹಾಗಿಲ್ಲಾ ನೀನು."



ಈ ಒಡಂಬಡಿಕೆಯನ್ನು ಆ ಜೀವ ಒಂದು ವರ್ಷದವರೆಗೂ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ನಿಭಾಯಿಸಿತು. ಕೊನೆಗೂ ಮಗನ ಸಂತೋಷದೆದುರು ಆ ತಾಯಿ ಶರಣಾಗಿ ಮಗಳ ರಾಯಭಾರತ್ವದಲ್ಲಿ ಒಂದು ಮೆಸೇಜನ್ನು ರವಿವರ್ಮನಿಗೆ ರವಾನೆ ಮಾಡಿತು. "ಅವನಿಗೆ ಹೇಳು, ನಮ್ಮನ್ನು ಯಾರನ್ನೂ ಕರೀಬೇಡ... ಅವನ ಪಾಡಿಗೆ ಅವನು ಮದುವೆಯಾಗಿ ಸಂಸಾರ ಮಾಡಲಿ. ಕೂಡೋ ಹೊತ್ತು ಬಂದ್ರೆ ಏನೋ ಒಂದು ದಾರಿಯಾಗುತ್ತೆ."

ಅಂತೆಯೇ ರವಿವರ್ಮ ಮತ್ತು ಪ್ರೊಫೆಸರ್ ಶಾರದಾ ಅವರ ಮದುವೆಯು ಹಾಸನ ನಗರದ ರೈತ ಸಂಘದ ಆಶ್ರಯದಲ್ಲಿ ನಡೆಯಿತು. ಸರಳವಾಗಿ ಹಾರ ಬದಲಾಯಿಸಿಕೊಳ್ಳುವುದರ ಮೂಲಕ ಅಮಾವಾಸ್ಯೆಯಂದು ಅವರಿಬ್ಬರೂ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಚಾಟರಾಮಯ್ಯನ ಮಗ ಸಣ್ಣರಾಮಯ್ಯ, ಆತನ ಮಗ ಕೆಂಗರಾಮಯ್ಯ, ಈ ಕೆಂಗರಾಮಯ್ಯ ರವಿವರ್ಮನ ತಂದೆ. ತಮ್ಮ ಹೆಸರುಗಳ ಬಗ್ಗೆ ಅಷ್ಟೇನೂ ಆಕರ್ಷಣೆಯನ್ನು ಕಾಣದ ಕೆಂಗರಾಮಯ್ಯ ಬಂಗಾಳೀ ಹೆಸರಿನ ಪ್ರಭಾವಕ್ಕೆ ಒಳಗಾಗಿ ತಮ್ಮ ಮಕ್ಕಳಿಗೆ ಇಟ್ಟ ಹೆಸರುಗಳನ್ನು ನೋಡಿ: ವಿವೇಕಾನಂದ, ರವಿವರ್ಮ ಕುಮಾರ್, ಉದಯವಾಣಿ (ಮಗಳು), ಅದ್ಭುತರಾಜ ವಿನೋದಕುಮಾರ್, ಈಶ್ವರಚಂದ್ರ ವಿದ್ಯಾ ಸಾಗರ, ವಿದ್ಯಾಲಂಕಾರ್ ಮತ್ತು ಮಧುಸೂದನ ರಾಜವರ್ಮ. ಅವರೆಲ್ಲರ ಹೆಸರಿನ ಮೆರುಗಿನಂತೆ ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತನ್ನ ಸರ್ವಸ್ವವನ್ನೂ ಧಾರೆ ಎರೆದ ಆ ತಾಯಿ ತನ್ನ ಕೆಲಸ ಮುಗಿಸಿ ಚಿರನಿದ್ರೆಗೆ ಜಾರಿದ್ದು ತಾನಾಗಿಯೇ ಸಾವನ್ನು ಬರಮಾಡಿಕೊಂಡು.

"ಇನ್ನೂ ಎಷ್ಟು ದಿನ ಬದುಕಲಪ್ಪಾ" ಎಂದು ಸಾವನ್ನು ಆಹ್ವಾನಿಸಿದ್ದು ಹಸಿದು ಬಂದವರಿಗೆ ಅನ್ನವನ್ನಿಕ್ಕಿದಷ್ಟು ನೆಮ್ಮದಿ ಮತ್ತು ಸಹಜತೆಯಿಂದ.

ರವಿವರ್ಮ ಬೆಂಗಳೂರಿನಲ್ಲಿ ನ್ಯಾಯವಾದಿಯಾಗಿ ತೊಡಗಿಸಿಕೊಂಡು ಸ್ಪರ್ಧಾಕಣದಲ್ಲಿ ತಮ್ಮ ಉದ್ಯೋಗವನ್ನು ಅರಸತೊಡಗಿದರು. ಯುವ ನ್ಯಾಯವಾದಿಗೆ ಮಾಜಿ ಮುಖ್ಯಮಂತ್ರಿಯಾಗಿದ್ದ ಗುಂಡೂ ರಾವ್ ಅವರಿಂದ ಅದೊಂದು ದಿನ ಬುಲಾವ್ ಬಂದಾಗ ಪ್ರಭಾವೀ ವ್ಯಕ್ತಿಗಳಿಂದ ವಿಸ್ತಾರಗೊಳ್ಳುತ್ತಿರುವ ತಮ್ಮ ಕಕ್ಷಿದಾರರ ಪಡೆಯನ್ನು ಕಂಡು ಸಹಜವಾಗಿಯೇ ಖುಷಿಗೊಂಡರು. ಅವರ ನಿರೀಕ್ಷೆಯಂತೆಯೇ ಗುಂಡೂ ರಾವ್ ಅವರು ಒಂದು ಬ್ರೀಫ್ ಮತ್ತು ಸಾಕಷ್ಟು ಫೀಯನ್ನು ನೀಡಿದ್ದೂ ಅಲ್ಲದೆ, ವರಲಕ್ಷ್ಮಿ ಗುಂಡೂ ರಾವ್ ಅವರು ರವಿವರ್ಮನಿಗೆ ಆತ್ಮೀಯವಾಗಿ ಊಟವನ್ನಿಕ್ಕಿದರು.

ರವಿವರ್ಮ ಮನೆಗೆ ಮರಳಿದಾಗ ಪುಟ್ಟರಂಗಮ್ಮ ಹಾಲ್‌ನಲ್ಲಿ ಕುಳಿತಿದ್ದರು. ಸಂತೋಷದಲ್ಲಿ ಓಲಾಡುತ್ತಿದ್ದ ರವಿವರ್ಮ ಖುಷಿಯಿಂದ ಅಮ್ಮನಿಗೆ ಹೇಳಿದರು: "ಅಮ್ಮ ಈವೊತ್ತು ಯಾರ ಮನೇಲಿ ನನಗೆ ಊಟ ಹೇಳು ನೋಡೋಣ?"

"ನಂಗೇನು ಗೊತ್ತು... ನೀನೇ ಹೇಳು."

"ಮಾಜಿ ಮುಖ್ಯಮಂತ್ರಿ ಗುಂಡೂ ರಾವ್ ಮನೇಲಿ ಊಟ. ಹಾಗೆಯೇ ಒಂದು ಒಳ್ಳೆ ಫೀಸು ಬರೋ ಕೇಸನ್ನು ಕೂಡಾ ಕೊಟ್ಟಿದ್ದಾರೆ."

"ಏನೆಂದೆ...? ಇನ್ನೊಂದು ಸಲ ಹೇಳು ನೋಡೋಣ... ಹೇಗೆ ಹೋದೆಯೋ ಪಾಪಿ ನೀನು ಅವರ ಮನೆಗೆ? ಅಷ್ಟು ಜನ ರೈತರನ್ನು ಕೊಂದುಹಾಕಿದ ಅವರ ಮನೆಯ ಊಟಕ್ಕೆ ನೀನು ಹೋಗಿದ್ದೆಯಾ?"

ಮೂರನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ್ದ ತಾಯಿಯ ಬಾಯಿಂದ ಮುಂಖಾನುಮುಂಖವಾಗಿ ರೈತರ ಕೊಲೆಯ ಸುದ್ದಿಯ ವಿವರಗಳು ಮತ್ತು ಬೈಗುಳಗಳು ಒಟ್ಟೊಟ್ಟಿಗೆ ಜಾರಿಯಾಗುತಿದ್ದಂತೆಯೇ ರವಿವರ್ಮನಿಗೆ ಅಪಾರ ತಪ್ಪಿತಸ್ಥ ಭಾವ ಉಂಟಾಗಿ ತಿಂದ ಅನ್ನ ಕಕ್ಕುವಂತೆ ಆಗತೊಡಗಿತು. "ನನಗೆ ಇದು ಯಾಕೆ ಹೊಳೆಯಲಿಲ್ಲ? ಯಾಕೆ ಹೊಳೆಯಲಿಲ್ಲ?" ಎಂದು ಪರಿತಪಿಸುತ್ತಾ, ಕೊರಗುತ್ತಾ ಕೊನೆಗೂ ಆ ಬ್ರೀಫನ್ನು ಗುಂಡೂ ರಾಯರಿಗೆ ಹಿಂದಿರುಗಿಸಿ ಕಳೆದುಹೋದ ನೆಮ್ಮದಿಯನ್ನು ಪಡೆದುಕೊಂಡರು.

ಹುಟ್ಟುಸಾವಿನ ಸಹಜ ಲಯದ ನಡುವೆ ವ್ಯಕ್ತಿಗಳು ಇದ್ದಕ್ಕಿದ್ದಂತೆಯೇ ಕಳೆದುಹೋಗುತ್ತಾರೆ. ಆದರೆ, ಅವರು ಹಚ್ಚಿದ ಅದೆಷ್ಟೋ ಹಣತೆಗಳು ದೇದೀಪ್ಯಮಾನವಾಗಿ ಬೆಳಗುತ್ತಾ, ನಕ್ಷತ್ರಗಳಂತೆ ಮಿನುಗುತ್ತಾ, ಸಿಡಿಲಿನಂತೆ ಎರಗುತ್ತಾ ಹೃದಯದ ತುಂಬಾ ಕಂಪನಗಳ ಅಲೆಗಳನ್ನು ಮೂಡಿಸುತ್ತಾ ಸಂಬಂಧಪಟ್ಟವರ ಮತ್ತು ಪಡದೆ ಇರುವವರ ಮನದ ಅಂಗಳದ ಮಿನುಗು ತಾರೆಗಳಂತೆ ಒಡಲ ತುಂಬಾ ತುಂಬಿಕೊಂಡ ಪ್ರೀತಿಯನ್ನು ಚೆಲ್ಲುತ್ತಾರಲ್ಲಾ...

ಆಗ ಎಲ್ಲೋ ಒಂದು ಕಡೆ ಗುಲಾಬಿಯೊಂದು ನಾಚುತ್ತಾ ಅರಳುತ್ತದೆ. ಎಳೆಯ ಕಂದ ಬೊಚ್ಚು ಬಾಯಿಯಿಂದ ಕೂಡ ಮುಗುಳ್ನಗುತ್ತಾ ಅಮ್ಮನ ಮಡಿಲ ಆನಂದವನ್ನು ಅನುಭವಿಸುತ್ತದೆ.

● ಬಾನು ಮುಷ್ತಾಕ್

# ದ್ದು ಹೆಚ್ಚು, ಹೂರಣ ಸೊನ್ನೆ

ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯ ಂದೋಲನ ಅವ್ಯಾಹತವಾಗಿ ನಡೆದಿದೆ. ತನ್ನ ಂದಿಲ್ಲೊಂದು ಕಾರಣಕ್ಕಾಗಿ ಸದಾ ಮಾಧ್ಯಮಗಳಲ್ಲಿ ಳ್ಳಬೇಕೆನ್ನುವುದೇ ಇದರ ಉದ್ದೇಶ. ಆತನ ಭಾಷಣಗಳಲ್ಲಿ ರಚನಾತ್ಮಕವಾದುದೇನೂ ಲ್ಲ, ಅದೇನೋ ಇಂಗ್ಲಿಷ್‌ನಲ್ಲಿ ಅಂತಾರಲ್ಲ All d but no substance. ಸದ್ದು ಮಾತ್ರ, ಸೊನ್ನೆ. ಕಳೆದ ವಾರ ಮೋದಿಯು ದ್ದುದು ಭಾರತೀಯ ವಾಣಿಜ್ಯ ಮತ್ತು ಉದ್ದಿಮೆ ಗಳ ಒಕ್ಕೂಟದ (FICCI) ರಾಷ್ಟ್ರೀಯ ರ್ವಾಹಕ ಸಮಿತಿಯ ಸಭೆಯಲ್ಲಿ, ಯಥಾಪ್ರಕಾರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಆತ ತನ್ನ ಪ್ಲೇಟ್ ಬದಲಾಯಿಸಿ ಬಡವರ ಪರವೆಂದು ಕೊಳ್ಳಲು ಪ್ರಯತ್ನಿಸಿದ್ದಾನೆ. ಮನಮೋಹನ್ ಸಿಂಗ್ ಪರಿಹಾಯುತ್ತ ಎಲ್ಲರನ್ನೊಳಗೊಂಡ ಅಭಿವೃದ್ಧಿ ಹೇಳುವ ಸಿಂಗ್ ತಳಸ್ತರಗಳಲ್ಲಿರುವವರನ್ನು ಟ್ಟಿದ್ದಾರೆಂದು ಆರೋಪಿಸಿದ. ದಟ್ಟ ದರಿದ್ರರೂ ಯ ಭಾಗವಾಗಿರಬೇಕೆಂದು ಒತ್ತಾಯಿಸಿದ. 'ನಮ್ಮ ನ್ನು ನೋಡಿ. ಅಲ್ಲಿ ಯಾವುದೇ ರೀತಿಯ ಸಮಸ್ಯೆಗಳಿಲ್ಲ ಏಕೆಂದರೆ ಸರ್ಕಾರದ ನೀತಿಗಳು . ಗುಜರಾತಿನ ಕಾರ್ಮಿಕ ಗಳು ಹೇಗಿವೆಯೆಂದರೆ ಇವತ್ತು ಮುಷ್ಕರ, ಪ್ರತಿಭಟನೆಗಳಿಂದಾಗಿ' ದಿನಗಳು ನಷ್ಟವಾಗುವುದೆಂಬುದೇ




ಇಲ್ಲ' ಅಂತ ಕೊಚ್ಚಿದ! ಕಾರ್ಮಿಕರ ಬಗ್ಗೆ ಭಾರಿ ಕಾಳಜಿ ಇರುವವನಂತೆ 'ಭಾರತೀಯ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ವೇಳೆ ಅವರ ಭದ್ರತೆ ಮತ್ತು ಘನತೆಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು' ಅಂತ ಸಲಹೆ ಕೂಡ ಕೊಟ್ಟ.

ಈ ಮೋದಿ ಎಷ್ಟು ದೊಡ್ಡ ಆಷಾಢಭೂತಿ, ಎಂಥಾ ಸುಳ್ಳುಗಾರನೆಂದರೆ ಈ ಮಾತುಗಳನ್ನಾಡುತ್ತಿದ್ದಾಗಲೆ ಅಹಮದಾಬಾದ್‌ನಲ್ಲಿ ಸುಮಾರು 5,000 ಸಫಾಯಿ ಕರ್ಮಚಾರಿಗಳು ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದರು. ಪ್ರಧಾನವಾಗಿ ವಾಲ್ಮೀಕಿ ಸಮುದಾಯಕ್ಕೆ ಸೇರಿದವರಾದ ಇವರು ಡಿಸೆಂಬರ್ 31ರಿಂದಲೂ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಇವರೆಲ್ಲರೂ ಟೆಂಪರರಿ ಮತ್ತು ಪಾರ್ಟ್‌ಟೈಮ್ ಉದ್ಯೋಗಿಗಳು. ಕಾಯಂ ನೌಕರರಿಗೆ ಸಿಗುವ ಹಕ್ಕುಗಳು ಇವರ ಪಾಲಿಗೆ ಇಲ್ಲ, ಇವರಿಗೆ ಓವರ್‌ಟೈಮ್ ಸಿಗುವುದಿಲ್ಲ, ರಜೆ ಹಾಕುವಂತಿಲ್ಲ, ರಜೆ ಹಾಕಿದರೆ ದಿನಗೂಲಿಗೆ ಖೋತಾ. ಅಂದಹಾಗೆ ಆ ದಿನಗೂಲಿಯಾದರೂ ಎಷ್ಟು? ನಾಲ್ಕು ಗಂಟೆಗಳ ಕೆಲಸಕ್ಕೆ ರೂ. 105; ಎಂಟು ಗಂಟೆಗಾದರೆ ರೂ. 210! ಪಾಯಿಖಾನೆ, ಭೂಗತ ಚರಂಡಿ ಇತ್ಯಾದಿಗಳನ್ನು ಸ್ವಚ್ಛಗೊಳಿಸುವಂತಹ ಕೆಟ್ಟ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಿರುವ ಈ ಸಮುದಾಯ ಕಳೆದ 23 ವರ್ಷಗಳ ಅವಧಿಯಲ್ಲಿ ಅಹಮದಾಬಾದ್ ನಗರ ಒಂದರಲ್ಲೇ 580 ಜನರನ್ನು ಕಳೆದುಕೊಂಡಿದೆ.

ಪ್ರತಿಭಟನಾನಿರತರು ಇದೀಗ ತಮ್ಮದೇ ರಕ್ತದಲ್ಲಿ ಅದ್ದಿದ ಹೆಬ್ಬೆಟ್ಟಿನ ರುಜು ಹಾಕಿ ಮುನಿಸಿಪಾಲಿಟಿಗೆ

## ಬೂಸಿ ಬಸ್ಯ... ಮೋದಿ!

15



ಅರ್ಜಿ ಕಳುಹಿಸಿದ್ದಾರೆ. ಆದರೂ ಕ್ಯಾರೇ ಎನ್ನದ ಅಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡವರ ವಿರುದ್ಧವೇ ಸುಳ್ಳು ಪ್ರಕರಣ ದಾಖಲಿಸಿ ಅನೇಕರನ್ನು ಜೈಲಿಗಟ್ಟಿದ್ದಾರೆ. 300 ಜನರನ್ನು ಕೆಲಸದಿಂದ ಕಿತ್ತುಹಾಕಲಾಗಿದೆ.

ತನ್ನ ಎಲೆಯಲ್ಲಿ ಹೆಗ್ಗಣ ಸತ್ತು ಬಿದ್ದಿದ್ದರೂ ಅನ್ಯರಿಗೆ ಪುಕ್ಕಟೆ ಸಲಹೆ ನೀಡುವುದೆಂದರೆ ಇದೇ ಅಲ್ಲವೇ?

(<http://www.truthofgujarat.com)>

# ಪರಮೇಶ್ವರ್ ಸಿಎಂ ಗಿರಿಗೆ ಆಪರೇಷನ್ ಹಸ್ತ!







ಕೊಳ್ಳಿಯ ಕಿಡಿಯೊಂದು ಸದ್ದಿಲ್ಲದೆ ಅಣಿಯಾಗುತ್ತಿದೆ!

ಹೈಕಮಾಂಡ್ ಅಭಯಹಸ್ತ ನಂಬಿ ಐದು ವರ್ಷದ ಮುಖ್ಯಮಂತ್ರಿಗಿರಿಯ ಭರವಸೆ ಹೊತ್ತು 'ಅಹಿಂದ ಕ್ರಾಂತಿಯ' ಕನಸು ಕಾಣುತ್ತಿರುವ ಸಿದ್ದರಾಮಯ್ಯನವರ ಬುಡಕ್ಕೆ ಇಷ್ಟರಲ್ಲೇ ಬಿಸಿ ಕೂಡ ತಟ್ಟಲಿದೆ.

ನೆಲಮಂಗಲದ ಜೆಡಿಎಸ್ ಶಾಸಕ ಡಾ. ಶ್ರೀನಿವಾಸ ಮೂರ್ತಿ ಇದ್ದಕ್ಕಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಾ. ಪರಮೇಶ್ವರ್ ಕುರಿತಂತೆ ವಾಚಾಮಗೋಚರ ಹೊಗಳಾಟಕ್ಕಿಳಿದಿರುವುದು, ಆದ್ಯಾರೋ ಆಸ್ಟ್ರೇಲಿಯಾ ಪ್ರಕಾಶ್ ಎಂಬ ಪರಮೇಶ್ವರ್ ಬಂಟನೊಬ್ಬನ ಜೊತೆ ಶಾಸಕ ಶ್ರೀನಿವಾಸಮೂರ್ತಿ ಐಷಾರಾಮೀ ಹೋಟೆಲುಗಳಲ್ಲಿ ಕಾಣಿಸಿಕೊಂಡದ್ದು, ನೆಲಮಂಗಲದ ಒಂದು ಹಿಂಡು ಜೆಡಿಎಸ್ ಕಾರ್ಯಕರ್ತರೆಲ್ಲ ಇದ್ದಕ್ಕಿದ್ದಂತೆ ಕಾಂಗ್ರೆಸ್ ಭಜನೆಗಿಳಿದಿರುವುದು ಮತ್ತು ಪಿತಾಮಹ ದೇವೇಗೌಡರು ಕರೆದು ಡಾ. ಶ್ರೀನಿವಾಸ ಮೂರ್ತಿಗೆ ಗ್ರಾಚಾರ ಬಿಡಿಸಿದ್ದಾರೆಂಬುದು- ಎಲ್ಲೋ ಸಿದ್ದು ಮುಖ್ಯಮಂತ್ರಿ ಗಾದಿಗೆ ಕವಿದ ಕಾರ್ಮೋಡದಂತೆ ಗೋಚರಿಸುತ್ತಿದೆ.

ಕೆಪಿಸಿಸಿ ಅಧ್ಯಕ್ಷ ಡಾ. ಪರಮೇಶ್ವರ್ ಸಾಹೇಬರ ಸಿಎಂ ಗಿರಿಯ ಹಗಲುಗನಸಿಗೂ ನೆಲಮಂಗಲದ ಜೆಡಿಎಸ್ ಶಾಸಕ ಡಾ. ಶ್ರೀನಿವಾಸಮೂರ್ತಿ ತಮ್ಮ ಶಾಸಕತ್ವಕ್ಕೆ ರಾಜಿನಾಮೆ ನೀಡಲಿದ್ದಾರೆ ಎಂಬ ವದಂತಿಗೂ ಸಂಬಂಧವಿದೆ. ಈ ಹಿಂದೆ ಬಿಜೆಪಿ ಶುರು ಹಚ್ಚಿಕೊಂಡ ಆಪರೇಷನ್ ಕಮಲದ್ದೇ ಅಸಹ್ಯವೊಂದಕ್ಕೆ ಕೈಯಿಡುವಷ್ಟು ರಾಜಕೀಯ ದಾರಿದ್ರ್ಯವಾಗಲಿ, ದಾರ್ಷ್ಟ್ಯವಾಗಲಿ ಕಾಂಗ್ರೆಸ್ಸಿಗಿಲ್ಲ, ಸರ್ಕಾರ ಕುಸಿಯುತ್ತದೆ. ಬಹುಮತದ ಕೊರತೆಯಿದೆ. ಶಾಸಕರ ಪಕ್ಷಾಂತರದ ಭೀತಿ ಇತ್ಯಾದಿ ಯಾವುದೇ ಅಪಾಯ, ಆತಂಕಗಳಿಲ್ಲದಿದ್ದರೂ 'ಆಪರೇಷನ್ ಹಸ್ತ'ದ ಮೂಲಕ ನೆಲಮಂಗಲದ ಜೆಡಿಎಸ್ ಶಾಸಕ ಡಾ. ಶ್ರೀನಿವಾಸಮೂರ್ತಿಯವರನ್ನು ಏಕೆ ಪರಮೇಶ್ವರ್ ಬಲೆಗೆ ಬೀಳಿಸಹೊರಟಿದ್ದಾರೆ?

## ಸಿಎಂ ಗಾದಿಯ ಭ್ರಮೆ!

ಅದು ಪರಮೇಶ್ವರ್‌ರ ಮುಖ್ಯಮಂತ್ರಿಗಿರಿಯ ಹಗಲುಕನಸಷ್ಟೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊರಟಗೆರೆಯಲ್ಲಿ ಸೋತ ಮೇಲೆ ತಾನು ಪಕ್ಷಕ್ಕಾಗಿ ದುಡಿದಿದ್ದರಿಂದ ಸೋಲಬೇಕಾಯ್ತು, ಇದರಿಂದಾಗಿಯೇ ತಾನು ಮುಖ್ಯಮಂತ್ರಿಯಾಗುವುದು ತಪ್ಪಿಹೋಯಿತೆಂಬ ಭ್ರಮೆಗೆ ಬಿದ್ದ ಪರಮೇಶ್ವರ್ ಸಾಹೇಬರಿಗೆ ಶತಾಗತಾಯ ತಾನು ಮುಖ್ಯಮಂತ್ರಿಯಾಗಲೇಬೇಕು ಎಂಬ ದುರಾಶೆ. ಕನಿಷ್ಠ ಮುಂಬರುವ ಲೋಕಸಭಾ ಚುನಾವಣೆಯ ನಂತರವಾದರೂ ಸಿದ್ದು ಇಳಿಸಿ ತಾನು ಗಾದಿಗೇರಬೇಕೆಂಬ ದೂರಾಲೋಚನೆ. ಅದಕ್ಕೊಂದು ನೆಲಮಂಗಲದ ಜೆಡಿಎಸ್ ಶಾಸಕ ಡಾ. ಶ್ರೀನಿವಾಸಮೂರ್ತಿಯವರಿಗೆಂದು ಪರಮೇಶ್ವರ್ ಕೊಟ್ಟಿರುವ ಆಫರ್ ಇಪ್ಪತ್ತು ಕೋಟಿಯಂತೆ. ಸಾಲದ್ದಕ್ಕೆ ಗೃಹಮಂಡಳಿಯ ಅಧ್ಯಕ್ಷಗಾದಿಯ ಆಮಿಷವನ್ನು ಒಡ್ಡಿದ್ದಾರಂತೆ!

ಲೆಕ್ಕಾಚಾರದಂತೆ ಎಲ್ಲವೂ ನಡೆಯಿತೆಂದರೆ ಇನ್ನೊಂದು ತಿಂಗಳೊಳಗೆ ನೆಲಮಂಗಲದ ಶಾಸಕರು 'ಆಪರೇಷನ್ ಹಸ್ತ'ದ ಬಲೆಯೊಳಕ್ಕೆ ಬೀಳಲಿದ್ದಾರೆ. ಲೋಕಸಭಾ ಚುನಾವಣೆಯ ಜೊತೆಗಲ್ಲದಿದ್ದರೂ ಆದರ ಬೆನ್ನಲ್ಲೇ ನೆಲಮಂಗಲದ ಚುನಾವಣೆ ಬಂತೆಂದರೆ ಕಾಂಗ್ರೆಸ್ಸಿನಿಂದ ಹಿಂದೆ ಸೋತಿದ್ದ ಅಂಜನಮೂರ್ತಿಯವರ ಬದಲಿಗೆ ಡಾ. ಪರಮೇಶ್ವರ್ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆ. ಖರೀದಿಗೊಂಡ ಜೆಡಿಎಸ್ ಶಾಸಕ ಡಾ. ಶ್ರೀನಿವಾಸಮೂರ್ತಿ ಕಾಂಗ್ರೆಸ್ ಬಾವುಟ ಹಿಡಿದು ಪರಮೇಶ್ವರ್ ಗೆಲುವಿಗಾಗಿ ಸೆಣಸುತ್ತಾರೆ.. ಹೇಗೂ ಕಾಂಗ್ರೆಸ್ ಅಧಿಕಾರದಲ್ಲಿರುತ್ತೆ, ಆದ್ದರಿಂದ ರಾಜಕೀಯ ನಿರಾಶ್ರಿತ ಅಂಜನಮೂರ್ತಿಗೊಂದು ಫಲವತ್ತು ನಿಗಮವನ್ನೋ ಡಾ. ಶ್ರೀನಿವಾಸಮೂರ್ತಿಗೆ ಇನ್ನೊಂದು ಮಂಡಳಿಯನ್ನೋ ಕೊಡುವುದು ಪರಮೇಶ್ವರ್‌ಗೇನೂ ಕಷ್ಟವಲ್ಲವಲ್ಲ?

ಇದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಶುರು ಹಚ್ಚಿಕೊಂಡಿರುವ ಮರಕೋತಿಯಾಟದ ಒಂದು ಸ್ಯಾಂಪಲ್ಲಷ್ಟೆ. ಪ್ರಾರಂಭದಲ್ಲಿ ಬಿಜೆಪಿ ಎಮ್ಮೆಲ್ಸಿ ಮತ್ತು ಮಹಮ್ಮದೀಯ ವೈದಿಕ ಮುಮ್ತಾಜ್ ಅಲಿಖಾನರನ್ನು ಕಾಂಗ್ರೆಸ್ಸಿಗೆಳೆದುಕೊಂಡರು. ಅವರ ಎಮ್ಮೆಲ್ಸಿ ಸ್ಥಾನಕ್ಕೆ ತಾನೇ ನಿಲ್ಲುತ್ತೇನೆಂದರು. ಇದರ ಹುನ್ನಾರವನ್ನು ಸೂಕ್ಷ್ಮವಾಗೇ ಗ್ರಹಿಸಿದ ಹೈಕಮಾಂಡ್ ಕಾಂಗ್ರೆಸ್ ಸಾರಥಿಯೊಬ್ಬ ಈ ಮಟ್ಟಕ್ಕಿಳಿಯುವುದೇ ಅಸಹ್ಯ ಎಂದು ಎಮ್ಮೆಲ್ಸಿಗಿರಿಯ ಕನಸಿಗೆ ತಣ್ಣೀರೆರಚಿತು.

## ಇಬ್ಬರು ಜೆಡಿಎಸ್ ಶಾಸಕರು

ಪರಮೇಶ್ವರ್ ಅಧಿಕಾರಲಾಲಸೆ ಅಷ್ಟಕ್ಕೇ ತಣಿಯಬೇಕಿತ್ತು, ಬದಲಿಗೆ ಪಾವಗಡದ ಜೆಡಿಎಸ್ ಶಾಸಕ ತಿಮ್ಮರಾಯಪ್ಪನಿಗೆ ಬಲೆ ಬೀಸತೊಡಗಿದರು. ತಿಮ್ಮರಾಯಪ್ಪ ಹೇಳಿಕೇಳಿ ಬರಿಗೈ ನಾರಾಯಣ. ಅಷ್ಟಿಷ್ಟು ಜನಮನ್ನಣೆಯಿದೆ ಆದರೂ ಹುಟ್ಟು ಶ್ರೀಮಂತನಲ್ಲ. 20 ಕೋಟಿ ಮತ್ತು ಫಲವತ್ತು ನಿಗಮದ ಡೀಲು ಕೂಡ ಕುದುರಿತ್ತು. ಇದರ ವಾಸನೆ ಹಿಡಿದ ಕುಮಾರಣ್ಣ ಮತ್ತು ದೇವೇಗೌಡರು ಅದೇನು ಮರಮ್ಮತ್ತು ಮಾಡಿದರೋ ಅಲ್ಲಿಗೆ ಪರಮೇಶ್ವರ್ ಪಾವಗಡ ತಂತ್ರಕ್ಕೆ ಕಲ್ಲುಬಿತ್ತು.

ಆನಂತರ ಪರಮೇಶ್ವರ್ ಕಣ್ಣು ಬಿದ್ದದ್ದು ದೇವನಹಳ್ಳಿಯ ಜೆಡಿಎಸ್ ಶಾಸಕ ಪಿಳ್ಳಮುನಿಶಾಮಪ್ಪನ ಮೇಲೆ. ಪಾವಗಡದ ತಿಮ್ಮರಾಯಪ್ಪನಂತೆ ಈತ ಕೂಡ ದಲಿತನೆ. ಹೇಗೂ ಜೆಡಿಎಸ್‌ಗೆ ಅಧಿಕಾರವಿಲ್ಲ; ಸರ್ಕಾರದ ಮಟ್ಟದಲ್ಲಿ ಖಮಾಯಿಗೂ ಅವಕಾಶ ಕಮ್ಮಿ ಎಂದೇ ಲೆಕ್ಕ ಹಾಕಿದ ಪಿಳ್ಳಮುನಿಶಾಮಪ್ಪ ಪಿಳ್ಳೇ ನೆಪಮ್ಮ್ ..ಕ ಕಾಂಗ್ರೆಸ್ಸಿಗೆ ಜಿಗಿಯುವ ತಯಾರಿಯಲ್ಲೇ ಇದ್ದರಂತೆ. ಇದಕ್ಕೂ ದೇವೇಗೌಡರು ತಲೆ ಕೆಡಿಸಿಕೊಂಡ ಫಲವಾಗಿ ಪರಮೇಶ್ವರ್ ಚಿತ್ತ ಆನೇಕಲ್ಲಿನ ಕಾಂಗ್ರೆಸ್ ಶಾಸಕ ಶಿವಣ್ಣನತ್ತ ಹರಿಯಿತು. ಜಾತಿಯಲ್ಲಿ ಪರಮೇಶ್ವರ್ ಕುಲಬಾಂಧವನೇ. ಶಿವಣ್ಣ ಒಂದು ಹಂತಕ್ಕೆ ಡೀಲು ಕುದುರಿಸಿಯೂ ಬಿಟ್ಟಿದ್ದ. ಆದರೆ ಹೈಕಮಾಂಡ್ ಇದಕ್ಕೆ ಜಗ್ಗಲಿಲ್ಲ, ಗೆದ್ದ ಕಾಂಗ್ರೆಸ್ ಶಾಸಕನೊಬ್ಬನಿಂದ ರಾಜೀನಾಮೆ ಕೊಡಿಸಿ ಆ ಜಾಗಕ್ಕೆ ಕೆಪಿಸಿಸಿ ಅಧ್ಯಕ್ಷನೇ ವಕ್ಕರಿಸಿದನೆಂದರೆ ಅದು ಪಕ್ಷದ ಕಾರ್ಯಕರ್ತರಲ್ಲಿ ಅಪನಂಬಿಕೆ ಬಿತ್ತುತ್ತದೆ. ಪಾಳೇಗಾರಿಕೆಯನ್ನೂ ಎತ್ತಿ ತೋರಿಸುತ್ತದೆ.

ಹಠ ಬಿಡದ ತ್ರಿವಿಕ್ರಮನಂತೆ ಗಾದಿಯೆಂಬ ಬೇತಾಳನ ಬೆನ್ನತ್ತಿದ ಪರಮೇಶ್ವರ್ ಅಂತಿಮವಾಗಿ ಬಲೆಗೆ ಬೀಳಿಸಿಕೊಂಡಿದ್ದು ನೆಲಮಂಗಲ ಜೆಡಿಎಸ್ ಶಾಸಕ ಡಾ. ಶ್ರೀನಿವಾಸಮೂರ್ತಿಯನ್ನು. ಬಿನ್ನಮಂಗಲ ಕೃಷ್ಣಪ್ಪನವರ ಹತ್ಯೆಯ ಅನುಕಂಪದ ಲಾಭ ಪಡೆದೇ ಶಾಸಕನಾಗಿ ಗೆದ್ದ ಶ್ರೀನಿವಾಸಮೂರ್ತಿಗೆ ಜೆಡಿಎಸ್ ಹಂಗಿಲ್ಲ, ದೇವೇಗೌಡರ ಕಾಟವಿಲ್ಲ. ಅಷ್ಟಕ್ಕೂ ನೆಲಮಂಗಲಕ್ಕೆ ಅನಭಿಷಕ್ತ ಶಾಸಕನಂತಿರುವುದು ಹತ ಬೆಮೆಲ್ ಕೃಷ್ಣಪ್ಪನವರ ಮಗ ಕಾಂತರಾಜುವೇ ಹೊರತು ಶಾಸಕ ಶ್ರೀನಿವಾಸ ಮೂರ್ತಿ ಅಲ್ಲ, ಆದ್ದರಿಂದ ಶ್ರೀನಿವಾಸ ಮೂರ್ತಿ ಕಳೆದುಕೊಳ್ಳುವುದು ಏನೇನೂ ಇಲ್ಲ, ಗೆದ್ದಿರುವುದು ಕೂಡ ಬಿನ್ನಮಂಗಲ ಕೃಷ್ಣಪ್ಪನವರ ಮಗನ ತಾಕತ್ತಿನ ಮೇಲೆಯೇ. ಅಷ್ಟಕ್ಕೂ ಗೆದ್ದ ಜೆಡಿಎಸ್‌ಗೂ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಅಂಜನಮೂರ್ತಿಯವರಿಗೂ ಇದ್ದ ಗೆಲುವಿನ ಅಂತರ ಕೇವಲ 200 ಮತಗಳು ಮಾತ್ರ!

## ಬೆಮೆಲ್ ಮಗ ಕಾಂತರಾಜು!

ವಿಶೇಷವೆಂದರೆ ನೆಲಮಂಗಲದಲ್ಲಿ ಜೆಡಿಎಸ್, ಬಿಜೆಪಿ ಮತ್ತು ಕಾಂಗ್ರೆಸ್ ನಡುವಿದ್ದದ್ದು ಹಣಾಹಣಿಯ ತ್ರಿಕೋನ ಸ್ಪರ್ಧೆ. ಬಿಜೆಪಿ ಅಭ್ಯರ್ಥಿಯಾಗಿದ್ದ ಮಾಜಿ ಶಾಸಕ ನಾಗರಾಜು ಇನ್ನು ಸಾವಿರವೋ ಎರಡು ಸಾವಿರವೋ ಹೆಚ್ಚಿಗೆ ಪಡೆದಿದ್ದರೆ ಬಿಜೆಪಿಗೂ ಇಲ್ಲಿ ಗೆಲುವಿನ ಅವಕಾಶವಿತ್ತು. ಮೂರು ಪಕ್ಷಗಳವರು ತಲಾ ಮೂವತ್ತು ಸಾವಿರದ ಮೇಲೆಯೇ ಓಟು ಗಿಟ್ಟಿಸಿರುವಾಗ ಪರಮೇಶ್ವರ್ ನಿಂತರೆಂದರೆ ಜೆಡಿಎಸ್‌ನ 10 ಪರ್ಸೆಂಟ್ ಓಟುಗಳು ಈಚೆ ಬಂದರೂ ಗೆಲುವು ನಿರಾಯಾಸ.

ಇಂಥ ಲೆಕ್ಕ ಹಾಕಿಯೇ ಪರಮೇಶ್ವರ್ ಕೈಹಾಕಿದ್ದು ಹಾಲಿ ಜೆಡಿಎಸ್ ಶಾಸಕ ಶ್ರೀನಿವಾಸಮೂರ್ತಿಯ ಹೆಗಲಿಗೆ. ಶ್ರೀನಿವಾಸಮೂರ್ತಿ ಏಕಾಏಕಿ ಪರಮೇಶ್ವರ್ ಬಲೆಗೆ ಬೀಳುವುದಕ್ಕೂ ಕಾರಣವಿದೆ. ಅದು ಚಿತ್ತನಗೆರೆ ಸೀನನ ಪಡೆಯಿಂದ ಹತರಾದ ಬೆಮೆಲ್ ಕೃಷ್ಣಪ್ಪನವರ ಪುತ್ರ ಕಾಂತರಾಜು ಹಾಕಿದ ಒತ್ತಡ. ಏಕೆಂದರೆ ಬೆಮೆಲ್ ಮಗ ಕಾಂತರಾಜುವಿಗೆ ತನ್ನ ತಂದೆಯ ಹಂತಕರ ವಿರುದ್ಧದ ಹಗೆಯಿನ್ನೂ ಆರಿಲ್ಲ, ಚಿತ್ತನಗೆರೆ ಸೀನನನ್ನು ಪೊಲೀಸರು ಎನ್‌ಕೌಂಟರ್ ಮಾಡಿ ಮುಗಿಸಿದರಾದರೂ ಆತನ ಅಕ್ಕನ ಮಗ ಬಂಡೆ ಮಂಜನ ಬೆನ್ನಿಗಿರುವುದು, ಮುಂಗಾರು ಮಳೆ ಕೃಷ್ಣಪ್ಪ ಅರ್ಥಾತ್ ಅಡಕಮಾರನಹಳ್ಳಿ ಕೃಷ್ಣಪ್ಪ ಯಾನೇ ಇ.ಕೆ.!



ಚಿತ್ತನಗೆರೆ ಸೀನ



ಹೇಮಂತ್‌ಕುಮಾರ್



ಡಾ. ಶ್ರೀನಿವಾಸಮೂರ್ತಿ



ಸುನಂದ



ಬೆಮೆಲ್ ಮಗ ಕಾಂತರಾಜು

ರಾಜಕೀಯವಾಗಿ ತಾನು ಜೆಡಿಎಸ್‌ನಲ್ಲೇ ಇದ್ದರೂ ಇ.ಕೆ. ಕುಮಾರಣ್ಣನಿಗೆ ಪರಮಾಪ್ತನಾಗಿರುವುದು ಕಾಂತರಾಜು ಸಿಟ್ಟಿನ ಮೂಲ. ಕಾಂಗ್ರೆಸ್ ಅಧಿಕಾರದಲ್ಲಿರುವುದರಿಂದ ರಾಜಕೀಯವಾಗಿ ಜೆಡಿಎಸ್‌ನಲ್ಲಿದ್ದು ಹೆಚ್ಚಿನ ಲಾಭವೇನಿಲ್ಲ, ಇಂಥಾ ಸ್ಥಿತಿಯಲ್ಲಿ ಕಾಂಗ್ರೆಸ್ ಜೊತೆ ಕೈಜೋಡಿಸಿಬಿಟ್ಟರೆ ಕನಿಷ್ಠ ತಂದೆಯ ಹತ್ಯೆಯ ವಿಚಾರಣೆಗೆ ಮತ್ತು ಹಂತಕರಿಗೆ ಶಿಕ್ಷೆ ವಿಧಿಸುವುದಕ್ಕಾದರೂ ಬಲ ಪ್ರಾಪ್ತಿಯಾಗುತ್ತದೆ.

## ಮೂರ್ಖ ಸಾಹಸ?

ಇದು ಬೆಮೆಲ್ ಮಗ ಕಾಂತರಾಜು ಲೆಕ್ಕಾಚಾರ.

## ಕಡಬಗೆರೆ ಶ್ರೀನಿವಾಸ್ ಕಾಂಗ್ರೆಸ್ ಪ್ರವೇಶದ ಹಿಂದೆ

ನೆಲಮಂಗಲ ಜೆಡಿಎಸ್ ಶಾಸಕರ ಕಾಂಗ್ರೆಸ್ ಖಯಾಲಿಗೆ ಏನೆಲ್ಲ ಆಯಾಮಗಳಿವೆಯೋ ಅದೆಲ್ಲಕ್ಕಿಂತಲೂ ಮುಖ್ಯವಾದ ಘಟನೆ ನಡೆದದ್ದು ಇಲ್ಲಿಗೆ ವಾರದ ಹಿಂದೆ. ಅದು ಯಶವಂತಪುರದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಹಾಲಿ ಅಧ್ಯಕ್ಷ ಕಡಬಗೆರೆ ಶ್ರೀನಿವಾಸ್‌ರ ಕಾಂಗ್ರೆಸ್ ಪ್ರವೇಶ!

ನಿನ್ನೆಮೊನ್ನೆಯ ತನಕ ಬಿಜೆಪಿಯ ಲೋಕಲ್ ನಾಯಕನೆಂದೇ ಚಾಲ್ತಿಯಲ್ಲಿದ್ದ ಕಡಬಗೆರೆ ಶ್ರೀನಿವಾಸ್ ಯಲಹಂಕ ಶಾಸಕ ವಿಶ್ವನಾಥ್‌ರ ಪರಮಾಪ್ತ ಮತ್ತು ಮಾಗಡಿ ರಸ್ತೆ, ದಾಸನಪುರ, ಮಾದಾವರ ಸುತ್ತಮುತ್ತಲ ಏರಿಯಾಗಳ ಪ್ರಭಾವಿ ಮುಖಂಡ- ನೆಲಮಂಗಲದ ಜನಾನುರಾಗಿ ಬಿನ್ನಮಂಗಲ ಕೃಷ್ಣಪ್ಪ ಬದುಕಿರುವವರೆಗೂ ಪಕ್ಷ ನಿಷ್ಠೆ ತೊರೆದು ಬೆಮೆಲ್‌ಗೆ ಆತ್ಮೀಯರಾಗಿದ್ದ ಶ್ರೀನಿವಾಸ್ ಅವರ ಬೆಂಬಲವಿಲ್ಲದಿದ್ದರೆ ವಿಶ್ವನಾಥ್ ಯಲಹಂಕಕ್ಕೆ ಶಾಸಕನಾಗುವುದೇ ಕಷ್ಟವಿತ್ತು, ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದೇ ಶ್ರೀನಿವಾಸ್ ಕಡಬಗೆರೆ ಸಾಮ್ರಾಜ್ಯಕ್ಕೆ ಆತಂಕ ಶುರುವಾಯಿತು.



ಕಡಬಗೆರೆ ಶ್ರೀನಿವಾಸ್

ಒಂದೆಡೆ ಬೆಮೆಲ್ ಹತ್ಯೆಯ ದೌರ್ಭಾಗ್ಯ ಮತ್ತೊಂದೆಡೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯಭಾರ. ಹಿಂದೊಮ್ಮೆ ಇದೇ ಎಪಿಎಂಸಿ ಯಾರ್ಡಿಗೆ ಇ.ಕೆ. ಅಧ್ಯಕ್ಷನಾಗಿದ್ದಾಗ ನಡೆದ ಭೂಕಬಳಿಕೆಯಲ್ಲಿ ಮಾರುಕಟ್ಟೆ ಯಾರ್ಡಿಗೆಂದು ಮೀಸಲಿಟ್ಟಿದ್ದ ನೂರೆಕರೆಯಷ್ಟು ಭೂಮಿಯನ್ನು ರಿಯಲ್ ಎಸ್ಟೇಟ್ ಖದೀಮರು ಕೊಳ್ಳೆ ಹೊಡೆದಿದ್ದರ ವಿರುದ್ಧ ಹೋರಾಡಬೇಕೆಂದರೆ ಅದಕ್ಕೆ ಕಾಂಗ್ರೆಸ್ ಬೆಂಬಲ ಅನಿವಾರ್ಯವೆಂಬುದು ಶ್ರೀನಿವಾಸ್ ಲೆಕ್ಕಾಚಾರ.

ಅಂಥಾ ಶ್ರೀನಿವಾಸ್‌ರೇ ಕಾಂಗ್ರೆಸ್ಸಿಗೆ ಹೋದ ಮೇಲೆ ಬೆಮೆಲ್ ಮಗ ಕಾಂತರಾಜು ತಾನೇ ಏನು ಮಾಡಲು ಸಾಧ್ಯ?

## ಬೆಮೆಲ್ ಬೆಂಬಲಿಗರ ಪಾಳಯದಲಿ

ಶಾಸಕ ಶ್ರೀನಿವಾಸಮೂರ್ತಿ ಹೋದರೆಷ್ಟು ಬಿಟ್ಟರೆಷ್ಟು ನಾವಂತೂ ಕಾಂಗ್ರೆಸ್ಸಿಗೆ ನೆಗೆಯಲು ರೆಡಿ ಎಂದೇ ತುದಿಗಾಲಲ್ಲಿ ನಿಂತ ಜೆಡಿಎಸ್ ಲೋಕಲ್ ನಾಯಕರ ಹಿಂಡೊಂದು ನೆಲಮಂಗಲದಲ್ಲಿ ಸಜ್ಜಾಗಿದೆ. ಈ ಪೈಕಿ ಮುಂಚೂಣಿಯಲ್ಲಿರುವವರು ಸ್ಥಳೀಯ ಮುನ್ಸಿಪಾಲಿಟಿ ಕೌನ್ಸಿಲರ್‌ಗಳಾದ ಪಿಳ್ಳಪ್ಪ ಮತ್ತು ಹೇಮಂತ್‌ಕುಮಾರ್.



ಪಿಳ್ಳಪ್ಪ

ಇವರ ಬೆನ್ನಲ್ಲೇ ಸೋಂಪುರದ ಜಿಲ್ಲಾ ಪಂಚಾಯತಿ ಸದಸ್ಯರ ಸುನಂದಾ ಇವರ ಪತಿ ಗೋದೇನಹಳ್ಳಿ ಶಿವಣ್ಣ ಮಾರಗೊಂಡನಹಳ್ಳಿಯ ಬಲಾಢ್ಯ ಕಂಟ್ರಾಕ್ಟರ್ ಹನುಮಂತರಾಜು, ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ವಕೀಲರ ಸಂಘದ ಮುಖಂಡ ಕೇಶವಮೂರ್ತಿ, ವೆಂಕಟೇಶ್ವರ ಚೌಲ್ಟ್ರಿ ಗಂಗಣ್ಣ, ತ್ಯಾಮಗೊಂಡ್ಲು ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ರಾಜ ಅಲಿಯಾಸ್ ಅಡಾಸ್ ರಾಜು ಮತ್ತು ದಾಬಸ್‌ಪೇಟೆ ಶ್ರೀನಿವಾಸ್ ಉರ್ಫ್ ಭಾರತಿಪುರದ ಸೀನ ಇತ್ಯಾದಿ ಬರೋಬ್ಬರಿ ಒಂದು ಡಜನ್ ಸ್ಥಳೀಯ ಜೆಡಿಎಸ್ ಮುಖಂಡರ ಗುಂಪು ಕಾಂಗ್ರೆಸ್ ಸೇರಲು ಕಾತರಿಸುತ್ತಿದೆ.

ಹೆಸರಿಗೆ ಇವರೆಲ್ಲ ಜೆಡಿಎಸ್ ರಾಜಕಾರಣಿಗಳಾದರೂ ವರಸೆಯಲ್ಲಿ ಹತ ಬೆಮೆಲ್ ಕೃಷ್ಣಪ್ಪನವರ ಸಂಬಂಧಿಗಳು ಅಥವಾ ನಿಷ್ಠಾವಂತ ಬೆಂಬಲಿಗರಾಗಿದ್ದವರು. ಬೆಮೆಲ್ ಹತ್ಯೆಗೆ ನ್ಯಾಯ ದಕ್ಕಬೇಕೆಂಬ ನಿರೀಕ್ಷೆಯೋ, ಇನ್ನು ನಾಲ್ಕೂವರೆ ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರವಿರುತ್ತದೆಯಾದ್ದರಿಂದ ಅನಾಥ ಪ್ರಜ್ಞೆಯೋ ಗೊತ್ತಿಲ್ಲ; ಬೆಮೆಲ್ ಮಗ ಕಾಂತರಾಜುವಿನ ಗ್ರೀನ್ ಸಿಗ್ನಲ್ ಸಿಕ್ಕಿದ್ದೇ ತಡ ಇವರೆಲ್ಲ ಕಾಂಗ್ರೆಸ್ ಪಾಲಾಗುವುದಂತೂ ಶತಸ್ಸಿದ್ಧ.

ಅಷ್ಟಕ್ಕೂ ಕಾಂತರಾಜು ಕಾಯುತ್ತಿರುವ ಗಳಿಗೆ ಅಥವಾ ಮುಹೂರ್ತಕ್ಕೆ ಮುನ್ನುಡಿ ಬರೆಯುವುದು ಪರಮೇಶ್ವರ್ ಸಾಹೇಬರೋ ಅಥವಾ ಕಡಬಗೆರೆ ಶ್ರೀನಿವಾಸ್ ಕುದುರಿಸಬಹುದಾದ ವ್ಯವಹಾರವೋ?

ತ ಕೇವಲ ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ತಾನೊಬ್ಬನೇ ಪ್ರಯೋಜನವಿಲ್ಲ, ಎಮ್ಮೆಲ್ಲೆಯನ್ನೇ ಮುಂದಿಟ್ಟು ವ್ಯವಹಾರ ಕುದುರಿಸಿದರೆ ದುಡ್ಡಿಗಿಂತಲೂ ರದ ಲಾಭವೇ ಅಧಿಕವೆಂದು ಕಾಂತರಾಜು ಲೆಕ್ಕ ಯೇ ಪರಮೇಶ್ವರ್ ಪರ ಲಾಬಿಗಿಳಿದಿದ್ದಾರೆ. ಒಂದು ಂದ ಪ್ರಕಾರ ನೆಲಮಂಗಲದ ಆಪರೇಷನ್ ಹಸ್ತಕ್ಕೆ ೂರ್ತ ನಿಗದಿಯಾಗುವುದೊಂದೇ ಬಾಕಿಯಿದೆ. ್ ದೇವೇಗೌಡರೇ ಬಂದು ಡಾ. ಶ್ರೀನಿವಾಸಮೂರ್ತಿ ಕಂಡು ಹಠ ಹಿಡಿದು ಕುಳಿತರೂ ಕುಮಾರಣ್ಣ ಾಜುವನ್ನು ಕರೆಸಿಕೊಂಡು ಆಣೆ ಪ್ರಮಾಣ ಹಾಕಿದ್ದೂ . ಮೇಲುನೋಟಕ್ಕೆ ನೆಲಮಂಗಲ ಜೆಡಿಎಸ್ ಕ್ಕೊಳಪಟ್ಟಂತೆ ಕಾಣಬಹುದು. ಬೆಮೆಲ್ ಮಗ ಾಜು ಮತ್ತು ಶಾಸಕ ಶ್ರೀನಿವಾಸಮೂರ್ತಿ ಏನೇ ್ ನಿಷ್ಠೆಯ ಶಪಥಗೈಯಲೂಬಹುದು. ಅವರ ್ ನಿಷ್ಠೆ ಎಲ್ಲಿಯವರೆಗೆಂದರೆ ಅದು ಪರಮೇಶ್ವರ್ ಗ್ನಲ್ ಸಿಕ್ಕುವ ತನಕ ಮಾತ್ರ ಎಂಬುದು ಗುಟ್ಟೇನಲ್ಲ. ೇಶ್ವರ್ ಕೂಡ ಎಲ್ಲ ತಯಾರಿ ನಡೆಸಿಕೊಂಡೇ ಾಂಡ್ ಆಣತಿಗಾಗಿ ಕಾಯುತ್ತಿದ್ದಾರೆ ನಿಜ. ಆದರೆ ಾಂಡ್ ತಲೆ ಕೆಟ್ಟಿಲ್ಲವಲ್ಲ. ಅಷ್ಟಕ್ಕೂ ಸಿದ್ದರಾಮಯ್ಯ ಕಾಲೆಳೆಯುವ ದುಸ್ಸಾಹಸಕ್ಕಾಗಲಿ, ದುಡುಕುವ್ರು ಹೋಗುವಷ್ಟು ಹುಚ್ಚಾಗಲಿ, ಮೂರ್ಖತನವಾಗಲಿ ಬ್ಬ ಕಾಂಗ್ರೆಸ್ ನಾಯಕನಿಗೆಲ್ಲಿದೆ?

ಮ ಗೊತ್ತಿದ್ದೂ ಪರಮೇಶ್ವರ್ ಪೇಚಾಟ ನಿಂತಿಲ್ಲ. ುಷ್ಟೇ ಅರಮನೆ ಮೈದಾನದಲ್ಲಿ ನಡೆದ ಕಾಂಗ್ರೆಸ್ ಜಾತಿ ಸಮಾವೇಶದಲ್ಲಿ ತಾನು ಇಷ್ಟರಲ್ಲೇ ದಲಿತ ಸಭೆ ಕರೆಯುತ್ತೇನೆಂದು ಘೋಷಿಸಿಬಿಟ್ಟರು. ಅವತ್ತು ೇಶ್ವರ್ ದಲಿತ ಕಾಳಜಿ ಹೇಗಿತ್ತೆಂದರೆ ಕೇಂದ್ರ ಮಂತ್ರಿ ಯೇ ಬೆಳಗ್ಗೆ ಹತ್ತೂವರೆಯ ಹೊತ್ತಿಗೆ ವೇದಿಕೆಗೆ ಾಗಿದ್ದರು. ಮಂತ್ರಿಗಳಾದ ಶ್ರೀನಿವಾಸ್ ಪ್ರಸಾದ್, ೇವಪ್ಪ ಕೂಡ ಅದೇ ಸಮಯಕ್ಕೆ ಬಂದು ಯಲ್ಲಿದ್ದರೆ ಪರಮೇಶ್ವರ್ ಬಂದದ್ದು ಬರೋಬ್ಬರಿ ಗಂಟೆ ತಡವಾಗಿ!

ಾಗೆಂತ ಖರ್ಗೆ, ಶ್ರೀನಿವಾಸ್ ಪ್ರಸಾದ್, ಮಹದೇವಪ್ಪಗೆ ೆಲಸವಿಲ್ಲ ಎಂದರ್ಥವೇ? ತಂತಮ್ಮ ಮಾತು ದ್ದೇ ವೇದಿಕೆಯಿಳಿದ ಈ ಮಂತ್ರಿಗಳ ವಿರುದ್ಧ ೇಶ್ವರ್ ವಾಚಾಮಗೋಚರ ಟೀಕೆಗಿಳಿದರು. ಗಳೆಂದ ಮಾತ್ರಕ್ಕೆ ಭಾಷಣ ಮುಗಿಸಿ ಜಾಗ ಖಾಲಿ ವುದಲ್ಲ. ಕಾರ್ಯಕರ್ತರ ಅಹವಾಲು ಕೇಳುವಷ್ಟು ಅವರಿಗಿಲ್ಲದೆ ಹೋದರೆ ಅಂಥವರು ಏಕೆ ಯಾಗಿರಬೇಕು? ಎಂದೆಲ್ಲ ಟೀಕಿಸಿದರು.

## ಆಪರೇಷನ್ ಹಸ್ತ....

ಮ ಪರಮೇಶ್ವರ್ ನೇರವಾಗಿ ಕೇಂದ್ರ ಮಂತ್ರಿ ುನ್ನೇ ಕೆಣಕಿದಂತಿತ್ತು. ಒಬ್ಬ ಕೇಂದ್ರ ಮಂತ್ರಿ ಕ್ಕೆ ಸರಿಯಾಗಿ ಬಂದಿದ್ದರೂ ತಾನು ಒಂದು ಗಂಟೆ ಬಂದದ್ದನ್ನು ಮರೆತು ಖರ್ಗೆ, ಶ್ರೀನಿವಾಸ್ ರಂಥ ಹಿರಿಯರನ್ನೇ ಹೀಯಾಳಿಸುವಷ್ಟು ತನಕ್ಕೆ ಪರಮೇಶ್ವರ್ ಕೈಯಿಡಬಾರದಿತ್ತು.

ವರ ಬೆನ್ನಲ್ಲೇ ಪರಮೇಶ್ವರ್ ಮತ್ತೊಂದು ಅಧಿಕ ತನಕ್ಕಿಳಿದು ನೇರವಾಗಿ ಮು.ಮಂ.ಸಿದ್ದು ವಿರುದ್ಧವೇ ಾಂದನ್ನು ಬಿಟ್ಟದ್ದು ದಲಿತ ಶಾಸಕರು ಮತ್ತು ಗಳ ಮೀಸಲಾತಿಯ ನೆಪದಲ್ಲಿ. 'ಅಂಬೇಡ್ಕರ್ ಗಳಿಗೆ ಧಕ್ಕೆಯಾಗಿದೆ. ಈ ಬಗ್ಗೆ ಸರ್ಕಾರದ ಕಣ್ಣು ಇಷ್ಟರಲ್ಲೇ ದಲಿತ ಶಾಸಕರ ಸಭೆ ಕರೆಯಲಿದ್ದೇನೆ. ಾಕಲು ದಲಿತರು, ಅಧಿಕಾರ ನಡೆಸಲು ಇನ್ನಾರೋ ದರೆ ಕಾಂಗ್ರೆಸ್ ಬಗ್ಗೆ ಭ್ರಮನಿರಸನವಾಗುತ್ತೆ ಇದನ್ನೆಲ್ಲ ಲು ನಾನೇ ಪರಿಶಿಷ್ಟ ಶಾಸಕರ ಸಭೆ ಕರೆಯುತ್ತೇನೆ...!

ಮೇಶ್ವರ್‌ರ ಇಂಥ ಮಾತುಗಳ ಹಿಂದಿರುವ ಹುನ್ನಾರ ರಿಗೂ ಅರ್ಥವಾಗುವಂಥದ್ದೆ. ಒಂದೆಡೆ ಖರ್ಗೆ ಾಸಹನೆ ಮತ್ತೊಂದೆಡೆ ಸಿದ್ದು ವಿರುದ್ಧ ಹೊಟ್ಟೆ ಕೇವಲ ಪರಿಶಿಷ್ಟ ಶಾಸಕರ ಸಭೆಯನ್ನಷ್ಟೇ ನಡೆಸ ಪರಮೇಶ್ವರ್ ತಾನೊಬ್ಬ ಕೆಪಿಸಿಸಿ ಅಧ್ಯಕ್ಷ ನ್ನೇ ಮರೆತಿರುವಂತಿದೆ. ಕೇಂದ್ರ ಮಂತ್ರಿಗಳಾದ ಮತ್ತು ಮುನಿಯಪ್ಪ ಹೇಳಿಕೇಳಿ ದಲಿತರೆ. ಇನ್ನು ಾಸ್ ಪ್ರಸಾದ್, ಮಹದೇವಪ್ಪ, ಆಂಜನೇಯ, ಶ್ ನಾಯಕ್ ಮತ್ತು ತಂಗಡಗಿ ಸೇರಿದರೆಂದರೆ ಸಂಪುಟದಲ್ಲಿ ಪರಿಶಿಷ್ಟ ಮಂತ್ರಿಗಳೇ ಐದು ನಾಗುತ್ತಾರೆ. ವಾಲ್ಮೀಕಿ ನಾಯಕ ಜನಾಂಗ ಗೆ ಸಮವಾಗಿದ್ದರೂ ಜಾರಕಿಹೊಳಿಯೊಬ್ಬರೇ ಾಗಿರುವಾಗ; ಅಂಥಾ ಕುರುಬ ಜನಾಂಗದ ಸಿದ್ದು ಬಿಟ್ಟರೆ ಇಡೀ ಸಂಪುಟದಲ್ಲಿ ಮತ್ತೊಬ್ಬ ಬ್ಬರುವಾಗ ಅಂಬೇಡ್ಕರ್ ಆಶಯಗಳ ಹೆಸರಲ್ಲಿ ಶಾಸಕರ ಸಭೆ ನಡೆಸ ಹೊರಟ ಪರಮೇಶ್ವರ್ ಏನಾದರೂ ಅರ್ಥವಿದೆಯೇ?

ರೇಷನ್ ಹಸ್ತದ ಪರಮೇಶ್ವರ್ ಪೇಚಾಟಕ್ಕೆ ಏನೆಲ್ಲ ಕುತಂತ್ರ, ಹುನ್ನಾರಗಳೋ...?

● ಡಾ.ಸೋಮನಾಥ್

# ಭಿನ್ನಮತದ ಸೂತ್ರಧಾರಿ ಕೃಷ್ಣ

ಹಿಂದುಳಿದ ವರ್ಗದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಹಣಿಯಲು ದಲಿತ ಜನಾಂಗದ ಕೇಂದ್ರ ಸಚಿವರೇ ಸೂಕ್ತ ಎಂಬ ಸೂತ್ರದೊಂದಿಗೆ ಭಿನ್ನಮತಕ್ಕೆ ಚಾಲನೆ ಸಿಕ್ಕಿದೆ. ವಿಚಿತ್ರವೆಂದರೆ ದಲಿತರನ್ನು ಮುಂದಿಟ್ಟುಕೊಂಡು ಭಿನ್ನಮತವನ್ನು ಹುಟ್ಟುಹಾಕುತ್ತಿರುವವರು ಆಕ್ಸ್‌ಫರ್ಡ್ ಒಕ್ಕಲಿಗ ಕುಖ್ಯಾತಿಯ ಎಸ್.ಎಂ.ಕೃಷ್ಣ!

ಸಾಮಾನ್ಯವಾಗಿ ಒಂದು ಪಕ್ಷದ ಸರ್ಕಾರ ರಚನೆಯಾಗಿ ಹೊಸ ಮುಖ್ಯಮಂತ್ರಿ ನೇಮಕಗೊಂಡಾಗ ವಿಪಕ್ಷಗಳ ನಾಯಕರು ಕೂಡಾ ಪ್ರಾರಂಭದಲ್ಲಿ ಒಂದಷ್ಟು ಮೃದುಧೋರಣೆ ತಾಳಿರುತ್ತಾರೆ. 'ಇನ್‌ಕ್ಯೂಬೆನ್ಸಿ ಪೀರಿಯಡ್' ಎನ್ನಲ್ಪಡುವ ಪ್ರಾರಂಭದ ಕೆಲ ತಿಂಗಳುಗಳ ಕಾಲ ಮುಖ್ಯಮಂತ್ರಿಯ ನೀತಿ ನಿರೂಪಣೆಗಳನ್ನು ಅಷ್ಟಾಗಿ ಟೀಕಿಸಲು ಯಾರೂ ಹೋಗುವುದಿಲ್ಲ. ತಮ್ಮ ಸಾಂಪ್ರದಾಯಿಕ ವೈರಿ ಅಥವಾ ಪೂರ್ವಾಶ್ರಮದ ದಾಯಾದಿ ಸಿದ್ದರಾಮಯ್ಯನವರ ವಿಷಯದಲ್ಲೂ ಇದನ್ನು ಆರು ತಿಂಗಳ ಕಾಲ ಪಾಲಿಸುವುದಾಗಿ ಅಂದಿನ ವಿಪಕ್ಷ ನಾಯಕ ಕುಮಾರಸ್ವಾಮಿ ಬಹಿರಂಗವಾಗೇ ಘೋಷಿಸಿದ್ದರು. ಆರು ತಿಂಗಳ ಕಾಲ ಇದನ್ನು ಪಾಲಿಸಲಿಲ್ಲವಾದರೂ ಕನಿಷ್ಠ ಮೂರು ತಿಂಗಳವರೆವಿಗಾದರೂ ಅದಕ್ಕವರು ಬದ್ಧರಾಗಿದ್ದರು. ಆದರೆ 'ದೂರದ ಮಿತ್ರನಿಗಿಂತ ಹತ್ತಿರದ ಶತ್ರುವೇ ವಾಸಿ' ಎನ್ನುವಂತೆ ಸಿದ್ದರಾಮಯ್ಯನವರನ್ನು ಪ್ರಾರಂಭದಿಂದಲೇ ಕಾಡಿದ್ದು ಮಾತ್ರ ಅವರದೇ ಪಕ್ಷದ ನಾಯಕರು!!

## ಮೂಲ ವರ್ಸಸ್ ವಲಸಿಗರು

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಆಯ್ಕೆಯಾದ ರೀತಿ, ಕಣದಲ್ಲಿದ್ದ ಮುಖ್ಯಮಂತ್ರಿ ಆಕಾಂಕ್ಷಿಗಳು, ತದನಂತರದ ಆಕಾಂಕ್ಷಿಗಳ ಬೆಂಬಲಿಗರ ಬಹಿರಂಗ ಬಂಡಾಯ ಇವೆಲ್ಲಾ ಎಲ್ಲರಿಗೂ ಗೊತ್ತಿರುವ ಸಂಗತಿಗಳೆ. ವಾಸ್ತವವಾಗಿ ದೇವರಾಜ ಅರಸ್ ಅವರೊಬ್ಬರನ್ನು ಬಿಟ್ಟರೆ ಇಷ್ಟೊಂದು ಸರಳವಾಗಿ ಆಯ್ಕೆಯಾದ ಕಾಂಗ್ರೆಸ್ ಮುಖ್ಯಮಂತ್ರಿಯೆಂದರೆ ಅದು ಸಿದ್ದರಾಮಯ್ಯ ಮಾತ್ರ. ಉಳಿದಂತೆ ಕಾಂಗ್ರೆಸ್ ಮುಖ್ಯಮಂತ್ರಿಗಳೆಲ್ಲರೂ ಹೈಕಮಾಂಡ್‌ನ 'ಸೀಲ್ಡ್ ಕವರ್ ಸಿಎಂ'ಗಳೇ. ಮೂಲ ಕಾಂಗ್ರೆಸ್ಸಿಗರ ಹೊಟ್ಟೆಯುರಿಗೆ ಮೂಲ ಕಾರಣವಾಗಿದ್ದೇ ಇದು. ಇದಾದ ನಂತರ ಸಿದ್ದರಾಮಯ್ಯನವರ ಸಚಿವ ಸಂಪುಟಕ್ಕೆ ಸೇರ್ಪಡೆಯಾದವರಲ್ಲಿ ಜನತಾ ಪರಿವಾರದಿಂದ ವಲಸೆ ಬಂದಿದ್ದವರು ಸಾಕಷ್ಟು ಮಂದಿ ಇದ್ದು ಅವರಿಗೆಲ್ಲ ಪ್ರಬಲ ಖಾತೆಗಳು ಸಿಕ್ಕಿದ್ದೂ ಕೂಡಾ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗಿತ್ತು.

ಇದಲ್ಲದೇ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲೇ ಭರವಸೆ ನೀಡಿದ್ದ ಸಾಲ ಮನ್ನಾ, ಅನ್ನ ಭಾಗ್ಯ ಮುಂತಾದ ಜನಪರ ಯೋಜನೆಗಳನ್ನು ಸಿದ್ದಾಮಯ್ಯ ಆತುರಾತುರವಾಗಿ ಪ್ರಕಟಿಸಿದಾಗ ಭಿನ್ನಮತೀಯರಲ್ಲಿ ಆಂತರಿಕ ಒಳಗುದಿ ಪ್ರಾರಂಭವಾಗಿತ್ತು. ಹೀಗಾಗಿ ಒಬ್ಬ ಮುಖ್ಯಮಂತ್ರಿಗೆ ಪ್ರಾರಂಭದ ತಿಂಗಳುಗಳಲ್ಲಿ ಸಹಜವಾಗಿ ಸಿಗಬಹುದಾದ 'ಇನ್‌ಕ್ಯೂಬೆನ್ಸಿ ಪೀರಿಯಡ್' ಸ್ವಪಕ್ಷೀಯರಿಂದಲೇ, ಅಂದರೆ ಮೂಲ ಕಾಂಗ್ರೆಸ್ಸಿಗರಿಂದಲೇ, ಸಿದ್ದರಾಮಯ್ಯನವರಿಗೆ ಸಿಗಲೇ ಇಲ್ಲ.

## ಒಳಗುದಿ ಜ್ವಾಲಾಮುಖಿಯಾದದ್ದು!

ಇತ್ತೀಚಿನ ದಿನಗಳಲ್ಲಿ ಎಸ್.ಆರ್.ಹಿರೇಮಠ್ ಅವರು ಡಿ.ಕೆ.ಶಿವಕುಮಾರ್ ಮತ್ತು ರೋಷನ್ ಬೇಗ್ ವಿರುದ್ಧ ನಿರಂತರವಾಗಿ ದಾಖಲೆಗಳ ಅಸ್ತ್ರ ಬಿಡುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಗಳೆ. ಆದರೆ ಯಾವಾಗ ಹಿರೇಮಠರು ಎಸ್.ಎಂ. ಕೃಷ್ಣರ ಅಳಿಯ ಸಿದ್ಧಾರ್ಥರ ಬಾಗಮನೆ ಎಸ್ಟೇಟ್ ಒತ್ತುವರಿಯ ಮೇಲೂ ಫೋಕಸ್ ಮಾಡತೊಡಗಿದರೋ ಆಗ ಸಂಚಲನ ಶುರುವಾಯಿತು.

ತಮ್ಮ ಅಳಿಯನ ವಿರುದ್ಧ ಹಿರೇಮಠರಿಗೆ ದಾಖಲೆಗಳನ್ನು ಒದಗಿಸುತ್ತಿರುವುದು ಸಿದ್ದರಾಮಯ್ಯನವರ ಬೆಂಬಲಿಗರೆ ಎಂಬ ಅನುಮಾನ ಕೃಷ್ಣ ಅವರದ್ದಾಗಿತ್ತು. ಬಹಿರಂಗವಾಗಿ ಏನೂ ಮಾಡಲಾಗದ 'ಕಲಿಯುಗದ ಕೃಷ್ಣ' ತಮ್ಮ ಮನೆಯಿಂದಲೇ 'ಬಂಡಾಯದ ಪಾಂಚಜನ್ಯ' ಮೊಳಗಿಸಿ ದರು. ಕೃಷ್ಣ ತಮ್ಮ ಹೋದ ಯುದ್ಧಕ್ಕೆ ಅರ್ಜುನನ್ನಾಗಿ ಆಯ್ಕೆ ಮಾಡಿಕೊಂಡಿದ್ದು ಚಿಕ್ಕಬಳ್ಳಾಪುರದಿಂದ ಪ್ರಥಮ ಬಾರಿಗೆ ಆಯ್ಕೆಯಾಗಿರುವ ಕಾಂಗ್ರೆಸ್ ಶಾಸಕ ಡಾ. ಸುಧಾಕರ್ ಅವರನ್ನು.

## ಯಾರೀ ಸುಧಾಕರ್?

ಡಾ.ಸುಧಾಕರ್ ಎಲ್ಲಾ ರೀತಿಯಿಂದಲೂ ಕೃಷ್ಣ ಅವರಿಂದ ಪ್ರಭಾವಿತರಾಗಿರುವವರು. ನಡೆ-ನುಡಿ, ವೇಷ-ಭೂಷಣ, ಹೇರ್ ಸ್ಟೈಲ್ ಕೂಡಾ ಕೃಷ್ಣ ಅವರಂತೆಯೇ. ಜತೆಗೆ ಮಿತಭಾಷಿ. ಡಿಪ್ಲೋಮ್ಯಾಟ್. ಈ ಕಾರಣಕ್ಕಾಗಿಯೇ ಕೃಷ್ಣ ಕೇಂದ್ರದಲ್ಲಿ ವಿದೇಶಾಂಗ ಸಚಿವರಾಗಿದ್ದಾಗ ಡಾ.ಸುಧಾಕರ್ ಅವರನ್ನು ಶ್ರೀಲಂಕಾದ ಗೌರವ ಕಾನ್ಸುಲೇಟ್ ಎಂದು ನೇಮಿಸಿದ್ದರು.

ಶಾಲಾ ಶಿಕ್ಷಕ ಪಿ.ಎನ್.ಕೇಶವರೆಡ್ಡಿ ಎಂಬುವವರ ಮಗ ಸುಧಾಕರ್. ತಂದೆ ಕೇಶವರೆಡ್ಡಿ ನೇರ ನಿಷ್ಠುರ ವ್ಯಕ್ತಿಯಾಗಿದ್ದು ಮಂಡಿಕಲ್ ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಜಾತಿಯಲ್ಲಿ ಒಕ್ಕಲಿಗರೇ ಆದ ಸುಧಾಕರ್ ಆರ್ಥಿಕವಾಗಿಯೂ ಬಲಾಢ್ಯರೇ. ಸುಧಾಕರ್ ತುಮಕೂರಿನ ಸಿದ್ಧಾರ್ಥ ಮೆಡಿಕಲ್ ಕಾಲೇಜಿನಿಂದ ವೈದ್ಯ ಪದವೀಧರರು. ಆದರೆ ಕೆಲಸ ನಿರ್ವಹಿಸಿದ್ದು ರಿಲಯನ್ಸ್‌ನ ಉಪಾಧ್ಯಕ್ಷರಾಗಿ. ಎಡಗೈ ವಿಷಯ ಬಲಗೈಗೆ ಗೊತ್ತಾಗದಷ್ಟು ವ್ಯವಹಾರ ನಿಪುಣ. ಕೃಷ್ಣ, ಅಂಬಿಕಾ ಸೋನಿ, ರಾಜಶೇಖರ್ ರೆಡ್ಡಿ ತರಹದ ಘಟಾನುಘಟಿಗಳ ಸಂಪರ್ಕವಿತ್ತು.

## ಎಕ್ಸ್‌ಪರ್ಟ್ ಟ್ರಬಲ್ ಶೂಟರ್!




ಮಹತ್ವಾಕಾಂಕ್ಷಿಯಾದ ಡಾ.ಸುಧಾಕರ್ ಅವರ ತಂತ್ರಗಾರಿಕೆ, ವ್ಯವಹಾರ ನೈಪುಣ್ಯತೆಗೆ ಸೂಕ್ತ ನಿದರ್ಶನವೆಂದರೆ ಕಳೆದ ವರ್ಷ ನಡೆದ ಚಿಕ್ಕಬಳ್ಳಾಪುರ ವಿಧಾನಸಭಾ ಚುನಾವಣೆ. ಇವರು ಪ್ರತಿನಿಧಿಸುತ್ತಿರುವ ಚಿಕ್ಕಬಳ್ಳಾಪುರಕ್ಕೆ ವೀರಪ್ಪ ಮೊಯ್ಲಿ ಸಂಸತ್ ಸದಸ್ಯರು. ಸಹಜವಾಗಿಯೇ ಮೊಯ್ಲಿ ಬಯಸಿದವರಿಗೆ ವಿಧಾನ ಸಭಾ ಟಿಕೆಟ್. ಅಂತೆಯೇ ಮೊಯ್ಲಿ ತಮ್ಮ ಪರಮಾಪ್ತ ಶಿಷ್ಯ ಆಂಜಿನಪ್ಪನಿಗೆ ಟಿಕೆಟ್ ಎಂದು ಘೋಷಿಸಿಯೇ ಬಿಟ್ಟರು. ಆದರೆ ಇದೇ ಕ್ಷೇತ್ರದ ಮೇಲೆ ಕಣ್ಣಿಟ್ಟು ನೂರಾರು ಕಾರ್ಯಕ್ರಮಗಳನ್ನು ಮಾಡಿದ್ದ ಸುಧಾಕರ್ ಸುಮ್ಮನೇ ಕೂರಲಿಲ್ಲ. ದೆಹಲಿಯಲ್ಲೇ ಬೀಡುಬಿಟ್ಟು ಅಂಬಿಕಾ ಸೋನಿಯಂತಹವರ ಆಶೀರ್ವಾದದಿಂದ ಟಿಕೆಟನ್ನು ತಮ್ಮದಾಗಿಸಿಕೊಂಡರು. ಇದರಿಂದ ಖುದ್ದು ಹೋದ ಅಂಜಿನಪ್ಪನ ಬೆಂಬಲಿಗರು ಅರಾಜಕತೆ ಸೃಷ್ಟಿಸಲು ಜಿಲ್ಲಾ ಕಾಂಗ್ರೆಸ್ ಕಚೇರಿಯನ್ನೇ ಧೂಳೀಪಟ ಮಾಡಿಬಿಟ್ಟರು. ಈ ಹಂತದಲ್ಲೂ ಮೊಯ್ಲಿ ಅಂಜಿನಪ್ಪನವರಿಗೇ ಟಿಕೆಟ್ ಎನ್ನುತ್ತಲೇ ಇದ್ದರು. ನಾಮಿನೇಷನ್ ಸಲ್ಲಿಸಲು ನಿರ್ಧರಿಸಿದ್ದ ಒಂದು ದಿನ ಮೊದಲೇ ನಾಮಪತ್ರ ಸಲ್ಲಿಸಿದ ಡಾ.ಸುಧಾಕರ್ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದರು.

## ಗೆಲುವು ಸುಲಭವಾಗಿರಲಿಲ್ಲ!

ಅಂದಿನ ಹಾಲಿ ಶಾಸಕ ಜೆಡಿಎಸ್‌ನ ಕೆ.ಪಿ.ಬಚ್ಚೆಗೌಡ ಸಾಮಾನ್ಯ ವ್ಯಕ್ತಿಯೇನೂ ಅಲ್ಲ. ಜನಾನುರಾಗಿ ನಾಯಕ ಕೆ.ಬಿ. ಪಿಳ್ಳಪ್ಪನವರ ಪುತ್ರರಾದ ಇವರು ರಾಜ್ಯದಲ್ಲಿ ಬೆರಳೆಣಿಕೆಯಷ್ಟಿರುವ ಅತ್ಯಂತ ಪ್ರಾಮಾಣಿಕ ಶಾಸಕರುಗಳಲ್ಲಿ ಒಬ್ಬರು. ಕ್ಷೇತ್ರದ ತೋಟದ ಮನೆಯಲ್ಲಿದ್ದುಕೊಂಡೇ ಕೃಷಿಯಲ್ಲೇ ಬದುಕಿದ ಪ್ರಗತಿಪರ ರೈತ. ಜತೆಗೆ ಬಿಜೆಪಿ ಸರ್ಕಾರವಿದ್ದರೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿದ ಕೀರ್ತಿಯೂ ಇವರಿಗಿತ್ತು.

ಅಲ್ಲದೇ ಅಂಜಿನಪ್ಪ ಮತ್ತವರ ಬೆಂಬಲಿಗರು ಡಾ.ಸುಧಾಕರ್ ಅವರನ್ನು ಸೋಲಿಸಲು ಷಡ್ಯಂತ್ರ ರೂಪಿಸಿದ್ದರು. ಇದೂ ಸಾಲದೆಂಬಂತೆ ಬಿಜೆಪಿ ಅಧಿಕಾರದಲ್ಲಿ ಇಲ್ಲದಿದ್ದ ಸಂದರ್ಭದಲ್ಲೇ 15 ಸಾವಿರ ಮತಗಳನ್ನು ಪಡೆದಿದ್ದ ಸ್ಥಳೀಕ ಭೈರೇಗೌಡರು ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದರು.

ಇಷ್ಟೆಲ್ಲಾ ಮೈನಸ್ ಪಾಯಿಂಟ್‌ಗಳಿದ್ದರೂ ಫಲಿತಾಂಶ ಬಂದಾಗ ಡಾ.ಸುಧಾಕರ್ 15 ಸಾವಿರ ಮತಗಳ ಅಂತರದಿಂದ ಜಯಶಾಲಿಯಾಗಿದ್ದರು. ಜೆ.ಡಿ.ಎಸ್‌ನ ಕೆ.ಪಿ.ಬಚ್ಚೆಗೌಡರು ಕಳೆದ ಬಾರಿಗಿಂತ 10 ಸಾವಿರ ಹೆಚ್ಚು ಮತ ಪಡೆದಿದ್ದರೂ, ಸುಧಾಕರ್‌ಗೆ 15 ಸಾವಿರ ಲೀಡ್ ಬಂದಿದ್ದು ಹೇಗೆ ಎಂದು ನೋಡಿದರೆ ಬಿಜೆಪಿ ಅಧಿಕಾರದಲ್ಲಿ ಇಲ್ಲದಾಗ 15 ಸಾವಿರ ಮತ ಪಡೆದಿದ್ದ ಭೈರೇಗೌಡರು ಈ ಬಾರಿ ಪಡೆದಿದ್ದು ಕೇವಲ ಮೂರು ಸಾವಿರದಷ್ಟು.

ಬಿಜೆಪಿಯ ಭೈರೇಗೌಡರನ್ನು ಬುಟ್ಟಿಗೆ ಹಾಕಿಕೊಂಡರು ಎಂದು ಅಂಜಿನಪ್ಪ ಪಟಾಲಂ ದೂರಿದರೆ, ಜೆಡಿಎಸ್‌ಗೆ ಹತ್ತು ಸಾವಿರ ಮತಗಳನ್ನು ಕ್ರಾಸ್ ವೋಟಿಂಗ್ ಮಾಡಿಸಿದ್ದೇ ಅಂಜಿನಪ್ಪ; ಆದರೂ ಯುವಕರು, ವಿದ್ಯಾವಂತರು ಡಾ.ಸುಧಾಕರ್ ಅವರ ವರ್ಚಸ್ಸಿಗೆ ಮನಸೋತು ಮತ ಚಲಾಯಿಸಿ ಗೆಲ್ಲುವಂತೆ ಮಾಡಿದರು ಎಂದು ಬೀಗಿದರು ಸುಧಾಕರ್ ಬೆಂಬಲಿಗರು. ಒಂದೆಡೆ ಹಾಲಿ ಸಂಸದರ ಪ್ರಾರಂಭಿಕ ಅಸಹಕಾರ; ಮತ್ತೊಂದೆಡೆ ಜಿಲ್ಲೆಯ ಪ್ರಭಾವಿ ಕಾಂಗ್ರೆಸ್ ನಾಯಕ ಅಂಜಿನಪ್ಪನವರ ಒಳಮಸಲತ್ತುಗಳನ್ನು ತನ್ನದೇ ರೀತಿಯಲ್ಲಿ ನಿಭಾಯಿಸಿ ಜಯಶಾಲಿಯಾದ ಪರಮಾಪ್ತ ಶಿಷ್ಯ ಸುಧಾಕರರ ತಂತ್ರಗಾರಿಕೆಯನ್ನು ಕಂಡು ಕೃಷ್ಣರಂಥ ರಾಜಕೀಯ ಮುತ್ಸದ್ದಿಯೇ ನಿಬ್ಬೆರಗಾಗಿದ್ದರು.

## ಸಭೆಗೆ ಕೃಷ್ಣ ಕುಮ್ಮಕ್ಕು?

ಇಂತಹ ಬಹುಮುಖ ವ್ಯಕ್ತಿತ್ವದ ಡಾ.ಸುಧಾಕರ್ ಭಿನ್ನಮತದ ಬೀಜ ಬಿತ್ತಲು ಹೊರಟದ್ದೂ ಕೂಡಾ ವಿಭಿನ್ನವಾಗಿಯೆ. ಹೊಸದಾಗಿ ಕಾಂಗ್ರೆಸ್ ಪಕ್ಷದಿಂದ ನೂತನವಾಗಿ ಆಯ್ಕೆಯಾಗಿರುವ ಶಾಸಕರನ್ನು ಒಗ್ಗೂಡಿಸಲು ಪ್ರಾರಂಭಿಸಿದರು. ಕೃಷ್ಣರ ಮನೆಯಲ್ಲಿಯೇ ಯಶವಂತಪುರ ಕ್ಷೇತ್ರದ ಎಸ್.ಟಿ.ಸೋಮಶೇಖರ್, ಆನೇಕಲ್ಲಿನ ಶಿವಣ್ಣ, ಹುನಗುಂದದ ಶಿವಶಂಕರಪ್ಪ ಕಾಶಪ್ಪ ಮುಂತಾದ ಸಮಾನಮನಸ್ಕ ಶಾಸಕರ ಸಭೆ ನಡೆಯಿತು ಎನ್ನಲಾಗಿದೆ. ಸಭೆಯಲ್ಲಿ ಸಿದ್ದರಾಮಯ್ಯನವರ ಕಾರ್ಯವೈಖರಿ, ಕಾಂಗ್ರೆಸ್‌ನ ಯುವ ಶಾಸಕರ ಕಡೆಗಣನೆ, ಅಧಿಕಾರಿಗಳ ವರ್ಗಾವಣೆಯಲ್ಲಿ ತಮ್ಮನ್ನು ನಿರ್ಲಕ್ಷಿಸುತ್ತಿರುವುದು, ಹಣಕಾಸು ಮಂಜೂರಾತಿಯಲ್ಲಿನ ತಾರತಮ್ಯ, ಜೆ.ಡಿ.ಎಸ್.ನಿಂದ ವಲಸೆ ಬಂದಿರುವ ನಾಯಕರುಗಳಿಗೆ ನೀಡುತ್ತಿರುವ ವಿಶೇಷ ಮನ್ನಣೆ ಮುಂತಾದವುಗಳ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ.

## ಖರ್ಗೆಯವರ ಹೆಸರು ಪ್ರಸ್ತಾಪ!

ರಾಷ್ಟ್ರ ಕಾಂಗ್ರೆಸ್ ಮತ್ತು ರಾಜ್ಯ ಕಾಂಗ್ರೆಸ್‌ನಿಂದ ಸಾಕಷ್ಟು ನಿರ್ಲಕ್ಷ್ಯ ಮತ್ತು ಅವಹೇಳನಕಾರಿಗೆ ಗುರಿಯಾಗಿರುವ ಕೃಷ್ಣ ಈಗ ಬಹಿರಂಗವಾಗಿ ಏನೂ ಮಾಡಲು ಸಾಧ್ಯವಿಲ್ಲದಂತೆ ಅಸಹಾಯಕರಾಗಿದ್ದಾರೆ. ಆದರೆ ಡಾ.ಸುಧಾಕರ್ ಅವರ ನೇತೃತ್ವದಲ್ಲಿ ಚಿಗುರೊಡೆಯುತ್ತಿರುವ ವ್ಯವಸ್ಥಿತ ಭಿನ್ನಮತಕ್ಕೆ ಮತ್ತೊಬ್ಬ ಪ್ರಭಾವಿಯ ಸಹಕಾರ ಸಿಕ್ಕರೆ ಲೋಕಸಭಾ ಚುನಾವಣೆಯ ನಂತರವಾದರೂ ಮುಖ್ಯಮಂತ್ರಿಯ ಬದಲಾವಣೆ ಸಾಧ್ಯವಾಗಬಹುದು ಎಂಬ ಲೆಕ್ಕಾಚಾರ ಕೃಷ್ಣರದ್ದು.

ಹೀಗಾಗಿ ಕೇಂದ್ರ ಸಚಿವ ಮಲ್ಲಿಕಾರ್ಜುನ ಖರ್ಗೆಗೆ "ನನಗಿಂತ ಮೊದಲು ಸಿಎಂ ಆಗಬೇಕಿದ್ದೋರು ನೀವು. ನನಗಾಗಿ ಆ ಸ್ಥಾನ ತ್ಯಾಗ ಮಾಡಿದ್ರಿ. ಈಗ ಯುಪಿಎ 3 ಸರ್ಕಾರ ರಚನೆಯಾಗೋದೂ ಕಷ್ಟ. ನೀವು ಸುಮ್ಮನೆ ಕುಳಿತುಕೊಳ್ಳೊ ಬದ್ಲು ಲೋಕಸಭಾ ಚುನಾವಣೆಯ ನಂತರ ಸಿಎಂ ಆಗಬೇಕು ಅಂತ ನನ್ನಾಸೆ. ನಮ್ಮ ಹುಡುಗರಿಗೂ ಇದನ್ನೇ ಹೇಳಿದ್ದೀನಿ. ನೀವು ಸ್ವಲ್ಪ ಮನಸ್ಸು ಮಾಡಿದರೆ ಸಾಧ್ಯವಾಗಬಹುದು" ಎಂದಿದ್ದಾರೆ ಕೃಷ್ಣ. ಸ್ವಭಾವತಃ ಡ್ಯಾಶಿಂಗ್ ನೇಚರ್ ಇಲ್ಲದಿರುವ ಖರ್ಗೆಯವರಿಗೂ ಒಂದು ಹಂತದಲ್ಲಿ ಇದು ಸರಿಯೆನಿಸಿರಬೇಕು. ಹೀಗಾಗಿ ಅವರು ಇದಕ್ಕೆ ಗ್ರೀನ್ ಸಿಗ್ನಲ್ ಕೊಟ್ಟಿರಬಹುದು ಎಂಬುದಕ್ಕೆ ಮುಂದೆ ನಡೆದ ಘಟನೆಗಳು ಸಾಕ್ಷಿಯಾಗಿವೆ.

## ಲಂಚ್ ಪಾಲಿಟಿಕ್ಸ್

ಕಳೆದ ಬಾರಿಯ ಅಧಿವೇಶನ ನಡೆಯುತ್ತಿರುವಾಗಲೇ ಡಾ.ಸುಧಾಕರ್ ಕಾಂಗ್ರೆಸ್‌ನಿಂದ ನೂತನವಾಗಿ ಆಯ್ಕೆಯಾದ 28 ಶಾಸಕರಿಗೆ ಊಟದ ಆಹ್ವಾನ ನೀಡಿದ್ದರು. ಈ ಲಂಚ್ ಪಾಲಿಟಿಕ್ಸ್‌ನ ಉದ್ದೇಶವನ್ನು ಕೂಡಾ ಪರೋಕ್ಷವಾಗಿ ಎಲ್ಲರಿಗೂ ಮೊದಲೇ ತಿಳಿಸಿದ್ದರು. ಅವತ್ತು ನೆರೆದಿದ್ದವರಲ್ಲಿ ಎಲ್ಲರೂ ಮುಖ್ಯಮಂತ್ರಿ ತಮ್ಮನ್ನು ಕಡೆಗಣಿಸುತ್ತಿರುವ ಬಗ್ಗೆ ಕ್ರೋಧ ವ್ಯಕ್ತಪಡಿಸಿದರು ಎನ್ನಲಾಗಿದೆ. ಮಾತ್ರವಲ್ಲ ಇದೇ ವಿಷಯವಾಗಿ ಹೈಕಮಾಂಡ್‌ಗೆ ದೂರು ನೀಡಲು ಶಾಸಕರ ನಿಯೋಗಕ್ಕೆ ಸಮಯ ನೀಡುವಂತೆ ಹೈಕಮಾಂಡ್‌ಅನ್ನು ಕೋರಲು ನಿರ್ಣಯಿಸಲಾಗಿದೆ. ಅಂದಿನಿಂದಲೇ ಒಂದು ಸೂಕ್ತ ಸ್ಟ್ರಾಟಜಿ ರೂಪಿಸಿ, ಲೋಕಸಭಾ ಚುನಾವಣೆ ನಂತರ ಸಿದ್ದರಾಮಯ್ಯನವರ ಬದಲಿಗೆ ಖರ್ಗೆಯವರು ಮುಖ್ಯಮಂತ್ರಿಯಾಗುವಂತಹ ಪರಿಸ್ಥಿತಿ ನಿರ್ಮಿಸಬೇಕು ಎಂದು ಭಾಗವಹಿಸಿದ್ದವರೆಲ್ಲರ ಒಮ್ಮತದ ಅಭಿಪ್ರಾಯವಾಗಿದೆ.

## ಗುರ್ರೆಂದರು ಸಿದ್ದು!


ಯಾವುದಕ್ಕೂ ತಲೆಕೆಡಿಸಿಕೊಳ್ಳದ ಸ್ವಭಾವ ಸಿದ್ದು ಅವರದ್ದು. ಆದರೆ ಯಾವಾಗ ನೂತನವಾಗಿ ಆಯ್ಕೆಯಾದ 28 ಜನರಲ್ಲಿ ಸುಧಾಕರರ 'ಲಂಚ್' ಕಾರ್ಯಕ್ರಮದಲ್ಲಿ 26 ಜನ ಭಾಗವಹಿಸಿದ್ದರು ಮತ್ತು ಅವರಲ್ಲಿ ಬಹುತೇಕರು ಹೈದ್ರಾಬಾದ್ ಕರ್ನಾಟಕದಿಂದ ಆಯ್ಕೆಯಾದ ಖರ್ಗೆ ಬೆಂಬಲಿತ ಶಾಸಕರು ಎಂದು ಗೊತ್ತಾಯಿತೊ ಸಿದ್ದು ಎಚ್ಚೆತ್ತುಕೊಂಡರು. ಸಭೆಯಲ್ಲಿ ಖರ್ಗೆಯವರ ಪುತ್ರ ಪ್ರಿಯಾಂಕ ಖರ್ಗೆ ಮತ್ತು ಧರ್ಮ ಸಿಂಗ್‌ರ ಪುತ್ರ ಡಾ.ಅಜಯ್ ಸಿಂಗ್ ಕೂಡ ಇದ್ದರು ಎಂಬುದೂ ಖಚಿತವಾಯಿತೊ ಅಪಾಯದ ಕರೆಗಂಟೆ ಅಗತ್ಯಕ್ಕಿಂತಲೂ ಸ್ಪಷ್ಟವಾಗಿ ಸಿದ್ದರಾಮಯ್ಯನವರಿಗೆ ಕೇಳಿಸಿದೆ. ಅಂತೆಯೇ ಅವರೂ ಡಾ.ಸುಧಾಕರ್ ವಿರುದ್ಧ ಗುಡುಗಿದರು. ಎಚ್ಚರಿಕೆಯ ಮಾತನ್ನಾಡಿದರು.

ಆದರೆ ಡಾ.ಸುಧಾಕರ್ ಚಾಣಾಕ್ಷ. ಭೋಜನಕೂಟವನ್ನು ಅವರು ತೀರಾ ಸಹಜ ಎಂಬಂತೆ ಸಮರ್ಥಿಸಿಕೊಂಡರು. ಭೋಜನಕೂಟದ ಉದ್ದೇಶ ಭಿನ್ನಮತೀಯ ಚಟುವಟಿಕೆಯಲ್ಲ ಎಂದೂ ಸಮಜಾಯಿಷಿ ನೀಡಿದರು.

ಒಂದಂತೂ ನಿಜ. ಡಾ.ಸುಧಾಕರ್ ಅವರ ಬೆಳವಣಿಗೆಯನ್ನು ಗಮನಿಸಿದವರಿಗೆ 'ಹಿಡಿದ ಕೆಲಸವನ್ನು ಬಿಡದ ಛಲದಂಥ ಮನುಷ್ಯ' ಎಂಬುದು ಗೊತ್ತಿದೆ. ಇಂತಹವರಿಗೆ ಕೃಷ್ಣ ಅಲ್ಲದೆ ಮಲ್ಲಿಕಾರ್ಜುನ ಖರ್ಗೆಯವರ ಮೌನ ಸಮ್ಮತಿ-ಸಹಕಾರ ಸಿಕ್ಕಿಬಿಟ್ಟರೆ ಬಿತ್ತಿದ ಭಿನ್ನಮತದ ಬೀಜ ಹೆಮ್ಮರವಾಗಿ ಬೆಳೆಯುಗಳನ್ನು ಬಿಟ್ಟರೂ ಅಚ್ಚರಿಯೇನಿಲ್ಲ.

● ಬಿ.ನಾರಾಯಣ್

# ದನಿಯೇ ಇಲ್ಲದವರು



ಭೀಮನೇನಿ ಸೋಮಪ್ಪನಿಗೆ ಭೀಮನೇನಿ ಕೊಂಡಯ್ಯ ಸೇರಿದಂತೆ ಒಟ್ಟು ಎಂಟು ಜನ ಮಕ್ಕಳು. ಬಳ್ಳಾರಿಯ ಜಿಲ್ಲೆಯ ಶ್ರೀರಾಮ ರಂಗಾಪುರ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈ ಕುಟುಂಬವೇ ಅತ್ಯಂತ ಬಲಿಷ್ಠವಾದದ್ದು. ಅಂದಿನಿಂದಲೂ ಭೂಮಾಲೀಕತ್ವದ ಗುಣಗಳನ್ನು ಬೆಳೆಸಿಕೊಂಡು ಬಂದಿರುವ ಈ ಕುಟುಂಬ ಇವತ್ತಿಗೂ ಜನರನ್ನು ಶೋಷಿಸುತ್ತಾ ದೌರ್ಜನ್ಯ ಎಸಗುತ್ತಾ ಬಂದಿದೆ.

ಸುತ್ತಮುತ್ತಲಿನ ಯಾವುದೇ ಹಳ್ಳಿಗಳಲ್ಲಿ ಈ ಕುಟುಂಬದ ವಿರುದ್ಧ ಧ್ವನಿ ಎತ್ತುವುದಾಗಲಿ, ಹಕ್ಕುಗಳನ್ನು ಕೇಳುವುದಾಗಲಿ ನಡೆದೇ ಇಲ್ಲ. ಯಾಕೆಂದರೆ ತಮ್ಮ ಹಕ್ಕುಗಳನ್ನು ಕೇಳಲು ಯಾರಾದರೂ ಧ್ವನಿ ಎತ್ತಿದರೆ ಅಂಥವರನ್ನು ಈ ಭೂಮಾಲೀಕ ಕುಟುಂಬದವರು ದಮನ ಮಾಡುತ್ತಾ ಬಂದಿದ್ದಾರೆ.

ಇಂತಹ ಬಲಿಷ್ಠ ಭೂಮಾಲೀಕರ ವಿರುದ್ಧ ದಲಿತರಿಗೆ ಧ್ವನಿ ಎತ್ತಿ ತಮ್ಮ ಭೂಮಿಯನ್ನು ವಾಪಸ್ ಪಡೆಯುವುದು ಕಷ್ಟ ಸಾಧ್ಯ ಎಂಬಂತಾಗಿದೆ. ಈಗಲಾದರೂ ದಲಿತರ ನೆರವಿಗೆ ಸರ್ಕಾರ ಮುಂದಾಗುತ್ತದೆಯೇ?

# ಮೂರು ತಲೆಮಾರುಗಳಿಂದಲೂ ಜೀತ!



ಭೂಮಾಲೀಕರ ದಬ್ಬಾಳಿಕೆಯಿಂದಾಗಿ ಭೂಮಿ ವಂಚಿತರಾಗಿರುವ ಇಲ್ಲಿನ ದಲಿತ ಕುಟುಂಬಗಳು ಭೂಮಾಲೀಕ ಭೀಮನೇನಿ ಕೊಂಡಯ್ಯ ಅವರ ಕುಟುಂಬಗಳಿಗೆ ಬರೋಬ್ಬರಿ ಮೂರು ತಲೆಮಾರುಗಳಿಂದ ಜೀತವನ್ನು ಮಾಡುತ್ತಾ ಬಂದಿದ್ದಾರೆ.

ಈ ಭಾಗದಲ್ಲಿ ದಲಿತ ಕುಟುಂಬಗಳಿರಲಿ, ಇತರೆ ಹಿಂದುಳಿದ ಸಮುದಾಯಗಳೂ ಭೂಮಾಲೀಕರನ್ನು ಪ್ರಶ್ನೆ ಮಾಡದಂತ ಪರಿಸ್ಥಿತಿ ಕಳೆದ ನಲವತ್ತು ವರ್ಷಗಳಿಂದಲೂ ಸಾಗಿಬಂದಿದೆ. ಆದರೀಗ ದಲಿತ ಕುಟುಂಬಗಳಲ್ಲಿ ಹೊಸ ತಲೆಮಾರು ಬೆಳೆದಂತೆ ಈ ಜೀತ, ದಬ್ಬಾಳಿಕೆ, ಶೋಷಣೆ ಸೇರಿದಂತೆ ಎಲ್ಲ ತರಹದ ದೌರ್ಜನ್ಯಗಳನ್ನು ಪ್ರಶ್ನಿಸುವ ದನಿಗಳು ಹುಟ್ಟಿಕೊಂಡಿವೆ.

ರಾಮಚಂದ್ರ ಅವರಿಗೆ ಈಗ 45 ವರ್ಷ ವಯಸ್ಸಾಗಿದೆ. ಇವರು ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಆದರೆ ಇವರು ಚಿಕ್ಕವರಾಗಿದ್ದಾಗಲೇ ಇವರ ಪೋಷಕರು ಇವರನ್ನು ಭುಮಾಲೀಕರ ಮನೆಯಲ್ಲಿ ಜೀತಕ್ಕೆ ಬಿಟ್ಟಿದ್ದರು. ತಮ್ಮ ತಾತ ಮತ್ತು ತಂದೆಯಂತೆ ಇವರೂ ಭೂಮಾಲೀಕ ಮನೆಯಲ್ಲಿ ಅನಿವಾರ್ಯವಾಗಿ ಜೀತದ ಪರಂಪರೆಯ ಭಾಗವಾದರು.

ಆದರೆ ವಯಸ್ಸು, ಮತ್ತು ಸಾಮಾಜಿಕ ಜ್ಞಾನ ಬೆಳೆದಂತೆ ಕಲಿತ ನಾಲ್ಕು ಅಕ್ಷರಗಳೇ ತಮಗಾದ ಅನ್ಯಾಯದ ಅರಿವನ್ನು ಇವರಲ್ಲಿ ಮೂಡಿಸಿತು. ಸ್ವಾಭಿಮಾನ ಬೆಳೆದಂತೆ ರಾಮಚಂದ್ರ ಅವರು ಜೀತ ಬಿಟ್ಟು ಜೀವನ ಸಾಗಿಸಲು ಸ್ವಯಂ ಉದ್ಯೋಗವನ್ನು ಕಂಡುಕೊಂಡರು.

ಈಗ ಅವರು ದಲಿತರಿಗಾಗಿರುವ ಅನ್ಯಾಯವನ್ನು ಖಂಡಿಸಿ ಮೊದಲ ಬಾರಿಗೆ ಧ್ವನಿ ಎತ್ತಿದ್ದಾರೆ. ಇತರೆ ದಮನಿತ ದಲಿತರನ್ನು ತಮ್ಮೊಂದಿಗೆ ಸೇರಿಸಿಕೊಂಡು ಹೋರಾಟ ಪ್ರಾರಂಭಿಸಿದ್ದಾರೆ. ಅನೇಕ ದಲಿತ ಕುಟುಂಬಗಳನ್ನು ವಂಚಿಸಿ ಅವರ ಭೂಮಿಯನ್ನು ಭೂಮಾಲೀಕರು ಕಬ್ಜಾ ಮಾಡಿಕೊಂಡಿದ್ದಾರೆಂಬ ಮಾಹಿತಿಯನ್ನು ಪತ್ತೆ ಹಚ್ಚಿ ಬಯಲಿಗೆ ತಂದಿದ್ದಲ್ಲದೆ ಎಲ್ಲಾ ದಲಿತ ಕುಟುಂಬಗಳಿಗೆ ಧೈರ್ಯ, ಸ್ವಾಭಿಮಾನವನ್ನು ತುಂಬುವ ವ್ಯಕ್ತಿಯಾಗಿದ್ದಾರೆ ರಾಮಚಂದ್ರ.

# ಬಳ್ಳಾರಿ: ದಲಿತರ ಭೂಮಿಯನ್ನು ಕಬ್ಜಾ ಮಾಡಿದ ಭೂಮಾಲೀಕರು

ದೇಶಕ್ಕೆ ಸ್ವಾತಂತ್ರ್ಯ ಬಂದು 67 ವರ್ಷಗಳು ಕಳೆದಿದೆ, ಭೂಮಿತಿ ಕಾಯ್ದೆ ಜಾರಿಗೆ ಬಂದು ಮೂರು ದಶಕಗಳು ಕಳೆದುಹೋಗಿದೆ. ಆದರೆ ಈ ಸ್ವಾತಂತ್ರ್ಯ - ಕಾನೂನು ಎಲ್ಲವೂ ಬಳ್ಳಾರಿ ಜಿಲ್ಲೆಯ ಗಣಿ ಧೂಳಿನಲ್ಲಿ ಹೂತುಹೋಗಿವೆ. ಇಲ್ಲಿಯವರೆಗೆ ಆಳ್ವಿಕೆ ನಡೆಸಿದ ಬಳ್ಳಾರಿ ರಿಪಬ್ಲಿಕ್‌ನ ರೆಡ್ಡಿ ಸಹೋದರರು ದೇಶದ ಸಂಪತ್ತನ್ನೇ ಲೂಟಿ ಹೊಡೆದು ಈ ದೇಶದ ಕಾನೂನಿಗೆ, ಸ್ವಾತಂತ್ರ್ಯಕ್ಕೆ ಸವಾಲು ಹಾಕಿದ್ದರು. ಇನ್ನೊಂದೆಡೆ ಇಷ್ಟೇ ಸರಿಸಮಾನವಾಗಿ ಸ್ಥಳೀಯ ಭೂಮಾಲೀಕರು ತಮ್ಮ ಹಿಂದಿನ ಭೂಮಾಲೀಕತ್ವದ ದರ್ಪ, ದೌರ್ಜನ್ಯವನ್ನು ಇಂದಿಗೂ ಮುಂದುವರೆಸುತ್ತಿದ್ದಾರೆ. ಗಣಿ ಧಣಿಗಳ ಹಾಗೂ ಭೂಮಾಲೀಕರ ದೌರ್ಜನ್ಯದ ಮಧ್ಯೆ ಈ ಜಿಲ್ಲೆಯಲ್ಲಿ ದಲಿತರು, ಹಿಂದುಳಿದವರ ಬದುಕುಗಳು ಮೂರಾಬಟ್ಟೆಯಾಗಿದೆ.


ಈ ದೇಶದ ಸಂಪತ್ತನ್ನೇ ಲೂಟಿಹೊಡೆದ ಬಳ್ಳಾರಿಯ ಸಹೋದರರನ್ನು ಜೈಲಿಗಟ್ಟಿದ ಜಿಲ್ಲಾಡಳಿತ ಹಾಗೂ ಸರ್ಕಾರ ಇದೇ ಜಿಲ್ಲೆಯಲ್ಲಿ ಭೂಮಾಲೀಕರ ದೌರ್ಜನ್ಯಕ್ಕೆ ಭೂಮಿ ಕಳೆದುಕೊಂಡ ರೈತರಿಗೆ ಮಾತ್ರ ನ್ಯಾಯ ದೊರಕಿಸಲು ಇದುವರೆಗೂ ಮುಂದಾಗದೇ ಇರುವುದು ಶೋಚನೀಯವಾಗಿದೆ.

ಇದಕ್ಕೊಂದು ತಾಜಾ ಉದಾಹರಣೆ ಎಂದರೆ ಬಳ್ಳಾರಿ ಜಿಲ್ಲೆಯ ಶ್ರೀರಾಮ ರಂಗಾಪುರ (ಎಸ್.ಆರ್.ಪುರ) ಗ್ರಾಮದಲ್ಲಿನ ಮಾದಿಗ ಸಮುದಾಯದ ಹತ್ತಾರು

▶▶| 13


# ನಕಲಿ ಸಹಿಮಾಡಿ ಭೂಮಾರಾಟ

ಭೂಮಾಲೀಕರ ಒತ್ತಡಕ್ಕೆ ಮಣಿದ ಉಪನೋಂದಣಾಧಿಕಾರಿಗಳು ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಭೀಮನೇನಿ ಕೊಂಡಯ್ಯ ಅವರ ಮಕ್ಕಳ ಮನೆಯಲ್ಲಿ ಇಂದಿಗೂ ದಿನಗೂಲಿಯಲ್ಲಿ ದುಡಿಯುತ್ತಿರುವ ಪೆದ್ದಣ್ಣ ಅವರ ಸರ್ವೇ ನಂ. 38/1 11 ಎಕರೆ 31 ಗುಂಟೆ ಭೂಮಿಯನ್ನು ಎರಡು ತಿಂಗಳ ಹಿಂದೆ ಕೊಂಡಯ್ಯನವರ ಸೊಸೆ ಭೀಮನೇನಿ ಜ್ಯೋತಿಯ ಹೆಸರಿಗೆ ಉಪನೋಂಧಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲಾಗಿದೆ.



ಇಂದಿಗೂ ಭೂಮಾಲೀಕರ ಮನೆಯಲ್ಲಿ ದಿನಗೂಲಿ ಮಾಡುತ್ತಿರುವ ಪೆದ್ದಣ್ಣ.

ವಿಚಿತ್ರವೆಂದರೆ ಈ ಭೂಮಿ ಪೆದ್ದಣ್ಣ ಅವರ ತಂದೆ ಹರಿಜನ ಯರ್ರ ರಾಮುಡು ಹೆಸರಲ್ಲಿದೆ. ವಾಸ್ತವವಾಗಿ ಯರ್ರ ರಾಮುಡ 10-03-1990ರಲ್ಲಿ ಮರಣ ಹೊಂದಿದ್ದಾರೆ. ಆದರೆ ಉಪನೋಂದಾಣಿಕಾಧಿಕಾರಿ ಕಚೇರಿಯಲ್ಲಿ ಯರ್ರ ರಾಮುಡು 31.10.2013ರಂದು ತಮ್ಮ ಭೂಮಿಯನ್ನು ಮಾರಾಟ ಮಾಡಿದ್ದಾರೆ ಎಂದು ನಮೂದಿಸಲಾಗಿದೆ.



...ವಂಚಿತ ದಲಿತ ಕುಟುಂಬಗಳು ಜನವರಿ 23, 2014ರಂದು ಜಿಲ್ಲಾಧಿಕಾರಿಗಳಿಗೆ ಭೂಮಿಯನ್ನು ...ಲೀಕರಿಂದ ಹಿಂತಿರುಗಿಸುವಂತೆ ಕರ್ನಾಟಕ ಜನಶಕ್ತಿ ಹಾಗೂ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆಯ ... ಮನವಿ ಪತ್ರವನ್ನು ಸಲ್ಲಿಸಿದರು.

ಹಾಗಾದರೆ 32 ವರ್ಷಗಳ ಹಿಂದೆ ಸತ್ತು ಹೋದ ಯರ್ರ ರಾಮುಡು ಅವರು ಅದು ಹೇಗೆ ಮತ್ತೆ ಬದುಕಿ ಬಂದು ತಮ್ಮ ಭೂಮಿಯನ್ನು ಮಾರಿದರು ಎಂದು ಉಪನೋಂದಣಾಧಿಕಾರಿಗಳು ಹೇಳಬೇಕಿದೆ.

ಕಂಪ್ಲಿಯಲ್ಲಿರುವ ಉಪನೋಂದಣಾಧಿಕಾರಿ ಕಚೇರಿ



ಸರ್ವೇ ನಂ 120 ಸಿ 1ಎ/2 8 ಎಕರೆ 6 ಗುಂಟೆ ಜಮೀನು ಹರಿಜನ ರೋಶಣ್ಣನ ಹೆಂಡತಿಯಾದ ಲಕ್ಷ್ಮಮ್ಮನ ಹೆಸರಲ್ಲಿ ಇದೆ. ಈ ಭೂಮಿಯನ್ನು ಸಹ ನಕಲಿ ಸಹಿ ಸೃಷ್ಟಿಸಿ ಬಿ. ಜ್ಯೋತಿ ಸೋಮಪ್ಪ ಎಂಬುವವರು ತಮ್ಮ ಹೆಸರಿಗೆ ನೋಂದಾಯಿಸಿಕೊಂಡಿದ್ದಾರೆ.

ಉಪನೋಂದಣಾಧಿಕಾರಿಯ ಬೇಜವಾಬ್ದಾರಿತನದಿಂದಾಗಿ ಶ್ರೀರಾಮ ರಂಗಾಪುರದ ದಲಿತ ಕುಟುಂಬಗಳು ಭೂಮಿಯಿಂದ ವಂಚನೆಗೊಳಗಾಗಿದ್ದಾರೆ. ಸರ್ಕಾರ ಹಾಗೂ ಜಿಲ್ಲಾಡಳಿತ ಇಂತಹ ಭ್ರಷ್ಟ ಉಪನೋಂದಣಾಧಿಕಾರಿಗೆ ಹಾಗೂ ಈ ಭೂವಂಚನೆಯಲ್ಲಿ ತೊಡಗಿಸಿಕೊಂಡ ಅನೇಕ ಅಧಿಕಾರಿಗಳಿಗೆ ಯಾವ ಶಾಸ್ತಿ ಕಲಿಸಲು ಮುಂದಾಗುತ್ತದೆ ಎನ್ನುವುದು ಪ್ರಶ್ನೆಯಾಗಿದೆ.

ಅದೇ ರೀತಿ ಸರ್ವೇ ನಂ 120 ಸಿ2 ಎ1ಬ/3 4 ಎಕರೆ ಜಮೀನು ದೊಡ್ಡ ಹನುಮಣ್ಣನ ಹೆಂಡತಿಯಾದ ಮಲ್ಲಮ್ಮನ ಹೆಸರಲ್ಲಿ ಇದೆ. ಈ ಜಮೀನಿಗೂ ನಕಲಿ ಸಹಿ ಸೃಷ್ಟಿಸಿ ಭೀಮನೇನಿ ನೀಲಕಂಠಪ್ಪನ ಮಗಳಾದ ಬಿ.ವಿಮಲಾ ಎಂಬುವವರು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ.



# ರಾಜಕೀಯ ಮತ್ತು ಜಾತಿ ವೈಷಮ್ಯ

ಈ ಭಾಗದಲ್ಲಿ ಭೀಮನೇನಿ ಕುಟುಂಬವೆಂದರೆ ವಂಶಪರಂಪರೆಯ ಆಡಳಿತವಾಗಿದೆ. ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸುತ್ತಮುತ್ತ ಹಳ್ಳಿಗಳಲ್ಲೇ ಸಬಲರಾಗಿರುವ ಈ ಕುಟುಂಬ ಪ್ರಭಾವಿ ಕುಟುಂಬವೇ ಆಗಿದೆ.

1984ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಜನತಾ ಪರಿವಾರದಿಂದ ಹೊಸಪೇಟೆ (ವಿಜಯನಗರ) ವಿಧಾನಸಭಾ ಕ್ಷೇತ್ರದಿಂದ ಭೀಮನೇನಿ ಕೊಂಡಯ್ಯ ಶಾಸಕನಾಗಿ ಆಯ್ಕೆಯಾಗಿದ್ದರು. ಇದೇ ಹೊತ್ತಿನಲ್ಲಿ ಜಾತಿಯ ಗುಂಪುಗಳು ಮತ್ತು ರಾಜಕೀಯ ಗುಂಪುಗಳು ಕ್ರಿಯಾಶೀಲವಾಗಿ ಬಲಿಷ್ಠಗೊಂಡಿದ್ದವು.

ರಾಜಕೀಯ ಜಿದ್ದಾಜಿದ್ದಿಯಲ್ಲಿ ಸೂರ್ಯನಾರಾಯಣ ರೆಡ್ಡಿ ಎಂಬುವವರನ್ನು 2003ರ ಜನವರಿ 26, ಗಣರಾಜ್ಯೋತ್ಸವದ ದಿನದಂದು ಹೊಸಪೇಟೆಯ ತಾಲೂಕ್ ಕ್ರೀಡಾಂಗಣದಲ್ಲಿ ನಸುಕಿನ ವೇಳೆ ಗುಂಡಿಟ್ಟು ಕೊಲೆಗೈಯಲಾಯಿತು.

ಸೂರ್ಯನಾರಾಯಣ ರೆಡ್ಡಿಯನ್ನು ಕೊಂದದ್ದಕ್ಕೆ ಕಂಪ್ಲಿ ಬಳಿಯ ತಿರುಮಲಾಪುರದ ಚಂದ್ರೇಗೌಡ ಎಂಬುವವನನ್ನು ಬಂಧಿಸಲಾಗಿತ್ತು, ಆದರೆ ವಾಸ್ತವವಾಗಿ ಆ ಹತ್ಯೆಯ ಹಿಂದೆ ಯಾರ್‍ಯಾರು ಇದ್ದರು ಎಂಬುದು ಈಗಲೂ ನಿಗೂಢವಾಗಿದೆ. ರೆಡ್ಡಿ ಕೊಲೆಯ ಹಿಂದೆ ಭೀಮನೇನಿ ಕೊಂಡಯ್ಯನ ಹಸ್ತ ಮತ್ತು ಸಹಮತ ಇತ್ತು ಎಂದು ಕ್ಷೇತ್ರದ ಕೆಲವು ಜನ ಇಂದಿಗೂ ಮಾತನಾಡಿಕೊಳ್ಳುತ್ತಾರೆ.

ಸೂರ್ಯನಾರಾಯಣ ರೆಡ್ಡಿ ಮತ್ತು ಭೀಮನೇನಿ ಕೊಂಡಯ್ಯ- ಇಬ್ಬರೂ ಆಗ ಒಂದೇ ಪಕ್ಷದಲ್ಲಿದ್ದರೂ ರಾಜಕೀಯ ಹಾಗೂ ಸ್ವಜಾತಿಯೊಳಗಿನ ವೈಮನಸ್ಸಿನಿಂದ ಸದಾ ಪರಸ್ಪರ ಕತ್ತಿಮಸೆಯುತ್ತಿದ್ದರು. ಇವರಿಬ್ಬರ ನಡುವಿನ ವೈಷಮ್ಯ ಮುಂದುವರೆದು 2005ರಲ್ಲಿ ಶ್ರೀರಾಮ ರಂಗಾಪುರ ಗ್ರಾಮದ ಜಾತ್ರೆಯಲ್ಲಿ ಸೂರ್ಯನಾರಾಯಣ ರೆಡ್ಡಿಯ ಚಿಕ್ಕಪ್ಪನ ಮಗನ ಹತ್ಯೆಯೂ ನಡೆಯಿತು. ಈ ಹತ್ಯೆಯ ಹಿಂದೆಯೂ ಭೀಮನೇನಿ ಕೊಂಡಯ್ಯನ ಕೈವಾಡ ಇತ್ತೆಂದು ತರ್ಕಿಸಲಾಗಿತ್ತು.


ಈ ಹತ್ಯೆಯ ನೆನಪು ಜನರ ಮನಸ್ಸಿನಿಂದ ಮಾಸುವ ಮುನ್ನವೇ ಸೂರ್ಯನಾರಾಯಣ ರೆಡ್ಡಿಯ ಬೆಂಬಲಿಗರು ಅದೇ 2005ರಲ್ಲಿ ತೋರಣಗಲ್ ಬಳಿ ಭೀಮನೇನಿ ಕೊಂಡಯ್ಯನನ್ನೇ ಕೊಂದು ಹಾಕಿತ್ತು.

ಆಗ ಕೊಂಡಯ್ಯ ಜಾತ್ಯತೀತ ಜನತಾದಳ ಪಕ್ಷದ ಬಳ್ಳಾರಿ ಜಿಲ್ಲಾಧ್ಯಕ್ಷನಾಗಿದ್ದ. ಭೀಮನೇನಿ ಕೊಂಡಯ್ಯನನ್ನು ಕೊಲೆ ಮಾಡಿದ ಪಾತಕಿಗಳು ಸದ್ಯಕ್ಕೆ ಜೈಲಿನಲ್ಲಿದ್ದಾರೆ.

# ಾಗಲ'ಕೋಟೆ'ಯ ಬೀಗಕ್ಕೆ 'ಕೈ' ಕಬ್ಬಾಟ: ಬಿಜಾಪುರಕ್ಕೂ 'ಬಿಸಿ'ಯೂಟ!




ಸೌದಾಗರ್






ಎಸ್.ಆರ್. ಪಾಟೀಲ್



ಹೆಚ್. ವೈ. ಮೇಟಿ



ಆರ್.ಬಿ. ತಿಮ್ಮಾಪುರ್

ಾಗಲಕೋಟೆಯಲ್ಲಿ ಲೋಕಸಭೆ ಚುನಾವಣೆ ು ಬಿರುಸು ಪಡೆದುಕೊಳ್ಳುತ್ತಿದ್ದಂತೆಯೇ ಆದರ ಪಕ್ಕದ ಬಿಜಾಪುರವನ್ನೂ ಆವರಿಸಿಕೊಳ್ಳುತ್ತಿದೆ. ಕ್ಷೇತ್ರಗಳ ರಾಜಕೀಯ ಲೆಕ್ಕಾಚಾರ ಒಂದನ್ನೊಂದು ಬೆಸಿರುವುದರಿಂದ ಟಿಕೆಟ್ ಹಂಚಿಕೆಯ ವಿಷಯು ದಿನಕ್ಕೆ ಕಗ್ಗಂಟಾಗುತ್ತಲೇ ಬರುತ್ತಿದೆ. ಈ ವಲ್ಲಿ ಬಿಜೆಪಿಗೆ ಅಂಥದ್ದೇನು ತಲೆನೋವಿಲ್ಲ, ಮಿಂದ ಬಾಗಲಕೋಟೆಯ ಹಾಲಿ ಲೋಕಸಭಾ .ಸಿ. ಗದ್ದಿಗೌಡರ್‌ಗೆ ಟಿಕೆಟ್ ದಕ್ಕುವುದು ಬಹುತೇಕ ಆದರೆ ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಆಯ್ಕೆಯೇ ದೊಡ್ಡ ಗಿದೆ. ಬಾಗಲಕೋಟೆ ಲೋಕಸಭಾ ವ್ಯಾಪ್ತಿಗೆ ಸೇರುವ ವಿಧಾನಸಭಾ ಕ್ಷೇತ್ರಗಳಲ್ಲಿ (ಗದಗ ಜಿಲ್ಲೆಯ ನರ ನ್ನೂ ಸೇರಿ) ಕಾಂಗ್ರೆಸ್ ಶಾಸಕರೇ ಅಧಿಕಾರದಲ್ಲಿದ್ದರೂ ಆಯ್ಕೆಯಲ್ಲಿ ಹೈಕಮಾಂಡ್ ಸ್ವಲ್ಪ ಎಡವಿದರೂ ಸ್ಥಿತಿ ಚಿಂತಾಜನಕವಾಗುವ ಸಾಧ್ಯತೆಯನ್ನು ತಳ್ಳಿ ಂತಿಲ್ಲ.

ಗಲಕೋಟೆ ಕೈ ಟಿಕೆಟ್ ಆಕಾಂಕ್ಷಿಗಳಲ್ಲಿ ಅಜಯ್ ್ ಸರನಾಯಕ್, ಡಾ. ದೇವರಾಜ್ ಪಾಟೀಲ್, ದಳವಾಯಿ ಮೊದಲಾದವರ ಹೆಸರು ಪ್ರಮುಖ ಳಿಬರುತ್ತಿದ್ದರೆ ಸಣ್ಣ ಮಟ್ಟದಲ್ಲಿ ಸಚಿವ ಎಸ್.ಆರ್. ್ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ರ್ ಹೆಸರುಗಳೂ ತೇಲಿಬರುತ್ತಿವೆ. ಒಂದೊಂದು ದದಿಂದ ಒಬ್ಬೊಬ್ಬ ಅಭ್ಯರ್ಥಿ ಗೆಲ್ಲುವ ಕುದುರೆಯಂತೆ ರುತ್ತಿದ್ದು, ಜಾತಿ ಸಮೀಕರಣವೇ ಅಂತಿಮ ದ ಮಾನದಂಡ ಎನ್ನುವುದಂತೂ ಸತ್ಯ. ಒಂದು ಕಾಂಗ್ರೆಸ್‌ನ ಭದ್ರಕೋಟೆಯಂತಿದ್ದ ಬಾಗಲಕೋಟೆ ಪ್ರಥಮ ಬಾರಿಗೆ ಭೇದಿಸಿದ್ದು ಕುರುಬ ಜನಾಂಗದ ಮೇಟಿ. ಆಗಿನ ಅಂಕಿಅಂಶಗಳ ಪ್ರಕಾರ ಮೂರು ದ್ದ ಕುರುಬರೆ ನಿರ್ಣಾಯಕ ಮತದಾರರೆಂದು ಜನತಾದಳ ಮೇಟಿಯನ್ನು ಅಖಾಡಕ್ಕೆ ಬಿಟ್ಟು ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಯಿಂದ ಕಸಿದುಕೊಂಡಿತ್ತು. ಈಗ ಸದ್ಯ ಬಿಜೆಪಿ ವಶದಲ್ಲಿರುವ ಬಾಗಲಕೋಟೆಯನ್ನು ಮತ್ತೆ ತನ್ನ ಕೈವಶ ಮಾಡಿಕೊಳ್ಳಲು ಕಾಂಗ್ರೆಸ್ ಅದೇ ಜಾತಿ ಲೆಕ್ಕಾಚಾರದ ಮೊರೆ ಹೋಗಬೇಕಾಗಿದೆ.

ರೆಡ್ಡಿ ಸಮುದಾಯದ ಅಜಯ್ ಕುಮಾರ್ ಸರ್‌ನಾಯಕ್‌ರೇ ಲೋಕಸಭಾ ಕೈ ಅಭ್ಯರ್ಥಿ ಎಂದು ಆರಂಭದಲ್ಲಿ ಕೇಳಿಬಂದಿತ್ತಾದರೂ ಅದಕ್ಕೆ ಅಡ್ಡಿಯಾದದ್ದು ಆರ್.ಬಿ.ತಿಮ್ಮಾಪುರ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಧೋಳ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಆರ್.ಬಿ.ತಿಮ್ಮಾಪೂರ ಪರಾಭವಕ್ಕೆ ರೆಡ್ಡಿ ಸಮುದಾಯದವರೇ ಕಾರಣ ಎಂಬ ಆರೋಪವಿದೆ. ಇದು ತಿಮ್ಮಾಪೂರ ಮತ್ತವರ ಬೆಂಬಲಿಗರನ್ನು ಅಪಾರವಾಗಿ ಕೆರಳಿಸಿತ್ತು. ಅದೇ ಜನಾಂಗದ ಅಜಯ್‌ಕುಮಾರ್ ಸರ್‌ನಾಯಕ್ ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿಯಾಗುತ್ತಿದ್ದಾರೆ ಎಂಬುದು ತಿಳಿಯುತ್ತಿದ್ದಂತೆ ಸಿಡಿದೆದ್ದ ತಿಮ್ಮಾಪೂರ 'ಅಹಿಂದ ಸಂಘಟನೆ' ಹೆಸರಲ್ಲಿ ಹಿಂದುಳಿದ, ಅಲ್ಪಸಂಖ್ಯಾತರನ್ನು ಕಲೆಹಾಕಿ ಬಂಡಾಯವೇಳುವ ಸೂಚನೆ ನೀಡಿದ್ದರು. ಇದು ಜಿಲ್ಲಾ ಕಾಂಗ್ರೆಸ್‌ನಲ್ಲಿ ತಲ್ಲಣವನ್ನೇ ಸೃಷ್ಟಿಸಿತ್ತು. ನಂತರ ರೆಡ್ಡಿ ನಾಯಕರು ಹೈಕಮಾಂಡ್‌ನಿಂದ ಒತ್ತಡ ತಂದು ತಿಮ್ಮಾಪೂರನನ್ನು ತಣ್ಣಗಾಗಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಈಗಲೂ ಸಮಸ್ಯೆ ಬೂದಿ ಮುಚ್ಚಿದ ಕೆಂಡದಂತೆ ಯಾವಾಗ ಬೇಕಾದರೂ ಸ್ಫೋಟಿಸಲು ಸಜ್ಜಾಗಿ ಕೂತಿದೆ.

ತಿಮ್ಮಾಪುರ ಹುಟ್ಟುಹಾಕಿದ್ದ ಅಹಿಂದಾ ಸೇಡು ಎಷ್ಟರಮಟ್ಟಿಗಿತ್ತೆಂದರೆ ರೆಡ್ಡಿ ಜನಾಂಗಕ್ಕೆ ಸೇರಿದ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರಾಗಿದ್ದ ಎಸ್.ಆರ್.ಪಾಟೀಲ್‌ಗೆ ಮಂತ್ರಿಗಿರಿ ನೀಡಬಾರದೆಂದು ಅಹಿಂದ ಒಕ್ಕೂಟ ಒತ್ತಡ ತಂದಿತ್ತು. ಆದರೂ ಹೈಕಮಾಂಡ್ ಮೇಲೆ ಪ್ರಭಾವ ಬೀರಿ ಜಿಲ್ಲಾ ಉಸ್ತುವಾರಿಕೆಯನ್ನು ದಕ್ಕಿಸಿಕೊಳ್ಳುವಲ್ಲಿ ಪಾಟೀಲ್ ಯಶಸ್ವಿಯಾಗಿದ್ದರು. ಇದು ಅಹಿಂದ ಒಕ್ಕೂಟಕ್ಕೆ ಮತ್ತಷ್ಟು ಇರುಸು-ಮುರುಸು ಉಂಟುಮಾಡಿತ್ತು. ಹಾಗಾಗಿ ಅಹಿಂದ ಅಲೆ ಕೈ ಪಾಳಯದಲ್ಲಿ ಯಾವಾಗ ಬೇಕಾದರೂ ಬಂಡಾಯವೇಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಇನ್ನು ಸರ್‌ನಾಯಕ್‌ರ ವರ್ಚಸ್ಸಿನ ವಿಷಯಕ್ಕೆ ಬಂದರೆ ಕೈ ಬಾಯಿ, ಕಚ್ಚೆ ಶುದ್ಧವಾಗಿಟ್ಟುಕೊಂಡ ದುರಭ್ಯಾಸಗಳಿಲ್ಲದ ಆಸಾಮಿ ಎನ್ನಬಹುದಾದರೂ 'ಧಣಿ' ಅನ್ನಿಸಿಕೊಳ್ಳುವ ಅವರ ಅಹಂ ಅವರನ್ನು ಸಜ್ಜನ ರಾಜಕಾರಣಿ ಎನ್ನಲು ಅಡ್ಡಿಯಾಗುತ್ತದೆ. ಈ ಹಿಂದೆ ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿ, ಒಮ್ಮೆ ಸಂಯುಕ್ತ ಜನತಾದಳದಿಂದ ಸಂಸದರೂ ಆದವರು. ಸಿದ್ದರಾಮಯ್ಯನವರಿಗಿಂತ ಮುಂಚೆಯೇ ಜನತಾ ಪರಿವಾರ ಬಿಟ್ಟು ಕಾಂಗ್ರೆಸ್ ಸೇರಿದ್ದರು. ಜನತಾ ಅವಧಿಯಲ್ಲಿ ತನ್ನ ಜೊತೆಗೆ ಇದ್ದವರೇ ಎಂಬ ಒಲವು ಸಿದ್ದರಾಮಯ್ಯನವರಿಗೆ ಇದ್ದರೂ ಅಜಯ್‌ಕುಮಾರ್ ಸರ್‌ನಾಯಕ್‌ಗೆ ಟಿಕೆಟ್ ಗಿಟ್ಟಿಸಲು ಅಹಿಂದ ಬಂಡಾಯವೇ ದೊಡ್ಡ ಸಮಸ್ಯೆ. ಹೈಕಮಾಂಡನ್ನು ಒಲಿಸಿಕೊಳ್ಳುವ ತಾಲೀಮು ಜೋರಾಗೆ ನಡೆದಿದೆಯಾದರೂ ಕಡೇ ಕ್ಷಣದಲ್ಲಿ ಇನ್ನೆಂಥ ಲೆಕ್ಕಾಚಾರಗಳು ತಲೆ ಎತ್ತಿ ಸರ್‌ನಾಯಕ್ ಟಿಕೆಟ್ ಕನಸಿಗೆ ಮುಳ್ಳಾಗಲಿವೆಯೋ ಕಾದು ನೋಡಬೇಕು.

ಸಚಿವ ಎಸ್.ಆರ್. ಪಾಟೀಲ್, ಬೀಳಗಿಯ ಶಾಸಕ ಜೆ.ಟಿ. ಪಾಟೀಲ್ ಹಾಗೂ ಬಾಗಲಕೋಟೆಯ ಶಾಸಕ ಹುಲ್ಲಪ್ಪ ಮೇಟಿ, ಸರ್‌ನಾಯಕ್‌ನನ್ನು ಬೆಂಬಲಿಸುತ್ತಿದ್ದಾರಾದರೂ ಅದು ನಾಮಕಾವಸ್ತೆಯ ಒಲ್ಲದ ಮನಸ್ಸಿನ ಬೆಂಬಲವಾಗಿರೋದು ಅಜಯ್‌ಕುಮಾರ್ ಸರನಾಯಕ್‌ಗಿರುವ ಮತ್ತೊಂದು ಕಂಟಕ.

ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಮೊದಮೊದಲು ಜೋರಾಗಿ ಕೇಳಿಬಂದ ಮತ್ತೊಂದು ಹೆಸರು ಸಿದ್ದರಾಮಯ್ಯನವರ ಕುಲಬಾಂಧವ ಡಾ. ದೇವರಾಜ್ ಪಾಟೀಲ್‌ರದ್ದು. ಅಂತರಜಾತಿ ಮದುವೆ ಆಗಿರುವ ಇವರ ಧರ್ಮಪತ್ನಿ ಕಾಂಗ್ರೆಸ್ ರಾಜ್ಯಾಧ್ಯಕ್ಷ ಜಿ.ಪರಮೇಶ್ವರರ ಹತ್ತಿರದ ಸಂಬಂಧಿ ಎನ್ನುವುದು ಸಹ ಇವರಿಗಿರುವ ಇನ್ನೊಂದು ಪ್ಲಸ್ ಪಾಯಿಂಟ್. ದೇವರಾಜ್‌ಗೆ ಜನಸಂಪರ್ಕವಿದೆ, ಹಣವಿದೆ, ಬೃಹದಾದ ಆಸ್ಪತ್ರೆಯಿಂದಾಗಿ ಸುತ್ತಮುತ್ತ ಹೆಸರಿದೆ. ಕಳೆದ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಾದಾಮಿ ಕ್ಷೇತ್ರದಿಂದ ಇವರಿಗೆ 'ಬಿ' ಫಾರ್ಮ್ ಸಿಕ್ಕಿತ್ತು. ಆದರೆ ಹಳೆ ಕಾಂಗ್ರೆಸಿಗರಾದ ಬಿ.ಬಿ. ಚಿಮ್ಮನಕಟ್ಟಿ ತನ್ನದೇ ಕ್ಷೇತ್ರದ ಕೆಲ ಹಳ್ಳಿಗಳು ಬೀಳಗಿ ಕ್ಷೇತ್ರಕ್ಕೆ ಸೇರಿದ್ದಲ್ಲದೆ ಜಿಲ್ಲೆಯಲ್ಲಿ ಕುರುಬರೆ ನಿರ್ಣಾಯಕರಾಗಿರುವುದರಿಂದ ತನಗೆ ಬಾದಾಮಿಯ ಟಿಕೆಟ್ ಕೊಡದಿದ್ದರೆ ಬೀಳಗಿ, ಹುನಗುಂದ, ಬಾದಾಮಿ- ಹೀಗೆ ಎರಡು ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಿಸಿಬಿಡುತ್ತೇನೆ ಎಂಬ ಬೆದರಿಕೆ ಹಾಕಿದ್ದ ಕೂಡಲೇ ಅಜಯ್‌ಕುಮಾರ್ ಸರ್‌ನಾಯಕ್, ಎಸ್.ಆರ್. ಪಾಟೀಲ್ ಮೊದಲಾದವರೆಲ್ಲಾ ದೆಹಲಿಗೆ ದೌಡಾಯಿಸಿ ಡಾ.ದೇವರಾಜ್ ಪಾಟೀಲ್‌ರ ಟಿಕೆಟ್ ಕಸಿದು ಚಿಮ್ಮನಕಟ್ಟಿಗೆ ಕೊಟ್ಟಿದ್ದರು. ಇದಕ್ಕೆ ಪ್ರತಿಯಾಗಿ ಪಾಟೀಲ್‌ಗೆ ಲೋಕಸಭೆ ಟಿಕೆಟ್ ನೀಡಬೇಕೆಂಬ ಅಭಿಪ್ರಾಯ ಹೈಕಮಾಂಡ್ ವಲಯದಲ್ಲಿ ಕೇಳಿಬರುತ್ತಿದೆ. ಆದರೆ ದೇವರಾಜ್ ಪಾಟೀಲ್‌ಗೆ ಟಿಕೆಟ್ ದಕ್ಕುವುದು ಅಷ್ಟು ಸುಲಭದ ಮಾತಲ್ಲ. ಯಾಕೆಂದರೆ ಹಾಗೇನಾದರೂ ಆದಲ್ಲಿ ಸರನಾಯಕನ ಗ್ಯಾಂಗ್ ಸಿಡಿದು ಹೊಡೆದು ಅಡ್ಡನಿಂತುಬಿಡುತ್ತದೆ. ವಿಧಾನಸಭಾ ಟಿಕೆಟನ್ನೆ ಉಳಿಸಿಕೊಳ್ಳಲಾಗದ ಡಾಕ್ಟರ್ ಸಾಹೇಬರು ಎಂಪಿ ಟಿಕೆಟ್‌ಗಾಗಿ ಸರ್‌ನಾಯಕ್ ಜೊತೆ ಸೆಣಸಾಡುವುದು ಕಷ್ಟದ ಮಾತೇ ಸರಿ. ಅದನ್ನು ಮೀರಿ ಟಿಕೆಟ್ ಗಿಟ್ಟಿಸಿಕೊಂಡರೂ ಲೋಕಸಭೆಯಲ್ಲಿ ಡಾಕ್ಟರ್ ಗೆಲುವಿಗೆ ಎಲ್ಲ ಶಾಸಕರು ಕೆಲಸ ಮಾಡಲಾರರೆಂಬ ಸಂಶಯ ಕೂಡಾ ಹೈಕಮಾಂಡ್‌ನಲ್ಲಿದೆ.

ಈ ಮಧ್ಯೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮುಸ್ಲಿಂ ಸಮುದಾಯದ ಎಂ.ಬಿ. ಸೌದಾಗರ್‌ಗೆ ಚಾನ್ಸ್ ಕೊಡಬೇಕೆಂಬ ಮಾತು ಕೇಳಿಬರುತ್ತಿದೆಯಾದರೂ ಅಂತ

▶▶ 15

◀◀

ುಬಗಳ ಹೆಸರಿನಲ್ಲಿ ಭೂಮಿ ಇದ್ದರೂ, ಅವರೆಲ್ಲ ಭೂಮಿಯಲ್ಲಿ ಜೀತ ಮಾಡುತ್ತಿರುವ ಅಮಾನವೀಯ

ಕಾರ ನೀಡಿರುವ ಪಹಣಿ, ಪಟ್ಟಾ ಸೇರಿದಂತೆ ದಾಖಲಾತಿಗಳಲ್ಲಿ 94 ಎಕರೆ ನೀರಾವರಿ ಭೂಮಿ 12 ದಲಿತ ಕುಟುಂಬಗಳಿಗೆ ಸೇರಿದೆ. ಆದರೂ ಭೂಮಾಲಿಕರಾದ ಮಾಜಿ ಶಾಸಕ ದಿವಂಗತ ೇನಿ ಕೊಂಡಯ್ಯನವರ ಕುಟುಂಬಸ್ಥರು ದೌರ್ಜನ್ಯದ ಂಕ ಇಂದಿಗೂ ಆ ಭೂಮಿಯನ್ನು ಬಾಹಿರವಾಗಿ ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. 78-79ನೇ ಸಾಲಿನಲ್ಲಿ ಇದೇ 94 ಎಕರೆ ಯನ್ನು ಹೆಚ್ಚುವರಿ ಭೂಮಿಯೆಂದು ಪರಿಗಣಿಸಿದ ಸರಕಾರ ಮಾಜಿ ಶಾಸಕ ಭೀಮನೇನಿ ಕೊಂಡಯ್ಯ ಂಡೆಯಿಂದ ಭೂಮಿಯನ್ನು ವಶಪಡಿಸಿಕೊಂಡಿತ್ತು. ಲ್ಲ, ಭೀಮನೇನಿ ಕೊಂಡಯ್ಯ ಅವರ ತಂದೆ ಭೀಮನೇನಿ ಸೋಮಯ್ಯ ಮತ್ತು ತಾಯಿ ಪಾರ್ವತಮ್ಮರಿಗೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡಿದ್ದರಿಂದ ಪರಿಹಾರವನ್ನೂ ನೀಡಿತ್ತು. ಆನಂತರವೇ ಭೀಮನೇನಿ ಕೊಂಡಯ್ಯ ಅವರ ಭೂಮಿಯಲ್ಲಿ ಜೀತ ಮಾಡುತ್ತಿದ್ದ ಹತ್ತಾರು ದಲಿತ ಕುಟುಂಬಗಳಿಗೆ ಆ ಭೂಮಿಯನ್ನು ಸರ್ಕಾರ ಹಂಚಿತ್ತು.

ಇಷ್ಟೆಲ್ಲ ಆಗಿದ್ದರೂ, ಸರ್ಕಾರ ದಲಿತರಿಗೆ ಹಂಚಿದ್ದ ಭೂಮಿಯನ್ನು ಬಿಟ್ಟುಕೊಡದ ಕೊಂಡಯ್ಯ ಅವರ ಕುಟುಂಬದವರು ತಮ್ಮ ಅಧಿಕಾರ ಮತ್ತು ಜಾತಿಬಲವನ್ನು ಪ್ರಯೋಗಿಸಿ ಕಾನೂನುಬಾಹಿರವಾಗಿ ಅಂದಿನಿಂದ ಇವತ್ತಿನವರೆಗೂ ಆ ಭೂಮಿಯ ಮೇಲೆ ತಮ್ಮ ಹಿಡಿತವನ್ನು ಸಾಧಿಸುತ್ತಾ ಬಂದಿದ್ದಾರೆ.

ಏನೂ ಅರಿಯದ ಅನಕ್ಷರಸ್ಥ ದಲಿತ ಕುಟುಂಬಗಳನ್ನು ಶೋಷಿಸುತ್ತಿರುವ ಆ ಭೂಮಾಲೀಕರು ಇಂದಿಗೂ ಕೆಲ ದಲಿತ ಕುಟುಂಬಗಳನ್ನು ತಮ್ಮ ಮನೆಯಲ್ಲಿ ಜೀತಕ್ಕೆ ಇಟ್ಟುಕೊಂಡಿದ್ದಾರೆ. ಮಾಜಿ ಶಾಸಕನ ಮನೆಯಲ್ಲೇ ಇಷ್ಟೆಲ್ಲ ಅನ್ಯಾಯಗಳು, ಅಕ್ರಮಗಳು, ಅವಾಂತರಗಳು ನಡೆಯುತ್ತಿದ್ದರೂ ಇಲ್ಲಿಯ ಯಾವೊಬ್ಬ ಅಧಿಕಾರಿಯಾಗಲಿ, ಜನಪ್ರತಿನಿಧಿಯಾಗಲಿ ಈ ದಲಿತ ಕುಟುಂಬಗಳಿಗೆ ನ್ಯಾಯ ದೊರಕಿಸಲು ಮುಂದಾಗಿಲ್ಲ.

## ತಂದೆ ಹೆಸರಿಗೇ ಸಮಾಧಿ

ಭೀಮನೇನಿ ಕೊಂಡಯ್ಯನವರ ಹೆಸರು ಈ ಜಿಲ್ಲೆಯಲ್ಲಿ ಈಗಲೂ ಚಿರಪರಿಚಿತ. ಬಳ್ಳಾರಿ ಜಿಲ್ಲೆ ಆಂಧ್ರದ ರಾಯಲಸೀಮೆಯ ಗೂಂಡಾಪಡೆಗಳ ನಂಟನ್ನು ಹೊಂದಿದೆ. ಆ ಕಾರಣಕ್ಕೇ ಈ ಜಿಲ್ಲೆಯ ರಾಜಕಾರಣಿಗಳು ಹಿಂದಿನಿಂದಲೂ ತಮ್ಮ ವೈರಿಗಳನ್ನು ಮಟ್ಟಹಾಕಲು ಬಾಡಿಗೆ ಗೂಂಡಾಪಡೆಗಳನ್ನು ಬಳಸುತ್ತಾ ಬಂದಿದ್ದಾರೆ.


ಈಗ ಅದಿರನ್ನು ಕದ್ದಿದ್ದಕ್ಕೆ ಈಗ ಜೈಲಿನಲ್ಲಿರುವ ಜನಾರ್ದನ ರೆಡ್ಡಿಯೂ ಚುನಾವಣಾ ಸಂದರ್ಭದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು, ಜಾತಿಯ ಪಾಳೆಗಾರಿಕೆ ಮುಂದುವರೆಸಲು ಇದೇ ಅಸ್ತ್ರವನ್ನು ಉಪಯೋಗಿಸುತಿದ್ದದ್ದು ಗುಟ್ಟಾಗಿ ಉಳಿದಿಲ್ಲ.

ಆದರೆ ಇಂತಹ ವಾತಾವರಣದಲ್ಲೂ ದಿವಂಗತ ಭೀಮನೇನಿ ಕೊಂಡಯ್ಯನವರ ಬಗ್ಗೆ ಜಿಲ್ಲೆಯ ಅಲ್ಲಲ್ಲಿ ಒಳ್ಳೆಯ ವ್ಯಕ್ತಿ ಎಂಬ ಅಭಿಪ್ರಾಯವಿದೆ. ಆದರೀಗ ಈತನ ಕುಟುಂಬ ವರ್ಗದವರು ಕೊಂಡಯ್ಯ ಅವರು ಗಳಿಸಿದ್ದ ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಲಾಗದೆ ದೀನದಲಿತರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ.

ಭೂಮಿಯು ದಲಿತರ ಪಾಲಿಗೆ ಹೋಗದೆ ಭೂಮಾಲೀಕರ ಹಿತಾಸಕ್ತಿ ಕಾಪಾಡುತ್ತಾ ಬಂದಿರುವ ಅಧಿಕಾರಿಗಳಿಗೆ ಸರಕಾರ ಯಾವ ಶಿಕ್ಷೆ ನೀಡುತ್ತದೆ?

ಇದೇ ಭೂಮಾಲೀಕರ ಕುಟುಂಬಗಳು ಭೂಮಿಯ ಮೂಲ ದಾಖಲೆಗಳಲ್ಲಿ ನಕಲಿ ಸಹಿ ಮಾಡಿ ಬೇರೆಯವರಿಗೆ ಪರಭಾರೆ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತಾರೆ. ಇದು ಸಹ ಕಾನೂನು ದೃಷ್ಟಿಯಲ್ಲಿ ನೇರವಾದ ಅಕ್ಷಮ್ಯ ಅಪರಾಧವಾಗಿದೆ. ಇಷ್ಟೆಲ್ಲಾ ಘಟನೆಗಳು ನಡೆದಿದ್ದರೂ ಸಹ ಜಿಲ್ಲಾಡಳಿತ ಮತ್ತು ಪೊಲೀಸ್ ವ್ಯವಸ್ಥೆಯ ಅಧಿಕಾರಿಗಳು ಇದ್ಯಾವುದೂ ತಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ ಎಂಬಂತೆ ಮೌನವಹಿಸಿದ್ದಾರೆ.


ಈಗಲಾದರೂ ಸರ್ಕಾರ ದಲಿತರನ್ನು ವಂಚಿಸುತ್ತಿರುವ ಭೂಮಾಲೀಕರ ಹಾಗೂ ಈ ವಿಷಯದಲ್ಲಿ [illegible]



... ದಲಿತರಿಗೆ ಮಂಜೂರಾದ ದಾಖಲಾತಿ ಪತ್ರಗಳು

# ಸಿನಿಮಾ ಮೋಹಿಯ ಸೃಜನಶೀಲ ಕಥನ

## ಪುಸ್ತಕ ವಿಮರ್ಶೆ



2013, ಪುಟ 190, ಬೆಲೆ 200/-
ಸಂಪರ್ಕ: 9480353507

ಭಾರತದ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ ಯುವ ಸಿನಿಮಾ ನಿರ್ದೇಶಕರಲ್ಲಿ ರಾಮ್ ಗೋಪಾಲ್ ವರ್ಮರದು ವಿಶಿಷ್ಟ ಹೆಸರು. 'ಶಿವ', 'ರಂಗೀಲಾ', 'ಭೂತ್', 'ಸರ್ಕಾರ್', 'ಕಂಪೆನಿ' ಮುಂತಾದ ಸಿನಿಮಾಗಳ ಮೂಲಕ ಆರ್.ಜಿ.ವಿ ಸಿನಿಮಾ ಮಾದರಿಯೊಂದನ್ನು ಸೃಷ್ಟಿಸಿದವರು. ವರ್ಮ ಅವರ ಸಿನಿಮಾ ಜಗತ್ತಿಗೆ ಪ್ರವೇಶ ಪಡೆದಂದಿನಿಂದ ಈಚಿನ ತನಕದ ಬದುಕ ಪಯಣದ ಒಂದಷ್ಟು ನೆನಪುಗಳನ್ನು ಹೆಕ್ಕಿ ಕಟ್ಟಿಕೊಟ್ಟಿರುವ ಅವರ ಅನುಭವ ಜಗತ್ತು 'ನನ್ನಿಷ್ಟ' ಕೃತಿರೂಪ.

ಕನ್ನಡದ ಸಂದರ್ಭದಲ್ಲಿ ಸಿನಿಮಾ ನಿರ್ದೇಶಕರು ತಮ್ಮ ಆತ್ಮಕಥನಗಳನ್ನು ಬರೆದುಕೊಂಡದ್ದು ಕಡಿಮೆ. ಪುಟ್ಟಣ್ಣ ಕಣಗಾಲ್ ಮೊದಲಾದವರು ತಮ್ಮ ಅನುಭವ ಕಥನಗಳನ್ನು ಬರೆದುಕೊಂಡಿದ್ದರೆ, ಕನ್ನಡ ಸಿನೆಮಾ ಇತಿಹಾಸದ ಭಿನ್ನ ಮಗ್ಗಲುಗಳು ತೆರೆದುಕೊಳ್ಳುತ್ತಿದ್ದವೋ ಏನೋ. ಅಂಥದ್ದೊಂದು ದೊಡ್ಡ ಕೊರತೆ ಕನ್ನಡ ಚಲನಚಿತ್ರ ಇತಿಹಾಸಕ್ಕಿದೆ. ಈಚಿನ ಗುರುಪ್ರಸಾದ್ ಅವರ 'ಡೈರೆಕ್ಟರ್ ಸ್ಪೆಷಲ್' ತರಹದ ಕೃತಿಗಳು ಸದ್ಯದ ನಿರ್ದೇಶಕರನ್ನಾದರೂ ಪ್ರಭಾವಿಸಬೇಕಿದೆ. ಕನ್ನಡ ಸಂದರ್ಭದಲ್ಲಿ ಸಾಹಿತಿಗಳ ಆತ್ಮಕಥನಗಳ ಬಾಹುಳ್ಯ ಹೆಚ್ಚಿದೆ. ಹಾಗೆ ನೋಡಿದರೆ, ಬೇರೆ ಬೇರೆ ಕ್ಷೇತ್ರದವರು ಆತ್ಮಕಥೆಗಳನ್ನು ಪ್ರಾಮಾಣಿಕವಾಗಿ ದಾಖಲಿಸಲು ಸಾಧ್ಯವಾದರೆ, ಆಯಾ ಕ್ಷೇತ್ರಗಳ ಬಗೆಗಿದ್ದ ಮೂಢನಂಬಿಕೆ ಮತ್ತು ಭ್ರಮೆಗಳು ಒಡೆಯುತ್ತವೆ. ಸಿನಿಮಾ ತುಂಬಾ ಜನಪ್ರಿಯ ಮತ್ತು ಪ್ರಭಾವಿ ಮಾಧ್ಯಮ. ಇಂತಹ ಮಾಧ್ಯಮದಲ್ಲಿ ಕೆಲಸ ಮಾಡಿದ ಯಶಸ್ವಿ ನಿರ್ದೇಶಕರೊಬ್ಬರ ಬದುಕಿನ ಕಥನ ಯಾವಾಗಲೂ ಕುತೂಹಲ ಮೂಡಿಸುವಂಥದ್ದೆ. ಹಾಗಾಗಿ ವರ್ಮ ಕಥನ ಕೂಡ ಓದುವ ಕುತೂಹಲವನ್ನು ಮೂಡಿಸುತ್ತದೆ.

ರಾಮ್ ಗೋಪಾಲ್ ವರ್ಮಾ ಸಿನಿಬದುಕಿನಲ್ಲಿ ಇಟ್ಟ ಒಂದೊಂದು ಹೆಜ್ಜೆಗಳನ್ನು ಅದರೆಲ್ಲಾ ಕಾತರ, ಉತ್ಸಾಹ, ಆತಂಕ, ಮುಗ್ಧತೆಗಳು ಮಸುಕಾಗದಂತೆ ನಿರೂಪಿಸಿದ್ದಾರೆ.




ಈ ಬಗೆಯ ನಿರೂಪಣೆಯೆ ಓದುವಿಕೆಗೆ ಆಪ್ತತೆಯನ್ನು ತಂದು ಕೊಡುತ್ತದೆ. ಸಿನಿಮಾ ಕ್ಷೇತ್ರವೊಂದರಲ್ಲಿ ಹೊಸ ತಲೆಮಾರಿನ ಪ್ರವೇಶಕ್ಕಿರುವ ತೊಡಕುಗಳನ್ನು ವಿವರಿಸುತ್ತಾ, ಎಲ್ಲಾ ಕ್ಷೇತ್ರಗಳಲ್ಲೂ ಹೊಸ ತಲೆಮಾರು ಅನುಭವಿಸಬಹುದಾದ ಕಷ್ಟದ ಜತೆ ಲಗತ್ತಿಸುತ್ತಾರೆ. ಪುಸ್ತಕ ಓದಿನಿಂದ ಪುಸ್ತಕವೊಂದು ಹುಟ್ಟುವಂತೆ, ಸಿನಿಮಾಗಳಿಂದಲೇ ಸಿನಿಮಾವೊಂದು ಹುಟ್ಟುವುದನ್ನು, 'ಶಿವಾ' ಸಿನಿಮಾಕ್ಕೆ ಇನ್‌ಸ್ಪೈರ್ ಆದ ಸಿನಿಮಾಗಳ ಪಟ್ಟಿಯೊಂದನ್ನು ಕೊಡುತ್ತಾರೆ. ಇಂತಹ ಸಂಗತಿಗಳ ಬಗ್ಗೆ ಹೇಳುವಾಗಲೆಲ್ಲಾ ಹಾಸ್ಯದಲ್ಲಿಯೋ ವ್ಯಂಗ್ಯದಲ್ಲಿಯೋ ತೇಲಿಸುತ್ತಲೇ ವರ್ಮ ತಾನೇನೋ ಮಹಾನ್ ಸಾಧಿಸಿದ್ದೇನೆಂಬ ಕಾರಣಕ್ಕೆ ಹುಟ್ಟಬಹುದಾದ ಅಹಂ ನಿರಶನ ಮಾಡಿಕೊಳ್ಳುತ್ತಾರೆ.

'ನನ್ನ ಫ್ಲಾಪ್ ಸಿನಿಮಾಗಳೆಲ್ಲವನ್ನೂ ನಾನು ಉದ್ದೇಶಪೂರ್ವಕವಾಗಿ ತೆಗೆದದ್ದು. ಹಾಗೂ ನನ್ನ ಹಿಟ್ ಸಿನಿಮಾಗಳೆಲ್ಲಾ ಅನಿರೀಕ್ಷಿತವಾಗಿ ಸಂಭವಿಸಿದ್ದು' ಎನ್ನುವಂತಹ ಮಾತುಗಳು ಕಥನುದ್ದಕ್ಕೂ ಬರುತ್ತವೆ. ಇವುಗಳ ಮೂಲಕ ನಿಜ ಬದುಕಿನಲ್ಲಿ ಸಿನಿಕತೆಯನ್ನು ಮೀರಲು ವರ್ಮ ಮಾಡುವ ಕಸರತ್ತಿನ ಭಾಗಗಳಂತೆ ಕಾಣುತ್ತವೆ. ಹಾಗಾಗಿಯೇ ಬದುಕಿನ ಆಕಸ್ಮಿಕಗಳನ್ನು, ಅನಿರೀಕ್ಷಿತ ತಿರುವುಗಳನ್ನು, ಈಡೇರದ ಮತ್ತು ಈಡೇರಿದ ಕನಸಿನ ಚಿತ್ರಗಳನ್ನು ನವಿರಾಗಿ ಚಿತ್ರಿಸಿದ್ದಾರೆ. ಹುಟ್ಟುಹಬ್ಬಗಳ ಕುರಿತು ಬರೆಯುತ್ತಾ 'ಹುಟ್ಟಿದ ನಂತರದ ಸಾಧನೆಗಳಲ್ಲಿ ಸೆಲೆಬ್ರೇಷನ್ ಇರಬೇಕು. ಕೇವಲ ಹುಟ್ಟಿದ್ದಕ್ಕೇ ಸೆಲಬ್ರೇಟ್ ಮಾಡಿಕೊಳ್ಳುವ ಜನ ... ದೃಷ್ಟಿಯಲ್ಲಿ ಅತ್ಯಂತ ಕೈಲಾಗದವರು' ಎನ್ನುತ್ತಾರೆ. ಇಂ... ಕಡೆಯಲ್ಲೆಲ್ಲಾ ಸಿನಿಜಗತ್ತಿನಲ್ಲಿ ಇರಬಹುದಾದ ಭ್ರಮೆಗ... ಕಳಚುವ ಹಾಗೆ ಕುಟುಕುತ್ತಾರೆ. ಇಂತಹ ಕಡೆಗಳಲ್ಲಿ ವ... ಅವರ ವೈಚಾರಿಕತೆಯು ಪ್ರಖರವಾಗಿ ಗೋಚರಿಸುತ್ತ...

ಬ್ರೂಸ್ ಲೀ ಬಗೆಗಿನ ಹುಚ್ಚು ಮೋಹ, ಶ್ರೀದ... ಬಗೆಗಿನ ಅದಮ್ಯ ಪ್ರೀತಿ, ಗೆಳೆಯ ಜೀನಿಯಸ್ ಸತ್ಯೇ... ಬಗೆಗಿನ ಅಚ್ಚರಿ, ಕೋವಿಯಂಥ ಹುಡುಗಿಯ ಬಗೆ... ಸೆಳೆತ, ಕಾಲೇಜು ದಿನಗಳ ಪುಂಡಾಟಿಕೆಯ ನಿರೂಪಣೆ... ವರ್ಮ ಬದುಕಿನ ಹಲವು ಮಜಲುಗಳನ್ನು ಕಾಣಿಸು... ಸಿನಿಮಾವೊಂದರಲ್ಲಿ ರೂಪಿಸುವ ಘಟನೆ ಸನ್ನಿವೇಶ... ನಿಜಬದುಕಿನ ಘಟನೆ ಮತ್ತು ಸನ್ನಿವೇಶದಿಂದ ಪ... ಸೃಷ್ಟಿಮಾಡುವ ಬಗೆಯನ್ನು ಹೇಳುವಾಗ ವಾಸ್ತವವೊಂ... ಕಲಾಕೃತಿಯಾಗುವಲ್ಲಿನ ರೂಪಾಂತರವನ್ನು ವ... ಚಿತ್ರವತ್ತಾಗಿ ಕಟ್ಟಿಕೊಡುತ್ತಾರೆ. ಸಿನಿಮಾಕ್ಕಾಗಿ ಮಾ... ಹೊಸ ಪ್ರಯೋಗಗಳು ಕೆಲವೊಮ್ಮೆ ಆಕ... ಸಂಗತಿಗಳಿಂದಾಗಿರುತ್ತವೆ ಎನ್ನುವಂತಹ ವಾಸ್ತವಗ... ಸಿನಿಕತೆಯಿಲ್ಲದೆ ಹೇಳುತ್ತಾರೆ.

ವರ್ಮ ಒಬ್ಬ ನಿರ್ದೇಶಕರಾಗಿ ಸಮಾಜ... ನೋಡುವ, ಅದನ್ನು ಗ್ರಹಿಸುವ ಮತ್ತು ಸಿನಿಮಾ... ತರುವ ಮೂರು ಆಯಾಮಗಳ ಬಗೆಗೆ ಸೂಕ್ಷ್ಮ... ದಾಖಲಿಸಿದ್ದಾರೆ. ಅವರು ನಿರೂಪಿಸುವ ಕಥನದಲ್ಲಿ ಸಮಾ... ಕಣ್ಣೋಟದಿಂದ ತನ್ನನ್ನು ನೋಡಿಕೊಳ್ಳುವುದಕ್ಕಿಂತ, ... ಬದುಕಿನ ಕಣ್ಣೋಟದಿಂದ ಸಮಾಜವನ್ನು ನೋಡ... ಗುಣವಿದೆ. ನಿರೂಪಣೆಯ ಮಾದರಿಗೆ ಸಿನಿಮಾ ನಿರ್ದೇಶ...

# ಚಿತ್ತೊಪ್ರಸಾದರನ್ನು ಸ್ಮರಿಸಿಕೊಳ್ಳುತ್ತಾ...




ಚಿತ್ತೊಪ್ರಸಾದ್ ಕೇವಲ ಒಬ್ಬ ಪ್ರಗತಿಶೀಲ ಕಲಾವಿದನಾಗಿರಲಿಲ್ಲ, ಸಕ್ರಿಯ ರಾಜಕೀಯ ಕಾರ್ಯಕರ್ತನಾಗಿ ಮೊದಲ ಸಾಲಿನಲ್ಲಿ ನಿಲ್ಲುವ ಯೋಧನಾಗಿದ್ದರು ಅವರು. ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ಅವರಂಥ ಮತ್ತೊಂದು ಚಿತ್ರಕಾರನ ಉದಾಹರಣೆ ಸಿಗುವುದಿಲ್ಲ. ಸುಶಿಕ್ಷಿತ ಕುಟುಂಬವೊಂದರಲ್ಲಿ 15 ಮೇ 1917ರ ದಿನ ಪಶ್ಚಿಮ ಬಂಗಾಳದ ನಯ್ಹಾಟಿ ಎಂಬ ಶಹರದಲ್ಲಿ ಚಿತ್ತೊಪ್ರಸಾದ್ ಅವರ ಜನ್ಮವಾಯಿತು. ಅವರ ತಾಯಿ ಸ್ವಾತಂತ್ರ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರಿಗೆ ಬಹಳಷ್ಟು ಸಹಾಯ ಮಾಡಿದ್ದರು. ಬಿ.ಎ. ಪರೀಕ್ಷೆ ಮುಗಿಸುತ್ತಿದ್ದಂತೆಯೇ ಚಿತ್ತೊಪ್ರಸಾದರು ಸಂಪೂರ್ಣವಾಗಿ ಚಿತ್ರಕಲೆ, ಸಂಗೀತ, ನಾಟಕ ಇತ್ಯಾದಿಯತ್ತ ವಾಗಿದರು. ಇಲ್ಲಿ ಮುಖ್ಯವಾಗಿ ಸ್ಮರಿಸಿಕೊಳ್ಳಬೇಕಾದ ವಿಚಾರ ಏನೆಂದರೆ ಅವರು ಚಿತ್ರಕಲೆಯಲ್ಲಿ ಯಾವುದೇ ಶಿಕ್ಷಣ ಪಡೆದಿರಲಿಲ್ಲ.

1942ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಾದ ಚಿತ್ತೊಪ್ರಸಾದರು 1942-43ರಲ್ಲಿ ಬಂಗಾಳದ ಮಿದಾನಪುರ್ ಮತ್ತು ಚಿತಗಾವ್ ಪ್ರದೇಶದಲ್ಲಿ ಬರಗಾಲದ ...ರ ರೂಪವನ್ನು ಅತಿ ಹತ್ತಿರದಿಂದ ನೋಡಿದರು. ...ದೆ ಆ ಎಲ್ಲ ಪ್ರದೇಶಗಳಲ್ಲಿ ಸಂಚರಿಸಿ ಸ್ಕೆಚ್ ಬಿಡಿಸುತ್ತ ... ಮಾಡಿದರು. ಆ ಎಲ್ಲ ಸ್ಕೆಚ್‌ಗಳು 'ಪೀಪಲ್ಸ್ ವಾರ್' ಎಂಬ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟವಾಯಿತು. ಆ ಮುಖಾಂತರ ಚಿತ್ತೊಪ್ರಸಾದ್ ಪತ್ರಿಕಾ ವರದಿಯ ಹೊಸ ಸಾಧ್ಯತೆಯನ್ನು ಓದುಗರಿಗೆ ತೋರಿಸಿದರು. 1944ರ ಡಿಸೆಂಬರ 20 ಮತ್ತು 27ರ ನಡುವೆ ಬಾಂಬೆ ನಗರದ 'ರೆಡ್ ಫ್ಲಾಗ್ ಹಾಲ್' ನಲ್ಲಿ ನಡೆದ 'ಹಂಗ್ರಿ ಬಂಗಾಲ್' ಚಿತ್ರ ಪ್ರದರ್ಶನದಲ್ಲಿ ಚಿತ್ತೊಪ್ರಸಾದರ ಚಿತ್ರಗಳು ಪ್ರದರ್ಶಿತವಾದವು. ಅದರ ಜೊತೆಗೆ ಪೀಪಲ್ ಪ್ರಭಿಂಗ್ ಹೌಸ್ ಅವರ ಚಿತ್ರ-ವರದಿಗಳನ್ನ 'ಹಂಗ್ರಿ ಬೆಂಗಾಲ್' ಹೆಸರಿನಲ್ಲಿ ಪ್ರಕಟಿಸಿತು.

1946ರ ನೌಕಾ ವಿದ್ರೋಹದಲ್ಲಿ ಚಿತ್ತೊಪ್ರಸಾದ್ ನೌಕಾಸೇನೆಯ ಹೆಗಲಿಗೆ ಹೆಗಲು ಕೊಟ್ಟರು. ಮಾತ್ರವಲ್ಲದೆ ಅವರ ಸಮರ್ಥನೆಯಲ್ಲಿ ಚಿತ್ರಗಳನ್ನು ಬಿಡಿಸಿದರು. ಈ ಚಿತ್ರಗಳು ಕೇವಲ ಕಂಡ ದೃಶ್ಯದ ಚಿತ್ರಗಳಲ್ಲ; ಪಾಲ್ಗೊಳ್ಳುವಿಕೆಯ ಅನುಭವದಿಂದ ಬಿಡಿಸಿದ ಚಿತ್ರಗಳು. ಇದೇ ಚಿತ್ರಕಾರ ರೈತ ಚಳವಳಿಯಲ್ಲಿ ಮತ್ತೆ ತೆಲಂಗಾಣದ ಹೋರಾಟದಲ್ಲೂ ಪಾಲ್ಗೊಂಡು ಚಿತ್ರ ಬಿಡಿಸಿರುವುದನ್ನು ನಾವು ಕಾಣುತ್ತೇವೆ. ಅಖಿಲ ಭಾರತ ರೈತ ಸಮ್ಮೇಳನ, ಕಾಶ್ಮೀರ ಆಂದೋಲನ, ಅಂಚೆ ಕಾರ್ಮಿಕರ, ರೈಲ್ವೆ ಕಾರ್ಮಿಕರ ಚಳವಳಿಗಳಲ್ಲೂ ನಾವು ಚಿತ್ತೊಪ್ರಸಾದರನ್ನು ಚಿತ್ರಕಾರ-ಇತಿಹಾಸಕಾರನಾಗಿ ಕಾಣುತ್ತೇವೆ. ಅಪ್ಪಟ ಭಾರತೀಯ ಚಿತ್ರಕಾರ ಎಂದು ಹೇಳಬಹುದಾದ ಏಕೈಕ ಚಿತ್ರಕಾರ ಎಂದರೆ ಚಿತ್ತೊಪ್ರಸಾದ್ ಮಾತ್ರ.


ಚಳವಳಿ, ಆಂದೋಲನಗಳೊಂದಿಗೆ ಬೆರೆತು ಚಿತ್ತೊಪ್ರಸಾದ್ ಚಿತ್ರ ಬಿಡಿಸಿದರು ಎಂಬುದು ಜನಪ್ರಿಯ ವಿಚಾರ. ಆದರೆ ಅವರು ಬಡ ಮಕ್ಕಳ ಜೀವನದ ದುಃಸ್ಥಿತಿಯನ್ನು ಕುರಿತಾಗಿ ರಚಿಸಿದ ಚಿತ್ರಗಳು ಸಹ ಅವರ ಬಂಗಾಳದ ಹಸಿವಿನ ಚಿತ್ರಗಳಷ್ಟೇ ಮಹತ್ವಪೂರ್ಣವಾದದ್ದು. ಜಾಗತಿಕ ಮಟ್ಟದಲ್ಲಿಯೂ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡ ಚಿತ್ರಗಳು ಬಹಳ ವಿರಳ. ಭಾರತೀಯ ಚಿತ್ರಕಲೆಯಲ್ಲೂ ದೇವರ ಬಾಲರೂಪ ಮತ್ತು ರಾಜರ ಬಾಲ್ಯಾವಸ್ಥೆಯ ಚಿತ್ರಗಳನ್ನು ಬಿಟ್ಟರೆ ಮಕ್ಕಳ ಚಿತ್ರಗಳು ಬೆರಳೆಣಿಕೆಯಷ್ಟೇ. ಪಾಶ್ಚಾತ್ಯ ಚಿತ್ರಲೋಕದಲ್ಲಿ ದೇವದೂತರಾಗಿ ಮಕ್ಕಳನ್ನು ಕಾಣುತ್ತೇವೆ, ಆದರೂ ಅಲ್ಲಿ ಮಕ್ಕಳು ಚಿತ್ರದ ಕೇಂದ್ರವಾಗಿ ಇರುವುದಿಲ್ಲ. ಚಿತ್ತೊಪ್ರಸಾದ್ ತಮ್ಮ 'ಎಂಜೆಲ್ಸ್ ವಿಥೌಟ್ ಫೇರಿಟೇಲ್ಸ್' ಸರಣಿಯಲ್ಲಿ ಮಕ್ಕಳನ್ನೇ ಚಿತ್ರದ ಕೇಂದ್ರವಾಗಿಸಿ ಚಿತ್ರದ ನಾಯಕರನ್ನಾಗಿಸಿದರು. ಚಿತ್ರವೊಂದರ ಒಂದು ದಿಕ್ಕಿನಲ್ಲಿ ದೀಪ ಮತ್ತೊಂದು ದಿಕ್ಕಿನಲ್ಲಿ ಆಟವಾಡಿಸಿಕೊಳ್ಳಲು ಕಾದಿರುವ ಗೊಂಬೆಯನ್ನು ಕೂರಿಸಿ ಅನಾಥಮಗುವೊಂದರ ಏಕಾಂತ ತೋರಿಸುತ್ತಾರೆ. ಮತ್ತೊಂದು ಚಿತ್ರದಲ್ಲಿ ಹೋಟೆಲ್ ಒಂದು ಮುಚ್ಚಿಯಾದ ಬಳಿಕ ರಾಶಿ ರಾಶಿ ಬಿದ್ದಿರುವ ಪಾತ್ರೆಗಳ ನಡುವೆ ಹುಡುಗನನ್ನು ತೋರಿಸುತ್ತಾರೆ. ಜೊತೆಯಲ್ಲಿ ಇನ್ನೂ ಮಲಗದ ನಾಯಿ, ಬುರುಡೆ ದೀಪ, ನೆಲದ ಮೇಲೆ ಹಲವಾರು ಜಿರಳೆಗಳು. ಆದರೂ ಅಲ್ಲಿ ಕಣ್ಣು ಕುಕ್ಕುವಂಥಾ ಏಕಾಂತ ಕಾಣಿಸುತ್ತಾರೆ. ಮತ್ತೊಂದು ಕಡೆ ಭೀಕರ ರಾತ್ರಿಯಲ್ಲಿ ಹರಕಲು ಹೊದಿಕೆಯನ್ನು ಮೈಮೇಲೆ ಎಳೆದುಕೊಂಡು ಫುಟ್‌ಪಾತ್ ಮೇಲೆ ಮಲಗಿರುವ ಮಕ್ಕಳು. ಅವರ ನಡುವೆ ಸುಳಿದಾಡುವ ನಾಯಿ ಆ ಅನಾಥ ಮಕ್ಕಳ ಸ್ಥಿತಿಗೆ ತನ್ನನ್ನೇ ಹೋಲಿಸಿಕೊಂ... ಹೆಮ್ಮೆ ಪಡುತ್ತಿದೆ. ಈ ಎಲ್ಲಾ ಚಿತ್ರಗಳು ಮಕ್ಕಳ ಕುರಿತ... ಚಿತ್ತೊಪ್ರಸಾದರಿಗೆ ಇರುವ ಪ್ರೀತಿಯನ್ನು ತೋರಿಸುತ್ತ... ಆದರೂ ಈ ಎಲ್ಲಾ ಚಿತ್ರಗಳು ಮಕ್ಕಳಿಗಾಗಿ ಬಿಡಿ... ಚಿತ್ರಗಳಲ್ಲ, ಬದಲಾಗಿ ಆ ಎಲ್ಲಾ ಮಕ್ಕಳ ಅಂಥಾ ಸ್ಥಿ... ಕಾರಣವಾದ ಲೋಕಕ್ಕೆ ಹಾಕಿದ ಛೀಮಾರಿ, ಆ ಎ... ಚಿತ್ರಗಳು!





ಚಿತ್ತೊಪ್ರಸಾದರ ಚಿತ್ರಗಳಲ್ಲಿ ಮಹಿಳೆಯರಿಗೆ ವಿ... ಸ್ಥಾನವಿದೆ. ಅವರ ಚಿತ್ರಗಳಲ್ಲಿ ಮಹಿಳೆ ಪುರುಷನ ಹೆಗ... ಹೆಗಲು ನೀಡಿ ಬದುಕಿನ ಸಂಘರ್ಷದಲ್ಲಿ ಸಹಭಾಗಿಯ... ಸಮಾನಳಾಗಿ ಕಾಣಿಸಿಕೊಳ್ಳುತ್ತಾಳೆ.

ಇಪ್ಟಾ (ಇಂಡಿಯನ್ ಪೀಪಲ್ಸ್ ಥಿಯೇಟ... ಅಸೋಸಿಯೇಶನ್) ಆರಂಭಗೊಂಡಾಗ ನಾಟಕವೊಂ... ಆರಂಭದಲ್ಲಿ ಕಾಮ್ರೇಡ್ ಬರ್ಧನ್ ನಗಾರಿ ಬಾರಿಸ... ನಾಟಕ ಆರಂಭ ಆಗುವುದರ ಸೂಚನೆ ನೀಡುತಿದ್ದರು. ... ಕ್ಷಣವನ್ನು ಚಿತ್ತೊಪ್ರಸಾದ್ ತಮ್ಮ ಸ್ಕೆಚ್ ಪುಸ್ತಕದ ಚ... ಸೇರಿಸಿಕೊಂಡರು. ಮುಂದೆ ಅದನ್ನ... ಆಧಾರವಾಗಿಟ್ಟುಕೊಂಡು ಚಿತ್ತೊಪ್ರಸಾದ್ ಇಪ್ಟಾ ಲಾಂ... ತಯಾರಿಸಿದರು.

ಚಿತ್ತೊಪ್ರಸಾದರ ಚಿತ್ರಗಳನ್ನು ನೋಡುವಾಗ ಘೋ... ಇಲ್ಲ ಪೋಸ್ಟರ್ ಆಗದ ಒಂದು ಜನಪರ ಮ... ಅಜಿಟ್-ಪ್ರಾಪ್ ಚಿತ್ರ ಸಂಸ್ಕೃತಿಯ ದರ್ಶನವಾಗುತ್ತ... ಇಲ್ಲಿ ಶೋಷಿತ ಪೀಡಿತ ಜನರ ಬಳಿ ಹೋಗ... ಮಾನವೀಯತೆ ಇದೆ ಮತ್ತು ಆ ಕಲೆ ಸಾಮಂ... ಪೋಷಣೆಯಲ್ಲಿರುವ ಕಲಾಜಗತ್ತಿನ ವಿರುದ್ಧ ನಡೆ... ಪ್ರತಿಭಟನೆಯೂ ಹೌದು. ಯುಗಗಳಿಂದ ... ಸಾಮಂತರ-ಧನಿಕರ ಛಾಯಛತ್ರದಲ್ಲಿ ಬೆಳೆಯುತ್ತ ಬಂದಿ... ಅದಕ್ಕೆ ಭಿನ್ನವಾದ ಕಲಾ ಮಾರ್ಗವೊಂದು ಇದ್ದರೂ ಅ...



ರ್ಮರಿಗೆ ಅರಿವಿಲ್ಲದಂತೆಯೇ ನುಗ್ಗಿದಂತಿದೆ.
ಕ್ಕೆ ಎನ್ನುವಾಗ ಬೇರೆಯವರ ಇಷ್ಟಾನಿಷ್ಟಗಳಿಗೆ
ಡದಿರುವ ಮತ್ತು ನನ್ನಿಷ್ಟವನ್ನು ಬೇರೆಯವರು
ಂಬ ಜರೂರೇನೂ ಇಲ್ಲ ಎನ್ನುವ ದಾರ್ಷ್ಟ್ಯ ಕೂಡ
ಡುತ್ತದೆ. ಆಗ ತಾನು ಮಾಡುವುದು, ಹೇಳುವುದೇ
ನ್ನುವ ಅಹಂ ನಿಷ್ಠ ಮಾತುಗಳು ಹೊಮ್ಮುವ
ಇರುತ್ತದೆ. ವರ್ಮ ಅವರ ನಿರೂಪಣೆಯಲ್ಲಿಯೂ
ಕಂಡೂಕಾಣದ ಹಾಗೆ ಇಣುಕಿದೆ.

ತ್ ಗೋಪಾಲ್ ವರ್ಮ ಅವರ ಸಿನಿಮಾಯಾನ
ತಿಯನ್ನು ಸೃಜನ್ ಕನ್ನಡದ ಓದಿಗೆ ಆಪ್ತವಾಗುವಂತೆ
ಸಿದ್ದಾರೆ. ಈ ಕೃತಿಯನ್ನು ಗಮನಿಸಿದರೆ ಮಹತ್ವದ
ಕೃತಿಗಳನ್ನು, ತೆಲುಗಿನ ಹೊಸ ತಲೆಮಾರಿನ
ನ್ನು ಕನ್ನಡಕ್ಕೆ ತರುವ ಕೆಲಸವನ್ನು ಸೃಜನ್
ಳ್ಳಲಿಕ್ಕೆ ಕಾಲ ಪಕ್ವಾಗಿದೆ ಅನ್ನಿಸುತ್ತದೆ. ಮೂಲ
ಕೃತಿಗಿಂತಲೂ ಕನ್ನಡದ ಅನುವಾದಿತ ಕೃತಿ
ಟ್ಟದಲ್ಲಿ ಅದ್ಭುತವಾಗಿದೆ ಎಂದು ಸ್ವತಃ ವರ್ಮ
ಮನ್ನು ಕೈಲಿಡಿದು ಬೆರಗುಗೊಂಡಿದ್ದಾಗಿ ಸೃಜನ್
ದ್ದರು. ಅಷ್ಟರಮಟ್ಟಿಗೆ ಪುಸ್ತಕದ ಗುಣಮಟ್ಟವನ್ನು
ಕೊಳ್ಳುವ ಹಲವು ಪ್ರಯೋಗಗಳು
ತ್ತಿರುವುದು ಕನ್ನಡದ ಮಟ್ಟಿಗೆ ಹೆಮ್ಮೆ ಪಡುವ
ಅದರಲ್ಲಿ ಪಲ್ಲವ ಪ್ರಕಾಶನದ್ದು ರಾಜಿ ಇಲ್ಲದ
ಂತಹ ಪುಸ್ತಕ ಪ್ರೀತಿಯ ಕಾರಣಕ್ಕೆ ಕೆ.ವೆಂಕಟೇಶ್
ಭಿನಂದನಾರ್ಹರು. ಸೃಜನ್ ಈಗಾಗಲೆ 'ನನ್ನಿಷ್ಟ'ದ



ಮುಂದುವರಿದ ಭಾಗದಂತಿರುವ 'ವೋಡ್ಕಾ ವಿತ್ ವರ್ಮ' (ತೆಲುಗು ಮೂಲ: ಸಿರಾಶ್ರೀ) ಕೃತಿಯನ್ನೂ ಅನುವಾದಿಸಿದ್ದಾರೆ. ಅದಿನ್ನು ಪ್ರಕಟಣೆಯ ಹಂತದಲ್ಲಿದೆ.

-ಅರುಣ್ ಜೋಳದಕೂಡ್ಲಿಗಿ



ವ ವರ್ಗದ ವೈಭವೀಕರಣದಲ್ಲೇ ತಲ್ಲೀನವಾಗಿತ್ತು.
ತಿರೋಧ ಮತ್ತು ರಾಜಕೀಯ ವಿಚಾರಗಳು
ತ್ತರಲಿಲ್ಲ. ಚಿತ್ತೊಪ್ರಸಾದ್ ಈ ಎರಡೂ
ಳನ್ನು ಧಿಕ್ಕರಿಸಿ ಮೂರನೇ ಮಾರ್ಗವೊಂದನ್ನು
ಸಿಕೊಂಡರು. ಚಿತ್ತೊಪ್ರಸಾದರ ಕಲೆ ಮೂಲವಾಗಿ
ವ ವರ್ಗದವರ ಮೇಲಾಗುವ ಶೋಷಣೆಯ
ಗಿದ್ದರೂ ಅಲ್ಲಿ ಪ್ರತಿರೋಧದ ಅಂಶಗಳು
ತ್ತವೆ.

ಪ್ರಸಾದರ ಅನೇಕಾನೇಕ ಚಿತ್ರಗಳಲ್ಲಿ ರೈತಾಪಿ
ದಿಯುವ ವರ್ಗದ ಐಕ್ಯತೆಗೆ ಆಹ್ವಾನ ಇದೆ.
ಲಸದಲ್ಲಿ ಅವರು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು
ಲೀಗ್ ಎಲ್ಲದರ ಬಾವುಟಗಳನ್ನು ತೋರಿಸುತ್ತಾರೆ.
ಹೋರಾಟದ ಜನರ ನಡುವೆ ಸಂಕೀರ್ಣ
ಯಿಕತೆ ಗೈರುಹಾಜರಾಗಿ ಸ್ತ್ರೀ-ಪುರುಷ ಸಮಾನತೆ
ರುತ್ತದೆ. ದುಡಿಯುವ ವರ್ಗದ ಏಕತೆ
ದರಿಗೆ ಎಲ್ಲಾ ಸ್ತರದಲ್ಲಿ ಮೌಲಿಕವಾದುದ್ದಾಗಿತ್ತು
ಅವರು ತಮ್ಮ ಚಿತ್ರಗಳಲ್ಲಿ ದುಡಿಯುವ ವರ್ಗದ
ಕತೆ ಮತ್ತು ಸಮಾನತೆಗೆ ಪ್ರಾಶಸ್ತ್ಯ ನೀಡಿದರು.
ಪ್ರಸಾದರ ವರ್ಣಚಿತ್ರಗಳ ಮೇಲೆ ಪಾಶ್ಚಾತ್ಯ
ಪ್ರಭಾವ ಕಂಡುಬರುತ್ತದೆ. ಅವರ ವರ್ಣ
ಬದುಕನ್ನು ಸಂಭ್ರಮಿಸುವಂತದ್ದು, ಅದೇ ಅವರ
ಂಪು ರೇಖೆಗಳು ನಮ್ಮ ನಿತ್ಯ ಜೀವನದ ಕಹಿ
, ನಮ್ಮೆದುರಿಗೆ ಹಿಡಿಯುವಂತವು.
ಿ ಮೂಲ: ಅಶೋಕ್ ಭೌಮಿಕ್
ಕನ್ನಡಕ್ಕೆ: ಸಂವರ್ತ 'ಸಾಹಿಲ್'



# ರಣಜಿ ಗೆದ್ದ ತಂಡಕ್ಕೆ ಹ್ಯಾಟ್ಸಾಫ್!

ದಿನ ಕಳೆದಂತೆ ತನ್ನ ಮೌಲ್ಯ ಕಳೆದುಕೊಳ್ಳುತ್ತಿರುವ, ದೊಡ್ಡ ನಗರಗಳ ಖಾಲಿ ಸ್ಟೇಡಿಯಂಗಳಲ್ಲಿ ಆಡಬೇಕಾದ ಅನಿವಾರ್ಯತೆ ಇರುವ ದೇಸಿ ರಣಜಿ ಟ್ರೋಫಿ ಈ ಬಾರಿ ಕರ್ನಾಟಕಕ್ಕೆ ಅರ್ಹವಾಗಿಯೇ ದಕ್ಕಿದೆ. ಮೊನ್ನೆ ತಾನೇ ಮಹಾರಾಷ್ಟ್ರವನ್ನು ನಿರ್ಣಾಯಕವಾಗಿ ಮಣಿಸಿ ಟ್ರೋಫಿ ಗೆದ್ದ ತಂಡಕ್ಕೆ ಹ್ಯಾಟ್ಸಾಫ್!! ಸರಿಸುಮಾರು ಡಜನ್‌ಗಟ್ಟಲೆ ವರ್ಷದ ನಂತರ ಸಂದ ಈ ರಣಜಿ ಜಯ ಕರ್ನಾಟಕದ ಆಟಗಾರರಿಗೆ ರಾಷ್ಟ್ರೀಯ ಅವಕಾಶಗಳ ಬಾಗಿಲನ್ನು ತೆರೆಯುತ್ತದೆಯೇ ಎಂಬುದನ್ನು ಕಾದುನೋಡಬೇಕಾಗಿದೆ. ಏಕೆಂದರೆ ರಣಜಿ ಪಂದ್ಯಗಳಿರುವುದೇ, ರಾಷ್ಟ್ರೀಯ ಆಟಗಾರರನ್ನು ತಯಾರು ಮಾಡಲು ಎಂಬುದನ್ನು ಮರೆಯಕೂಡದು. ಯಾವ ಟೀಕೆಟಿಪ್ಪಣಿಗೂ ತಲೆ ಕೆಡಿಸಿಕೊಳ್ಳದ ಬಿಸಿಸಿಐ ಬಾಸ್ ಎನ್. ಶ್ರೀನಿವಾಸನ್ ಹಾಗೂ ಆತನ ಬಲಗೈ ಬಂಟ ಕ್ಯಾಪ್ಟನ್ ಧೋನಿಯ ಕೃಪೆ ಇದ್ದರೆ ಕರ್ನಾಟಕದವರಿಗೆ ಮುಕ್ತ ಅವಕಾಶದ ಬಾಗಿಲುಗಳು ತೆರೆಯಬಹುದು. ಏನೇ ಇರಲಿ ಬಹುತೇಕ ಯುವ ಆಟಗಾರರನ್ನು ಕಟ್ಟಿಕೊಂಡು ನಿರ್ಣಾಯಕವಾಗಿ ಗೆದ್ದ ತಂಡದ ಸಾಧನೆ ಗಮನಾರ್ಹ ಮತ್ತು ಅಭಿನಂದನೀಯ.

ಆಡಿದ ಹನ್ನೊಂದು ಪಂದ್ಯಗಳಲ್ಲಿ ಏಳರಲ್ಲಿ ಸಂಪೂರ್ಣ ಜಯದ ದಾಖಲೆಯೊಡನೆ ಟೂರ್ನಿಯನ್ನು ಅರ್ಹವಾಗಿಯೇ ಗೆದ್ದ ಕರ್ನಾಟಕ ತಂಡದ ಯಶಸ್ಸಿನ ಗುಟ್ಟೇನು? ನಮಗೆ ಎದ್ದು ಕಾಣುವುದು ಸಾಂಘಿಕ ಹೋರಾಟ, ವಿಕೆಟ್ ಕೀಳುವ ಸಾಮರ್ಥ್ಯ ಇರುವ ಮಧ್ಯಮ ವೇಗಿಗಳು ಹಾಗೂ ಟನ್‌ಗಟ್ಟಲೆ ರನ್ ಬಾರಿಸಿ ಬ್ಯಾಟಿಂಗ್‌ಗೆ ಸ್ಥಿರತೆ ತಂದುಕೊಟ್ಟ ದಾಂಡಿಗರು. ವಿನಯ್‌ಕುಮಾರ್‌ನಲ್ಲಿ ಒಬ್ಬ ಸಮರ್ಥ ನಾಯಕ ಎದ್ದು ಕಂಡರೆ, ಕೋಚ್ ಜೆ.ಅರುಣ್ ಕುಮಾರ್ ತಂಡದಲ್ಲಿ ಸಾಮರಸ್ಯ ಕಾಪಾಡಿ, ಸಂಪೂರ್ಣ ತೊಡಗಿಸಿಕೊಳ್ಳಲು ಯಶಸ್ವಿ ಆದರು. ಕಳೆದ ಸೀಸನ್‌ನಂತೆ ತಂಡಕ್ಕೆ ಬ್ಯಾಟಿಂಗ್ ಅಸ್ಥಿರತೆ ಈ ಬಾರಿ ಕಾಡಲಿಲ್ಲ. ಈ ಸೀಸನ್‌ನಲ್ಲಿ ಒಟ್ಟಾರೆ ಹತ್ತೊಂಬತ್ತು ಆಟಗಾರರನ್ನು ಆಡಿಸಿದರೂ, ಬಹುತೇಕ ತರುಣರು ತಂಡದ ಗೆಲುವಿಗೆ ನಿರ್ಣಾಯಕ ಕ್ಷಣಗಳಲ್ಲಿ ಕಾಣಿಕೆ ಕೊಟ್ಟರು. ಅವಕಾಶಕ್ಕಾಗಿ ಕಾದು ಸಾಕಾದ ಆರ್. ಸಮರ್ಥ್, ಎಸ್.ಶರತ್, ಮಾಯಾಂಕ್ ಅಗರ್‌ವಾಲ್, ಕುನಾಲ್ ಕಪೂರ್, ಎಸ್.ಗೋಪಾಲ್ ರೀತಿಯ ಆಟಗಾರರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದರು. ಹಾಗೆಯೇ ಕೆ.ಎಲ್. ರಾಹುಲ್‌ನಂತಹ ಸೀಸನ್ಡ್ ಆಟಗಾರ ತಾನು ಮುಂದಿನ ಹಂತಕ್ಕೆ ಹೋಗಲು ಸಿದ್ಧ ಎಂಬ ಸೂಚನೆಯನ್ನು ಬಹಳ ಗಟ್ಟಿಯಾಗಿಯೇ ಕೊಟ್ಟಿದ್ದಾನೆ. ವಿನಯ್ ಕುಮಾರ್‌ನಲ್ಲಿ ರಾಷ್ಟ್ರೀಯ ತಂಡಕ್ಕೆ ಮರಳುವ ಹಪಾಹಪಿ ಎದ್ದು ಕಾಣುತಿತ್ತು, ಹಾಗೆಯೇ ಫೈನಲ್‌ನಲ್ಲಿ ಗಣೇಶ್ ಸತೀಶ್, ಉತ್ತಪ್ಪ ಹಾಗೂ ಮನೀಷ್ ಪಾಂಡೆ ರೀತಿಯ ಪಳಗಿದ ಆಟಗಾರರು ಸದೃಢ ಬ್ಯಾಟಿಂಗ್ ಕಟ್ಟುವಲ್ಲಿ ಯಶ ಪಡೆದಿದ್ದು ತಂಡಕ್ಕೆ ಪ್ಲಸ್ ಪಾಯಿಂಟ್ ಆಯಿತು. ಫೀಲ್ಡಿಂಗ್ ಕೂಡಾ ಕಳೆದ ಬಾರಿಗಿಂತ ಹೆಚ್ಚು ಮೊನಚಾಗಿದ್ದರೂ ತೀರಾ ಖುಷಿ ಪಡುವ ಅಗತ್ಯ ಇಲ್ಲ, ಈ ಕ್ಷೇತ್ರದಲ್ಲಿ ತೀವ್ರ ತರದ ಪ್ರಗತಿ ಅತ್ಯಗತ್ಯ.

ಮುಖ್ಯವಾಗಿ ಮಧ್ಯಮ ವೇಗದ ಬೌಲಿಂಗ್ ಪಡೆ- ವಿನಯ್ ಕುಮಾರ್, ಅಭಿಮನ್ಯು ಮಿಥುನ್, ಎಸ್.ಶರತ್, ಎಸ್. ಅರವಿಂದ್- ತಮ್ಮ ಮೊನಚನ್ನು ಕಾಪಾಡಿಕೊಂಡು ಸಾಂಘಿಕ ದಾಳಿ ಮಾಡಿದ್ದು ಫಲ ಕೊಟ್ಟಿತು. ಆದರೆ ಇಡೀ ಟೂರ್ನಿಯಲ್ಲಿ ನೋಡಲೇಬೇಕೆನ್ನುವಂತೆ ಉಡಾಯಿಸಿ ಬೌಲಿಂಗ್ ಮಾಡುವ ಒಬ್ಬನೇ ಒಬ್ಬ ಬೌಲರ್ ಎಲ್ಲೂ ಕಾಣಲಿಲ್ಲ, ಪ್ರಾಯಶಃ ನಿರ್ಜೀವ ಭಾರತೀಯ ಪಿಚ್‌ಗಳು ಹಾಗೂ ಕೇವಲ ಲೈನ್ ಮತ್ತು ಲೆಂಗ್ತ್‌ನ್ನೇ ಅವಲಂಬಿಸಿರುವ ಏಕದಿನ ಪಂದ್ಯಗಳ ಒತ್ತಡ ಇದಕ್ಕೆ ಕಾರಣವಿರಬಹುದು. ಏನೇ ಆದರೂ ಮುಂದಿನ ದಿನಗಳಲ್ಲಿ, ಭಾರತ ವೇಗದ ಬೌಲಿಂಗ್ ವಿಭಾಗದಲ್ಲಿ ತೀವ್ರ ಬರ ಎದುರಿಸುವುದು ಶತಸಿದ್ಧ ಎನ್ನುವಂತೆ ಕಾಣುತ್ತದೆ. ಎಲ್ಲಿ ನೋಡಿದರೂ ನೂರಾ ಇಪ್ಪತ್ತು- ಮೂವತ್ತು ಕಿ.ಮೀನ ಆಸುಪಾಸಿನ ಮಧ್ಯಮವೇಗಿಗಳೇ ಎದ್ದು ಕಾಣುತ್ತಾರೆ. ಅದರಂತೆ ಕರ್ನಾಟಕದ ಬೌಲಿಂಗ್ ಪಡೆಯೂ ಕೂಡಾ ಈ ಮಾತಿಗೆ ಹೊರತಾಗಿಲ್ಲ. ಆದರೆ ಸ್ವಿಂಗ್ ಮೇಲಿನ ನಿಯಂತ್ರಣ ವಿಕೆಟ್ ಎತ್ತುವಲ್ಲಿ ಸಹಾಯ ಮಾಡಿದ್ದು ತಂಡಕ್ಕೆ ಬಹಳ ಲಾಭವಾಯಿತು.

ಫೈನಲ್‌ನಲ್ಲಿ ರೋಜರ್ ಬಿನ್ನಿ ಮಗ ಸ್ಟುವರ್ಟ್ ಬಿನ್ನಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದರಿಂದ ಆಡಲಾಗಲಿಲ್ಲ, ಅತ್ತ ಸೋತ ನ್ಯೂಜಿಲೆಂಡ್ ಸರಣಿಯಲ್ಲಿಯೂ ಹೆಚ್ಚು ಅವಕಾಶ ದೊರಕಲಿಲ್ಲ, ಇತ್ತ ಟ್ರೋಫಿ ಎತ್ತಿ ಹಿಡಿವ ಸಂತೋಷವೂ ದಕ್ಕಲಿಲ್ಲ, ಆದರೆ ತಂಡದ ಯಶಸ್ಸಿಗೆ ಸ್ಟುವರ್ಟ್ ಪಾಲೂ ಇದೆ. ರಾಷ್ಟ್ರೀಯ ಟೂರ್ನಿಯಲ್ಲಿ ಸಾಕಷ್ಟು ಯಶಸ್ಸು ಕಾಣುತ್ತಿರುವ ಈತ ಅಂತರರಾಷ್ಟ್ರೀಯ ಮಟ್ಟದಲ್ಲಿ ಏನಾಗುತ್ತಾನೆ ಎಂಬುದನ್ನು ಕಾಲ ನಿರ್ಣಯಿಸಬೇಕು. ಸದ್ಯಕ್ಕೆ ಕೋಟಿ ಕೋಟಿಗಟ್ಟಲೆ ಹಣ ಎಣಿಸುತ್ತಿರುವ ಕರ್ನಾಟಕದ ಆಟಗಾರರು ತಮ್ಮ ಆಟದಲ್ಲಿನ ಸ್ಥಿರತೆಯ ಜೊತೆಗೆ, ದಕ್ಕಿರುವ ಖ್ಯಾತಿಯನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ. ಚೂರು ಗಮನ ತಪ್ಪಿ ಮೋಜು ಮಸ್ತಿಯಲ್ಲಿ ತಮ್ಮನ್ನೇ ಕಳೆದುಕೊಂಡರೆ ಆಟ ಇವರನ್ನು ಬಿಟ್ಟು ಗಾವುದ ದೂರ ಸರಿಯಬಹುದೆನ್ನುವ ಎಚ್ಚರವನ್ನು ಪುನಃ ಇವರಿಗೆಲ್ಲ ಅನಿವಾರ್ಯವಾಗಿ ನೆನಪಿಸಬೇಕಿದೆ. ರಾಷ್ಟ್ರೀಯ ತಂಡದಿಂದ ಹೊರಬಂದ ರಾಬಿನ್ ಉತ್ತಪ್ಪ ಈಗ ಏದುಸಿರು ಬಿಡುತ್ತಿರುವುದು ಯಶಸ್ಸಿನ ಹಿಂದೆಯೇ ಎಚ್ಚರ ತಪ್ಪಿದರೆ ಸೋಲು ಇದೆ ಎಂಬುದನ್ನು ತೋರಿಸುತ್ತದೆ. ಬಂದ ಖ್ಯಾತಿಯನ್ನು ನಿಭಾಯಿಸಲಾಗದ ಹತ್ತು ಹಲವು ಆಟಗಾರರ ಉದಾಹರಣೆ ಈ ತರುಣರ ಮುಂದಿದೆ.

ಆದ್ದರಿಂದ ದ್ರಾವಿಡ್, ಕುಂಬ್ಳೆ, ಶ್ರೀನಾಥರ ಅಪರಿಮಿತ ಸಾಧನೆ ಹಾಗೂ ಸತತ ಅಭ್ಯಾಸ ಇವರೆಲ್ಲರಿಗೂ ಮಾದರಿಯಾಗಬೇಕಿದೆ. ಇವರಲ್ಲಿ ಬಹುತೇಕರು ಜಣ ಜಣ ಹಣ ತರುವ ಐಪಿಎಲ್‌ನತ್ತ ಆಸೆಗಣ್ಣಿನಿಂದ ನೋಡುತ್ತಿರಬಹುದು. ಆದರೆ ಇವರ ನಿಜವಾದ ಆಯ್ಕೆ ಮತ್ತು ಆಕಾಂಕ್ಷೆ ಟೆಸ್ಟ್ ಕ್ರಿಕೆಟ್ ಆಡುವತ್ತ ಇದ್ದರೆ ಬಹಳ ಒಳ್ಳೆಯದು. ಇಲ್ಲಿ ಯಶ ಕಂಡ ಆಟಗಾರರು ಪುಟಿದೇಳುವ ವಿದೇಶಿ ಪಿಚ್‌ನಲ್ಲಿ ಆಡುವ ತಾಂತ್ರಿಕ ಕೌಶಲ್ಯವನ್ನು ರೂಢಿಸಿಕೊಳ್ಳಬೇಕಾಗಿದೆ. ದೇಸಿ ಕ್ರಿಕೆಟ್ ಹಂತದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ರೂಪಾಂತರಗೊಳ್ಳಬೇಕಾದರೆ ಸಾಕಷ್ಟು ಶ್ರಮ ವಹಿಸಬೇಕಾಗಿದೆ. ಅಲ್ಲಿ ಸಮರ್ಥವಾಗಿ ಆಡಲು ಅಗತ್ಯವಿರುವ ಮಾನಸಿಕ ತಯಾರಿ ಹಾಗೂ ತಾಂತ್ರಿಕ ಕೌಶಲ್ಯ ನಮ್ಮ ಆಟಗಾರರಿಗೆ ದಕ್ಕಲಿ ಎಂದು ಆಶಿಸೋಣ. ಇದಕ್ಕೆ ಪೂರಕವಾಗಿ ಕರ್ನಾಟಕ ಕ್ರಿಕೆಟ್ ಮಂಡಳಿ ತನ್ನ ಒಳರಾಜಕೀಯವನ್ನು ಬಿಟ್ಟು ಸ್ಪಂದಿಸಬೇಕಾಗಿದೆ.

ಇಡೀ ಪಂದ್ಯಾವಳಿಯ ಆಯ್ದ ಪಂದ್ಯಗಳನ್ನು ಸ್ಟಾರ್ ಗ್ರೂಪ್ ಕ್ರೀಡಾವಾಹಿನಿ ನೇರ ಪ್ರಸಾರ ಮಾಡಿದ್ದು ಒಂದು ಆಶಾದಾಯಕ ಅಂಶ. ಆದರೆ ಸೆಮಿಫೈನಲ್‌ನಂತಹ ಅತ್ಯಂತ ಮಹತ್ವದ ಪಂದ್ಯಗಳಲ್ಲಿ ಕೆಲ ಅಂಪೈರ್‌ಗಳು ಭಾರಿ ಯಡವಟ್ಟಿನ ತೀರ್ಮಾನ ಕೊಟ್ಟಿದ್ದು ಪಂದ್ಯದ ಗತಿಯ ಮೇಲೆ ಪರಿಣಾಮ ಬೀರಿತು. ದೇಸಿ ಅಂಪೈರಿಂಗ್‌ನ ಮಟ್ಟ ತೀರಾ ಕಳಪೆ ಮಾತ್ರವಲ್ಲ, ಅದು ಅತ್ಯಂತ ಅಪಾಯಕಾರಿ. ಬಿಸಿಸಿಐ ದೇಸಿ ಕ್ರೀಡೆಯಲ್ಲಾದರೂ ಡಿಆರ್‌ಎಸ್ ತಂತ್ರಜ್ಞಾನವನ್ನು ಅಳವಡಿಸಿದರೆ ಮಾತ್ರ ಈ ಅಧ್ವಾನಕ್ಕೆ ಒಂದು ಚಿಕ್ಕ ಅಂಕುಶವಾದರೂ ಬೀಳಬಹುದು. ಆದರೆ ಇಂತಹ 'ಸಣ್ಣಪುಟ್ಟ' ವಿಷಯಕ್ಕೆ ಬಿಸಿಸಿಐನ ಬಾಸ್‌ಗಳು ತಲೆಯೇ ಕೆಡಿಸಿಕೊಳ್ಳಲಾರರು.

ಈ ವರ್ಷದ ಕರ್ನಾಟಕದ ಗೆಲುವು ಕ್ರೀಡಾಪ್ರೇಮಿಗಳು ಮುಂದಿನ ವರ್ಷವನ್ನು ಕುತೂಹಲದಿಂದ ಎದುರು ನೋಡಲು ಸಹಾಯ ಮಾಡಿದೆ.

● ಟಿ.ಅವಿನಾಶ್

## ಬಾಗಲ'ಕೋಟೆ'ಯ...

13 ◀◀

ಅಭಿಪ್ರಾಯ ಸದ್ಯಕ್ಕಂತು ನಿರ್ಣಯವಾಗುವ ಸಾಧ್ಯತೆ ಇಲ್ಲ. ಯಾಕೆಂದರೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಿದರೆ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಂತಾದೀತು ಎಂಬ ಅಳುಕೂ ಜಿಲ್ಲೆಯ ಕೈ ನಾಯಕರಿಗಿದೆ.

ಅಹಿಂದ ವಲಯವನ್ನು ತೃಪ್ತಿಪಡಿಸಲು ಹಿಂದುಳಿದವರಿಗೆ ಟಿಕೆಟ್ ನೀಡಬೇಕೆನ್ನುವ ವಾದದಲ್ಲಿ ಕೇಳಿಬರುತ್ತಿರುವುದು ಸಿದ್ದರಾಮಯ್ಯನವರ ಆಪ್ತ ಜಮಖಂಡಿಯ ಶ್ರೀಶೈಲ ದಳವಾಯಿ ಹೆಸರು. ಕುರುಬ ಸಮುದಾಯಕ್ಕೆ ಸೇರಿದ ದಳವಾಯಿ ಆರ್ಥಿಕವಾಗಿ ಸದೃಢರಾದ ಆಸಾಮಿ. ಮುಧೋಳ, ಜಮಖಂಡಿ ತಾಲ್ಲೂಕುಗಳಲ್ಲಿ ತಮ್ಮದೇ ಆದ ಪ್ರಾಬಲ್ಯ ಹೊಂದಿದ್ದಾರೆ. ಸಿದ್ದರಾಮಯ್ಯನವರ ಒಲವು ಇರುವ ಈತ ಈಗಾಗಲೆ ಲೋಕಸಭೆಯ ಅಭ್ಯರ್ಥಿಯಾಗಲು ಸಕಲ ತಯಾರಿಯನ್ನೂ ನಡೆಸಿಕೊಂಡಿದ್ದಾರೆ. ಹಿಂದುಳಿದ ವರ್ಗಕ್ಕೆ ಟಿಕೆಟ್ ನೀಡುವ ಪ್ರಸಂಗ ಬಂದರೆ ದಳವಾಯಿ ಅಭ್ಯರ್ಥಿಯಾಗಲಿ ಇಲ್ಲವೆ ಮೇಲ್ವರ್ಗಕ್ಕೆ ನೀಡುವುದಾದರೆ ಮೂರು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದು ಸದ್ಯ ಮಾಹಿತಿ ತಂತ್ರಜ್ಞಾನ ಮಂತ್ರಿ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಎಸ್.ಆರ್. ಪಾಟೀಲ್‌ಗೆ ಟಿಕೆಟ್ ನೀಡಿ ಎಂದು ಜಿಲ್ಲೆಯ ಶಾಸಕರೇ ಹೈಕಮಾಂಡ್‌ಗೆ ಸಲಹೆ ನೀಡಿದ್ದಾರೆ ಎನ್ನುವ ಮಾಹಿತಿಯೂ ಇದೆ. ಅದಕ್ಕೆ ಅಹಿಂದ ಒಕ್ಕೂಟ ಕೂಡಾ ಸಮ್ಮತಿಸಿದೆ ಎನ್ನಲಾಗುತ್ತಿದೆ.

ಎಸ್.ಆರ್. ಪಾಟೀಲ್‌ಗೆ ಎಲ್ಲ ಜನಾಂಗದ ಸಂಪರ್ಕ ಇದೆ. ಜೊತೆಗೆ ಉದ್ಯಮದ ಹಣವೂ ಇರುವುದರಿಂದ ಬಂಡಾಯದ ಸಾಧ್ಯತೆಗಳನ್ನು ಮೆಟ್ಟಿ ನಿಲ್ಲಲು ಪಾಟೀಲರೆ ಸೂಕ್ತ ಅಭ್ಯರ್ಥಿ ಎಂದು ಹೈಕಮಾಂಡ್‌ಗೆ ಅನ್ನಿಸಿದರೆ ಅಚ್ಚರಿಯಿಲ್ಲ.

ಇತ್ತ ಅಹಿಂದಾ ಬಂಡಾಯವನ್ನು ಅಸ್ತ್ರವಾಗಿಸಿಕೊಂಡಿರುವ ಆರ್.ಬಿ. ತಿಮ್ಮಾಪೂರರನ್ನು ಸಮಾಧಾನಪಡಿಸಲು ಹೈಕಮಾಂಡ್ ಮತ್ತೊಂದು ತಂತ್ರ ಹೆಣೆದಿದೆ. ಹೇಗೂ ಕಳೆದ ಎಂಎಲ್‌ಎ ಎಲೆಕ್ಷನ್‌ನಲ್ಲಿ ಸೋತಿರುವ ತಿಮ್ಮಾಪೂರಗೆ ಮೀಸಲು ಕ್ಷೇತ್ರವಾದ ಪಕ್ಕದ ಬಿಜಾಪೂರ ಲೋಕಸಭಾ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿ ಬಾಗಲಕೋಟೆಯ ಬಂಡಾಯವನ್ನು ತಣ್ಣಗೆ ಮಾಡುವುದಲ್ಲದೆ ಬಿಜಾಪುರದಲ್ಲಿ ಬಿಜೆಪಿಯ ಹುರಿಯಾಳು ರಮೇಶ್ ಜಿಗಜಿಣಗಿಗೆ ಬಿಸಿ ಮುಟ್ಟಿಸುವ ತಂತ್ರ ಅದು. ಬುರುಡೆ ರಾಜಕೀಯದಲ್ಲಿ ನಿಸ್ಸೀಮರಾದ ರಮೇಶ್ ಜಿಗಜಿಣಗಿಯನ್ನು ತೊಲಗಿಸಿ 'ಬಿಜೆಪಿ ಮುಕ್ತ ಬಿಜಾಪೂರ' ಕಟ್ಟಲು ಸಜ್ಜಾಗಿರುವ ಬಿಜಾಪುರ ಕಾಂಗ್ರೆಸ್ಸಿಗರು ಹೈಕಮಾಂಡ್‌ನ ಈ ನಿರ್ಧಾರವನ್ನು ಕಾತರದಿಂದ ಕಾಯುತ್ತಿದ್ದಾರೆ.


ಲಂಬಾಣಿಗಳೇ ಅತಿಹೆಚ್ಚು ಇರುವ ಕ್ಷೇತ್ರವಿದು. ಹೀಗಿದ್ದರೂ ಕಳೆದ ಬಾರಿ ಅದೇ ಜನಾಂಗದ ಪ್ರಕಾಶ್ ರಾಥೋಡ್ ಕೈ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕೆಲ ಮತಗಳ ಅಂತರದಲ್ಲಿ ಸೋತಿದ್ದಕ್ಕೆ ಎರಡು ಕಾರಣಗಳಿವೆ. ಪ್ರಕಾಶ್ ರಾಥೋಡ್ ವಿಧಾನ ಪರಿಷತ್ ಸದಸ್ಯನಾದ ಮೇಲೆ ಬಿಜಾಪೂರದ ಸಂಪರ್ಕ ಕಡಿದುಕೊಂಡು ಕ್ಷೇತ್ರದ ನಿರ್ಲಕ್ಷ್ಯ ಮಾಡಿದ್ದನೆಂಬ ಆಪಾದನೆ ಒಂದೆಡೆಯಾದರೆ ಆಗ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಆಡಳಿತವಿದ್ದದ್ದೂ ಮತ್ತೊಂದು ಕಾರಣ.

ಆದರೆ ಈ ಬಾರಿ ಪರಿಸ್ಥಿತಿ ಮೊದಲಿನಂತಿಲ್ಲ. ಪ್ರಕಾಶ್ ತನ್ನ ಜನಾಂಗದೊಂದಿಗೆ ಹತ್ತಿರದ ನಂಟು ಉಳಿಸಿಕೊಂಡಿದ್ದಾರೆ. ಅಲ್ಲದೆ ಜಿಗಜಿಣಗಿಯ ಹೆಸರು ಕ್ಷೇತ್ರದಲ್ಲಿ ಸಂಪೂರ್ಣವಾಗಿ ಖರಾಬಾಗಿ ಹೋಗಿದೆ. ಈ ಬಾರಿ ತಿಮ್ಮಾಪೂರನನ್ನು ಗೆಲ್ಲಿಸಿದರೆ ಪ್ರಕಾಶ್ ರಾಥೋಡ್‌ರನ್ನು ವಿಧಾನ ಪರಿಷತ್‌ಗೆ ಕಳಿಸಿಕೊಡುವುದಾಗಿ ಕಾಂಗ್ರೆಸ್ ನಾಯಕರು ವಾಗ್ದಾನ ನೀಡಿದ್ದಾರೆಂಬ ಗಾಳಿಮಾತು ಕೇಳಿಬರುತ್ತಿದೆ. ತಿಮ್ಮಾಪುರರ ಬಿಜಾಪುರ ಎಂಟ್ರಿಗೆ ಯಾವುದೇ ಅಡ್ಡಿ ಇದುವರೆವಿಗೂ ಎದುರಾಗದೆ ಇರುವುದು ಇದನ್ನು ಪುಷ್ಟೀಕರಿಸುವಂತಿದೆ.


ಮೋದಿ ಹವಾದಲ್ಲಿ ತಾನು ಮತ್ತೆ ದೆಹಲಿ ಕಾಣುವೆ ಎಂದುಕೊಂಡಿದ್ದ ಜಿಗಜಿಣಗಿಗೆ ತಿಮ್ಮಾಪೂರ್ ಹೆಸರು ತೇಲಿಬರುತ್ತಿರುವುದು ನುಂಗಲಾರದ ತುತ್ತಾಗಿದೆ. ಇದೇ ಲೆಕ್ಕಾಚಾರ ಸರಿಯಾಗಿ ನಡೆದರೆ ಬಿಜೆಪಿ ಮುಕ್ತ ಬಿಜಾಪೂರ ಆಗೋದರಲ್ಲಿ ಸಂಶಯವೇ ಇಲ್ಲ ಎನ್ನಬಹುದು. ಯಾವುದಕ್ಕೂ ಕೈಪಾಳೆಯದ ಕೊನೇ ಕ್ಷಣದ ಎಣಿಕೆ-ಗುಣಿಕೆಗಳೆ ಉತ್ತರವಾಗಲಿವೆ

● ಮೇಘರಾಜ್










# ರಾಜಕಾರಣಿಗಳಿಗೆ ಛೀಮಾರಿ ಹಾಕಿದ ಆನಂದ್ ಪಟ್ವರ್ಧನ್

ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಸಾಕ್ಷ್ಯಚಿತ್ರ ನಿರ್ದೇಶಕ ಆನಂದ್ ಪಟ್ವರ್ಧನ್ ಅವರಿಗೆ ಇತ್ತೀಚೆಗೆ ಮುಂಬೈಯಲ್ಲಿ 'ವಿ ಶಾಂತಾರಾಮ್ ಜೀವಮಾನ ಸಾಧನೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಪಟ್ವರ್ಧನ್ ಅವರು ಇಲ್ಲಿಯತನಕ ನಗರಗಳಲ್ಲಿ ವಸತಿಹೀನರಾಗಿರುವ ಬಡವರ ಬಗ್ಗೆ, ಕೋಮುವಾದದ ಅಪಾಯಗಳ ಬಗ್ಗೆ, ಪುರುಷಪ್ರಧಾನ ಸಮಾಜದ ಅಂಕುಡೊಂಕುಗಳ ಬಗ್ಗೆ, ನರ್ಮದ ಡ್ಯಾಮ್‌ನಿಂದಾಗುವ ಅಪಾಯಗಳ ಬಗ್ಗೆ, ಅಣು ಬಾಂಬ್‌ಗಳಿಂದಾಗುವ ಅನಾಹುತಗಳ ಬಗ್ಗೆ ಮತ್ತು ದಲಿತರ ಸ್ಥಿತಿಗತಿಗಳ ಬಗ್ಗೆ ಮನಮುಟ್ಟುವ ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸುವ ಮೂಲಕ ತಮ್ಮ ಜನಪರ ನಿಲುವನ್ನು ತೋರಿಸಿದ್ದಾರೆ. ಅಂತಹ ಪಟ್ವರ್ಧನ್ ಅವರು 'ಜೀವಮಾನ ಸಾಧನೆ'ಗೆ ಪ್ರಶಸ್ತಿ ಸ್ವೀಕರಿಸಿದ ಸಮಾರಂಭದಲ್ಲಿ ಮಾಡಿದ ಭಾಷಣದ ಅನುವಾದ ಇಲ್ಲಿದೆ. ಅವತ್ತು ಅವರು ಆಡಿರುವ ಮಾತುಗಳು ನಮ್ಮ ದೇಶದ ನಾಯಕರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನೀತಿಗಳು ಅದೆಷ್ಟು ಜನದ್ರೋಹಿ ಆಗಿವೆ ಎಂಬುದನ್ನು ಎತ್ತಿ ತೋರಿಸುತ್ತದೆ.



ಈ ಸಂಜೆ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸುವ ಹೊತ್ತು ನನ್ನೊಳಗೆ ಸಮ್ಮಿಶ್ರ ಭಾವಗಳಿವೆ. ನನ್ನ ಕೆಲಸ ಗುರುತಿಸಿದ್ದಕ್ಕೆ ಸಹಜವಾಗಿಯೇ ಸಂತೋಷ ಆಗಿದೆ. ಈ ಸಾಧನೆಗಾಗಿ ನನ್ನೊಂದಿಗೆ ಕೈ ಜೋಡಿಸಿದವರ ಶ್ರಮವನ್ನು ಕೂಡ ನಾನಿಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಾನು ಅದೃಷ್ಟವಂತ. ಸದಾ ನನ್ನ ಬೆಂಬಲಕ್ಕೆ ನಿಂತ ನನ್ನ ತಂದೆತಾಯಿ, ಕುಟುಂಬ ಮತ್ತು ಗೆಳೆಯರನ್ನು ಪಡೆದಿರುವ ನಾನು ಅದೃಷ್ಟವಂತ. ನಮ್ಮ ಕೆಲಸವನ್ನು ಅಧಿಕಾರದಲ್ಲಿದ್ದವರು ಕೆಂಗಣ್ಣಿನಿಂದ ನೋಡುತ್ತಿದ್ದಾಗ, ಸಿನಿಮಾ ಮಾರುಕಟ್ಟೆ ನಿರ್ಲಕ್ಷಿಸುತ್ತಿದ್ದಾಗ ಒಂದಿಷ್ಟೂ ಕುಸುರಿಲ್ಲದೇ ಸತತವಾಗಿ ನನ್ನ ಬೆಂಬಲಕ್ಕೆ ನಿಂತವರು ಇವರು. ಅಷ್ಟೇ ಅಲ್ಲ, ವಿರೋಧದ ನಡುವೆಯೂ ನನ್ನ ಸಿನಿಮಾಗಳು ಇಲ್ಲಿ ಮತ್ತು ವಿದೇಶದಲ್ಲಿ ಮಾನ್ಯತೆ ಪಡೆದದ್ದಕ್ಕೂ ನಾನು ಅದೃಷ್ಟವಂತ.

ಆದರೂ ನನ್ನೊಳಗೆ ಸಮಿಶ್ರ ಭಾವ ಇರುವುದಕ್ಕೆ ಕಾರಣ: ನನ್ನ ಸಿನಿಮಾಗಳು ಪ್ರತಿಪಾದಿಸುವ ಸಂಗತಿಗಳು ಮತ್ತು ಅಂತಹ ಸಂಗತಿಗಳಿಗೆ ತನ್ನ ಜೀವವನ್ನೇ ಪಣ ತೊಟ್ಟು ನಿಂತವರು ಇಲ್ಲದಿದ್ದರೆ ನನ್ನ ಸಿನಿಮಾಗಳು ನಗಣ್ಯ. ಆದರೆ ನನ್ನ ಸಿನಿಮಾಗಳು ಪ್ರತಿಪಾದಿಸುವ ವಿಷಯಗಳು ನಿಜಕ್ಕೂ ಜನರಲ್ಲಿ ಬದಲಾವಣೆಗೆ ಕಾರಣ ಆಗಿವೆಯೇ ಎಂದರೆ, ಅದು ತೀರಾ ಅತ್ಯಲ್ಪ ಎಂದೇ ಹೇಳಬೇಕಾಗುತ್ತದೆ.


ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡುವುದಾದರೆ:

1978ರಲ್ಲಿ ಪೂರ್ಣಗೊಂಡ 'ಪ್ರಿಸನರ್ಸ್ ಆಫ್ ಕಾನ್ಷನ್ಸ್' ಸ್ವತಂತ್ರ ಭಾರತದಲ್ಲಿ ರಾಜಕೀಯ ಬಂಧಿತರನ್ನು ಕುರಿತದ್ದು. ವಿಚಾರಣೆ ನಡೆಯದೆ ವರ್ಷಗಳೇ ಕಳೆದಿದ್ದರೂ ರಾಜಕೀಯ ಬಂಧಿತರಿಗೆ ಜಾಮೀನು ಕೂಡ ಸಿಗುವುದಿಲ್ಲ. ಈ ಕಾರಣಕ್ಕೆ ನಮ್ಮ ಜೈಲುಗಳಲ್ಲಿ ದಿನೇದಿನೇ ಬಂಧಿತರ ಸಂಖ್ಯೆ ಏರುತ್ತಲೇ ಇದೆ. ನಾನು ಇಲ್ಲಿ ಈ ಮಾತುಗಳನ್ನು ಹೇಳುತ್ತಿರುವಾಗಲೇ ಜಾಮೀನು ನಿರಾಕರಣೆಯ ವಿರುದ್ಧ ಹಲವಾರು ಬಂಧಿತರು ಉಪವಾಸ ಸತ್ಯಾಗ್ರಹದಲ್ಲಿ ತೊಡಗಿದ್ದಾರೆ.

'ಬಾಂಬೆ ಅವರ್ ಸಿಟಿ' ಸಿನಿಮಾ ಪೂರ್ಣಗೊಂಡಿದ್ದು 1985ರಲ್ಲಿ. ಮನೆ ಇಲ್ಲದವರ ತಾತ್ಕಾಲಿಕ ವಸತಿಗಳನ್ನೂ ನಾಶಗೊಳಿಸುವ ಅಮಾನುಷ ಕ್ರಮವೇ ಈ ಚಿತ್ರದ ವಸ್ತು. ಇವತ್ತಿಗೂ ಇಂಥ ವಿನಾಶ ನಡೆಯುತ್ತಲೇ ಇದೆ. ನಮ್ಮ ಅಭಿವೃದ್ಧಿಯ ಅಸಂಗತತೆಯ ಪರಿಣಾಮವಾದ ವಲಸೆ ಮತ್ತು ನಗರಗಳಲ್ಲಿ ಹೆಚ್ಚುತ್ತಿರುವ ಬಡವರ ಸಂಖ್ಯೆಗೆ ಕಾರಣಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಬಡವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರವೃತ್ತಿ ಇವತ್ತಿಗೂ ನಿರಂತರವಾಗಿ ಮುಂದುವರಿದಿದೆ.

'ಇನ್ ಮೆಮರಿ ಆಫ್ ಫ್ರೆಂಡ್ಸ್' 1990ರಲ್ಲಿ ತಯಾರಾದರೆ, 'ರಾಮ್ ಕೆ ನಾಮ್' 1992ರಲ್ಲಿ ತಯಾರಾಯಿತು. ಇದೇ ಚಿತ್ರಕ್ಕೆ 'ಇನ್ ದಿ ನೇಮ್ ಆಫ್ ಗಾಡ್' ಎಂಬ ಇಂಗ್ಲಿಷ್ ಹೆಸರೂ ಇಡಲಾಗಿತ್ತು. ಇವೆರಡೂ ನಮ್ಮಲ್ಲಿ ಏರುಮುಖವಾಗಿರುವ ಧರ್ಮ ಮತ್ತು ಪ್ರತ್ಯೇಕತೆಯ ಹೆಸರಲ್ಲಿ ನಡೆಯುವ ಹಿಂಸೆ ಕುರಿತದ್ದು. ನಾವಿಂದು ಪ್ರತ್ಯೇಕತಾವಾದದ ಅತಿರೇಕದ ಅಂಚಿಗೆ ಬಂದು ನಿಂತು ಮತ್ತೊಮ್ಮೆ ಮಹಾತ್ಮ ಗಾಂಧಿ ಅವರನ್ನು ಕೊಲೆಗೈದ, ಬಾಬರಿ ಮಸೀದಿ ಕೆಡವಿದ, ಅಲ್ಪಸಂಖ್ಯಾತರ ಹತ್ಯೆಯಲ್ಲಿ ಪಾಲುದಾರರಾಗಿದ್ದ ಅಥವಾ ಅವರನ್ನು ಬೆಂಬಲಿಸುವ ಮನಃಸ್ಥಿತಿಯ ಜನರನ್ನು ಅಧಿಕಾರಕ್ಕೆ ತರುವ ಹಂತದಲ್ಲಿ ಇದ್ದೇವೆ. ಇಂತಹ ಸಂದರ್ಭದಲ್ಲಿ ಹಲ್ಲೆಗೆ ಒಳಗಾದವರು, ನ್ಯಾಯ ಸಿಗದವರು ಪ್ರತೀಕಾರಕ್ಕೆ, ಪ್ರತಿಹಿಂಸೆಗೆ ಸಜ್ಜಾಗುವ ವಾತಾವರಣ ಸೃಷ್ಟಿ ಆಗಿದೆ.

'ಫಾದರ್, ಸನ್ ಅಂಡ್ ಹೋಲಿ ವಾರ್' 1995ರಲ್ಲಿ ತಯಾರಾದ ಚಿತ್ರ. ಇದು ನಮ್ಮ ಪುರುಷ ಪ್ರಧಾನ ವ್ಯವಸ್ಥೆ ಮತ್ತು ಅದರಿಂದ ಹುಟ್ಟಿಕೊಳ್ಳುವ




ಪುರುಷ ಪ್ರಭುತ್ವ ಮತ್ತು ಧಾರ್ಮಿಕ ಹಿಂಸೆಯ ನಡುವಣ ಸಂಬಂಧ ಕುರಿತದ್ದು. ಈ ಹೊತ್ತು ನಾವು ಮಹಿಳೆಯರ ಮೇಲಿನ ಹಲ್ಲೆ, ಸಾಮೂಹಿಕ ಅತ್ಯಾಚಾರ ಒಳಗೊಂಡ ಕೋಮು ಘರ್ಷಣೆ ಮತ್ತು ಪುರುಷ ಪ್ರಭುತ್ವ ಮೆರೆಸುವ ಸಂಸ್ಕೃತಿಯ ವಿಜೃಂಭಣೆ ಕಾಣುತ್ತಿದ್ದೇವೆ. ಈ ದಿನಗಳಲ್ಲಿ 2002ರ ಗಲಭೆಯನ್ನು ಮರೆಮಾಚಿ ತನ್ನ 56 ಅಂಗುಲದ ಎದೆ ಅಳತೆಯನ್ನು ಹೆಮ್ಮೆಯಿಂದ ಸಾರ್ವಜನಿಕವಾಗಿ ಪ್ರದರ್ಶಿಸುವ ಪ್ರಧಾನಿ ಅಭ್ಯರ್ಥಿಯನ್ನು ಇಡೀ ಕಾರ್ಪೊರೇಟ್ ಜಗತ್ತು ಮತ್ತು ಪೂರ್ವಗ್ರಹಪೀಡಿತ ಮಾಧ್ಯಮ ಸಂಪೂರ್ಣವಾಗಿ ಒಪ್ಪಿ ಕ್ಷಮಿಸಿಬಿಟ್ಟಿವೆ.

'ಎ ನರ್ಮದಾ ಡೈರಿ' ಚಿತ್ರ ತಯಾರಾಗಿದ್ದು 1995ರಲ್ಲಿ. ಬೃಹತ್ ಸರ್ದಾರ್ ಸರೋವರ ಅಣೆಕಟ್ಟು ನಿರ್ಮಾಣದಿಂದಾಗಿ ಉಂಟಾದ ವಿನಾಶ ಹಾಗು ಜನರ ಒಕ್ಕಲೆಬ್ಬಿಸುವ ನೀತಿ, ಅದನ್ನು ವಿರೋಧಿಸುವ ಅಗಾಧ ಜನಪರ ಚಳವಳಿ, ಈ ಹಿನ್ನೆಲೆಯಲ್ಲಿ ಯೋಜನೆಗೆ ವಿಶ್ವ ಬ್ಯಾಂಕ್ ಧನಸಹಾಯ ನಿಲ್ಲಿಸಿದ್ದು ಈ ಚಿತ್ರದ ವಸ್ತು. ಇದೆಲ್ಲದರ ನಡುವೆಯೂ ಅಣೆಕಟ್ಟು ಹೆಚ್ಚೂ ಕಡಿಮೆ ಪೂರ್ಣಗೊಂಡಿದ್ದು, ಇಲ್ಲಿ ಸಂಗ್ರಹವಾಗಿರುವ ನೀರನ್ನು ಬರಪೀಡಿತ ಪ್ರದೇಶಗಳಿಗೆ ಒದಗಿಸುವ ಬದಲು ವಿದ್ಯುತ್ ಪಂಪ್‌ಗಳ ಮೂಲಕ ನೀರೆತ್ತಿ ಜಲೋದ್ಯಾನ, ಶ್ರೀಮಂತರ ಮನೆಯಂಗಳದ ಗಿಡಗಳಿಗೆ ನೀರುಣಿಸಲು ಗುಜರಾತ್‌ನ ಪಟ್ಟಣ ಪ್ರದೇಶಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

'ವಾರ್ ಅಂಡ್ ಪೀಸ್' ನಿರ್ಮಾಣ ಆದದ್ದು 2002ರಲ್ಲಿ. ಭಾರತ ಕುಪ್ರಸಿದ್ಧ ನ್ಯೂಕ್ಲಿಯರ್ ಕ್ಲಬ್ ಸದಸ್ಯತ್ವ ಪಡೆಯಲು ತಾನೂ ಅಣ್ವಸ್ತ್ರ ಸಜ್ಜಿತರಾಷ್ಟ್ರ ಎನಿಸಿಕೊಂಡ ವಿಷಾದಕರ ತೀರ್ಮಾನ ಕುರಿತದ್ದು. ಇದಕ್ಕೆ ಪ್ರತಿಕ್ರಿಯೆಯಾಗಿ ಪಾಕಿಸ್ತಾನವೂ ತಾನೇನೂ ಕಡಿಮೆ ಅಲ್ಲ ಎಂದು ಸಾಧಿಸಿದ ಪರಿಣಾಮ ಇಡೀ ಪ್ರದೇಶ ಅಣ್ವಸ್ತ್ರ ಅಭದ್ರತೆ ಮತ್ತು ಅನಿಶ್ಚಯಕ್ಕೆ ಸಿಕ್ಕಿ ತೊಳಲುವಂತಾಗಿದೆ. ನಿರ್ಗಮಿಸಲಿರುವ ಪ್ರಧಾನಿಯವರು ತಮ್ಮ ಸಾಧನೆಯ ಪಟ್ಟಿ ಮಾಡುತ್ತ; ಅಮೆರಿಕದ ಜೊತೆ ನ್ಯುಕ್ಲಿಯರ್ ಒಪ್ಪಂದ ಮಾಡಿಕೊಂಡ ಪರಿಣಾಮವಾಗಿ ಭಾರತ ನಿಷೇಧಿತ ರಾಷ್ಟ್ರಗಳ ಪಟ್ಟಿಯಿಂದ ಹೊರಬಂದದ್ದು ದೊಡ್ಡ ಸಾಧ… ಎಂದು ಹೇಳುತ್ತಿದ್ದಾರೆ. ಇದರ ಪರಿಣಾಮ ಎಂದರೆ ನಮ್ಮ ದೇಶದ ಉದ್ದಗಲಕ… ಅಣು ಸ್ಥಾವರಗಳನ್ನು ಹೆಚ್ಚಿಸುವ ಕಾರ್ಯಕ್ಕೆ ಸಿಕ್ಕ ಪುಷ್ಟಿ ಮಾತ್ರ. ಫುಕೋಶಿಮ… ದುರಂತದ ನಂತರ ಇಡೀ ಜಗತ್ತು ಅಣು ಸ್ಥಾವರಗಳು ಸುರಕ್ಷಿತ ಅಲ್ಲ ಮ… ಅವು ಕಾರ್ಯಸಾಧುವೂ ಅಲ್ಲ ಎಂದು ಎಚ್ಚರಗೊಳ್ಳುತ್ತಿರುವ ಸಮಯದ… ನಮ್ಮ ಸುನಾಮಿ ಸಂಭವನೀಯ ವಲಯ ಎನಿಸಿದ ಕರಾವಳಿ ತೀರದ… ಅಣುಸ್ಥಾವರಗಳನ್ನು ಸ್ಥಾಪಿಸಲು ಚೆರ್ನೋಬೈಲ್‌ನಿಂದ ಸೆಕೆಂಡ್ ಹ್ಯಾಂ… ಸಾಮಗ್ರಿಗಳನ್ನು ಕೊಳ್ಳಲು ನಾವು ಉತ್ಸುಕರಾಗಿದ್ದೇವೆ.

2012ರಲ್ಲಿ ತಯಾರಾದ 'ಜೈ ಭೀಮ್ ಕಾಮ್ರೇಡ್' ಸಾವಿರಾರು ವರ್ಷಗಳಿ… ವಿದ್ಯೆಯಿಂದ ವಂಚಿತರಾಗಿ, ಅಸ್ಪೃಶ್ಯರು ಎಂದು ಕರೆಸಿಕೊಂಡು ದೇಹ ಶ್ರಮ… ಕೆಲಸಗಳನ್ನೇ ಮಾಡುತ್ತ ಇರಬೇಕಾಗಿ ಬಂದ ಜನರ ಪ್ರತಿಭಟನೆಯ ಹಾಡುಗಳ… ಕುರಿತದ್ದು. ಸರ್ಕಾರದ ಅಧಿಕೃತ ದಾಖಲೆಗಳೇ ತಿಳಿಸುವಂತೆ ಪ್ರತಿನಿತ್ಯ … ದೇಶದ ಒಂದಲ್ಲ ಒಂದು ಕಡೆ ಇಬ್ಬರು ದಲಿತರ ಹತ್ಯೆ, ಮೂವರು ದಲಿ… ಹೆಣ್ಣುಗಳ ಮೇಲೆ ಅತ್ಯಾಚಾರ ನಡೆಯುತ್ತಿದೆ. ನಮ್ಮ ಸಿನಿಮಾದಲ್ಲಿ … ದೌರ್ಜನ್ಯಗಳನ್ನು ಪ್ರತಿಭಟಿಸಿದ ಹಲವು ಗುಂಪುಗಳಲ್ಲಿ ಕಬೀರ್ ಕಲಾಮಂ… ಕೂಡ ಒಂದು. ಸಿನಿಮಾ ಮುಗಿಯುವ ಹೊತ್ತಿಗೆ ಪೊಲೀಸರು ಕಬೀರ್ ಕ… ಮಂಚ್ ಮಾವೋವಾದಿ ನಕ್ಸಲರ ಗುಂಪು ಎಂದು ಹಣೆಪಟ್ಟಿ ಹಚ್ಚಿ… ಕಾರಣ ಅದರ ಎಲ್ಲ ಸದಸ್ಯರೂ ತಲೆ ಮರೆಸಿಕೊಳ್ಳುವ ಪರಿಸ್ಥಿತಿ ಉದ್ಭ… ಆಯಿತು. ಎಂಐಎಫ್ ಸೇರಿದಂತೆ ಹಲವು ಅಂತಾರಾಷ್ಟ್ರೀಯ ಚಿತ್ರೋತ್ಸವಗಳ… 'ಜೈ ಭೀಮ್ ಕಾಮ್ರೇಡ್' ಪ್ರಶಸ್ತಿ ಪಡೆದಿದ್ದು ಅಲ್ಲದೆ, ಎಲ್ಲ ಕಡೆ ಸಿನಿ… ಕುರಿತಂತೆ ವ್ಯಾಪಕ ಪ್ರಶಂಸೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಾವು ಕಬೀರ್ ಕ… ಮಂಚ್ ಹಿತರಕ್ಷಣಾ ಸಮಿತಿ ರಚಿಸಬೇಕಾಯಿತು. ಇದರಿಂದ ತ… ಮರೆಸಿಕೊಂಡಿದ್ದವರು ಮತ್ತೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಂತಾಯಿ… ಅವರೆಲ್ಲ ಅಹಿಂಸಾತ್ಮಕವಾಗಿ ಮಹಾರಾಷ್ಟ್ರದ ವಿಧಾನ ಸಭೆ ಎದುರು ಹಾಡು…




ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದ ಕಾರಣ ಬಂಧನಕ್ಕೆ ಒಳಗಾದರು. ಹೈಕೋರ್ಟ… ಆದೇಶದ ಅನ್ವಯ ಅವರಲ್ಲಿ ಮೂವರು ಜಾಮೀನು ಪಡೆಯಲು ಸಾ… ಆಯಿತು. ಆದರೆ ಉಳಿದ ಬಂಧಿತರು ಇನ್ನೂ ಜೈಲಲ್ಲೇ ಇದ್ದಾರೆ. ಹ… ಬಂಧಿತರಾದವರೆಲ್ಲ ಜನತಂತ್ರದಲ್ಲಿ ನಂಬಿಕೆ ಇರಿಸಿ ತಾವಾಗಿಯೇ ಬಂಧನ… ಒಪ್ಪಿಸಿಕೊಂಡವರು. ಅವರಲ್ಲಿದ್ದ ಆಯುಧ ಎಂದರೆ ಹಾಡುಗಳು ಮಾ… ಹೀಗಿರುವಾಗ ಇವತ್ತು ನಿಜವಾಗಿ ಕಟಕಟೆಯಲ್ಲಿ ನಿಲ್ಲಬೇಕಾದುದು ನ… ರಾಜಕೀಯ ಮತ್ತು ನ್ಯಾಯಾಂಗ ವ್ಯವಸ್ಥೆ ಅಲ್ಲವೇ!

ಹೀಗಾಗಿಯೇ ನನ್ನೊಳಗೆ ಸಮಿಶ್ರ ಭಾವಗಳು ಇವೆ. ಇದೆಲ್ಲದರ ಜೊತೆ… ಕಟು ಮಧುರ ಎಂಬಂತೆ; ನನ್ನ ಸಾಧನೆಗೆ ಬೆಂಬಲ ನೀಡಿದ್ದ ನನ್ನ ತಂ… ಮತ್ತು ತಾಯಿ ಈಗಿಲ್ಲ. ಹಾಗೆಯೇ ನನ್ನ ಚಿತ್ರಗಳಲ್ಲಿ ಕೇಂದ್ರ ಪಾತ್ರಗಳಾಗಿ… ಪೂಜಾರಿ ಲಾಲ್‌ದಾಸ್, ಜೈಮಲ್ ಸಿಂಗ್ ಪಡ್ಡಾ ಮತ್ತು ಶಾಹಿರ್ ವಿಲಾ… ಘೋಗ್ರೆ ಅವರಂಥ ಹಲವರೂ ಇಂದು ನಮ್ಮೊಡನೆ ಇಲ್ಲ. ಇವರೆಲ್ಲ ತಾ… ನಂಬಿಕೊಂಡ ವಿಚಾರಗಳಿಗಾಗಿ ಜೀವನವನ್ನೇ ತೆತ್ತವರು. ಈ ಸಿನಿಮಾ ನಿರ್ದೇಶ… ಸುದೀರ್ಘ ಪಯಣದಲ್ಲಿ ನನಗೆ ಅತ್ಯಂತ ಪ್ರಿಯರಾಗಿದ್ದ ಪರ್ವೇಜ್ ಮೇರ್ವಾಂಜಿ… ಶರತ್ಚಂದ್ರನ್, ತಾರಕ್ ಮಸೂದ್ ಮತ್ತು ಇತ್ತೀಚೆಗೆ ಪೀಟರ್ ವಿಂಟಾನಿ… ಕೂಡ ನಮ್ಮನ್ನು ಅಗಲಿದ್ದಾರೆ.

ನಿಮ್ಮ ಸಮಯ ಹೆಚ್ಚಾಗಿ ತೆಗೆದುಕೊಂಡಿದ್ದಕ್ಕೆ ಕ್ಷಮೆ ಇರಲಿ. ನನ್ನ ಸಿನಿಮಾಗ… ಅದರ ಮೂಲಕ ಇನ್ನಿತರರ ಶ್ರಮ ಗುರುತಿಸಿದ್ದಕ್ಕೆ ಕೃತಜ್ಞ. ಇಂತಹ ಪ್ರಶಸ್ತಿಗಳಿಂ… ನಮ್ಮ ಕೃತಿಗಳು ಮತ್ತು ಕೃತಿಯ ಹಿಂದಿನ ಉದ್ದೇಶ ಇನ್ನಷ್ಟು ಢಾ… ಗೋಚರಿಸುತ್ತದೆ ಎಂದು ಭಾವಿಸಿದ್ದೇನೆ. ಹಾಗೆ ದೊಡ್ಡ ಪ್ರಮಾಣದಲ್ಲಿ ಆದ… ಬದಲಾವಣೆ ಬರುತ್ತದೆ ಎಂಬ ವಿಶ್ವಾಸ ನನಗಿದೆ. ವಂದನೆಗಳು.

ಆನಂದ ಪಟ್ವರ್ಧನ್, ಮುಂಬಯಿ, 3 ಫೆಬ್ರವರಿ, 201…

ಕನ್ನಡಕ್ಕೆ: ನಾರಾಯಣ್. …

ಯೋಗೇಶ್ ಮಾಸ್ಟರ್ ಪುರಾಣದ ಹೂರಣ

# ಮದ್ದಿನ ಗೌರಮ್ಮ: ದೇವಿಗಳಾಗುವ ತಾಯಂದಿರು

## ಗಿಡ್ಡಮ್ಮ ಮತ್ತು ಲಕ್ಷ್ಮಮ್ಮ

ರಾಸನದ ಸಮೀಪದ ಮಳಲಿಯಲ್ಲಿ ಮಳಲಿ ಗಿಡ್ಡಮ್ಮನ ದೇವಸ್ಥಾನವಿದೆ. ಡ್ಡಮ್ಮನ ದೇವಸ್ಥಾನದಲ್ಲಿ ಮಾಂಸವೇ ನೈವೇದ್ಯ. ಹಂದಿಯ ಬಾಡನ್ನೂ ಗೆ ಇಡುತ್ತಾರೆ. ಕೋಳಿಯನ್ನೂ ಕುಯ್ಯುತ್ತಾರೆ. ಅದು ಈಗೀಗ ಮೆಲ್ಲನೆ ಎಂಬ ಹೆಸರನ್ನು ಕಳೆದುಕೊಂಡು ಮಳಲಿ ಲಕ್ಷ್ಮೀದೇವಿಯಾಗಿ ರ್ಪಡಾಗುತ್ತಿದ್ದಾಳೆ. ಜನಪದರ ಮೂಲ ಸಂಸ್ಕೃತಿಯು ವೈದಿಕ ಸಂಸ್ಕೃತಿಯ ತೆಕ್ಕೆ ಸಿಕ್ಕು ತನ್ನ ಮೂಲದ ಘಮಲನ್ನು ಮರೆಯುವ ಪರಿಯಿದು. ದ ಎಷ್ಟೋ ಹೆಸರುಗಳನ್ನು ಕೆಲವರು ಸಂಕೋಚದಿಂದಲೋ ಅಥವಾ ಸಮಾಜದ ಶಿಷ್ಟತೆಯಲ್ಲಿ ಗುರುತಿಸಿಕೊಳ್ಳಲೋ ಬದಲಿಸಿಬಿಡುತ್ತಾರೆ. ಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಪ್ರವೇಶಿಸಿದ ರಾಮಾನುಜರ ವದಿಂದಾಗಿ ಸುತ್ತಮುತ್ತಲಿನ ಗ್ರಾಮದೇವಿಯರೆಲ್ಲಾ ಲಕ್ಷ್ಮೀದೇವಿಗಳಾಗಿ ರ್ಪಟು ಹೊಂದಿದರು.

ಜಾ ಪ್ರತ್ಯಕ್ಷ ದೈವತಾ ಎಂದು ನಂಬಿದ್ದ ಅಥವಾ ತಮ್ಮ ಅನುಕೂಲಕ್ಕಾಗಿ ನ್ನು ನಂಬಿಸಿದ ವೈದಿಕ ಬ್ರಾಹ್ಮಣರು ಸ್ಥಳೀಯ ರಾಜರ ವಿಗ್ರಹಗಳಿಗೂ ತ್ವವನ್ನು, ಅದರಲ್ಲೂ ವಿಷ್ಣುತ್ವವನ್ನು ಆರೋಪಿಸಿ ದೇವರನ್ನಾಗಿಸಿ, ಮನ್ನಾಗಿಸಿ ತಮ್ಮ ಪೌರೋಹಿತ್ಯದ ವೃತ್ತಿಯನ್ನು ಗಟ್ಟಿಗೊಳಿಸಿಕೊಂಡರು ತಾವು ಶ್ರೀಮಂತರಾದರು. ತಿಮ್ಮರಾಯ, ವರದರಾಯ, ಚೆಲುವಯ್ಯ ಸ್ಥಳೀಯ ನಾಯಕರ ವಿಗ್ರಹಗಳೆಲ್ಲವೂ ಕಾಲಾಂತರದಲ್ಲಿ ವಿಷ್ಣುವಿನ ರ್ತಿಗಳಾದವು.

ಅದೇ ರೀತಿಯಲ್ಲಿ ಮಲೆಯ ಮಾದೇಶ್ವರನಾಗಲಿ, ಎಡೆಯೂರಿನ ಂಗೇಶ್ವರನಾಗಲಿ, ಇನ್ಯಾವುದೇ ಶೈವ ಸಂಪ್ರದಾಯದೊಳಗೆ ಗುರುತಿಸಲಾಗುವ ಗಳಿಗೆಲ್ಲಾ ನೇರವಾದ ಕೈಲಾಸದ ಶಿವನ ಮೂಲಕ್ಕೆ ಎಂತಾದರೂ ಒಯ್ದು ಅವತಾರವನ್ನಾಗಿ ಅಥವಾ ಕೈಲಾಸದ ಗಣಕ್ಕೆ ಸಂಬಂಧಿಸಿದ ಅವತಾರವನ್ನಾಗಿ ಸುವುದು ಬಹಳ ಹಳೆಯ ತಂತ್ರ. ಇದು ತಮ್ಮ ನೆಚ್ಚಿನ ಪಾತ್ರವನ್ನು ಾನ್ಯವೆಂದು ನಂಬಿಸಲಲ್ಲದೇ, ದೈವತ್ವವನ್ನು ಆರೋಪಿಸುವುದರಿಂದ ಅವರ ಗೆ ಸಾಮಾನ್ಯರಾರೂ ಬರಲಾರರು ಎಂಬುದೂ ಹೌದು.

ಗೊರವನಹಳ್ಳಿಯಲ್ಲಿ ತನ್ನ ಪಾಡಿಗೆ ತಾನಿದ್ದ ಮುಗ್ಧ ವೃದ್ಧೆಗೆ ಲಕ್ಷ್ಮೀದೇವಿಯ ಟಾಕ್ಷವನ್ನು ಕೊಡಿಸಿದ ಬಹಳ ಇತ್ತೀಚಿನ ವಿದ್ಯಮಾನವು ನಾವು ಕಂಡಿರುವುದೇ. ಗೊರವನಹಳ್ಳಿಗೆ ಭಕ್ತರಾಗಿ ಬಂದವರು ತಮ್ಮ ವೈಯಕ್ತಿಕ ಅನುಭವಗಳನ್ನೆಲ್ಲಾ ರ ಶ್ರದ್ಧಾನಂಬುಗೆಗಳಿಗೆ ದಾಟಿಸಿ ಇಂದು ಅದೊಂದು ಹೆಸರಾಂತ ಕ್ಷೇತ್ರವಾಗಿದೆ. ಇತ್ತೀಚೆಗೆ ನಿಧನರಾದ ಆ ವೃದ್ಧೆಯು ತನ್ನ ಮನೆಯೊಂದು ಹದೊಂದು ಕ್ಷೇತ್ರವಾದೀತೆಂದು ಖಂಡಿತ ಎಂದಿಗೂ ಊಹಿಸಿರಲಿಲ್ಲ.

## ತಿಕ್ಕ ಶಂಕರಯ್ಯ

ಕೋಲಾರದ ಹಳ್ಳಿಯೊಂದರಲ್ಲಿ ತಿಕ್ಕ ಶಂಕರಯ್ಯನ ಪವಾಡದ ದಿನಗಳು ಸಣ್ಣವರಾಗಿದ್ದಾಗ ಬಹು ವ್ಯಾಪಕವಾಗಿತ್ತು. ಸಾಮಾನ್ಯ ಹುಚ್ಚನಾಗಿದ್ದು



ಾಡಿಕೊಂಡಿದ್ದ ಶಂಕರಯ್ಯನೆಂಬ ವ್ಯಕ್ತಿಯು ತೀರಿಹೋದಾಗ ಊರಿನವರು ಕದಿಂದ ಅವನ ಶವಸಂಸ್ಕಾರ ಮಾಡಿದರು. ಆ ಸಮಾಧಿಯ ಬಳಿಗೆ ದ್ದ ಅಪರಿಚಿತ ವ್ಯಕ್ತಿಯೊಬ್ಬನು ತನಗೆ ಅಲ್ಲಿ ದಿವ್ಯ ದರ್ಶನವಾಯಿತೆಂದು ದ್ದಲ್ಲದೇ, ಅವನ ದೆವ್ವ (ಹುಚ್ಚು) ಹಿಡಿದ ಸಂಬಂಧಿಯೊಬ್ಬ ಆ ಸಮಾಧಿಯ ಧ್ಯದಿಂದ ಸರಿಹೋದನೆಂದು ಹೇಳಿದ ಕೂಡಲೇ, ರಾತ್ರೋ ರಾತ್ರಿ ಖ್ಯಾತಿ ಂದಿದ ಆ ಸಮಾಧಿಯು ಕೂಡಲೇ ಮಂದಿರವನ್ನು ಕಂಡಿತು. ಸ್ಪೆಷಲ್ ಗಳನ್ನು ಹೊಂದಿತು. ದೆವ್ವ ಹಿಡಿದವರನ್ನೆಲ್ಲಾ ಅಲ್ಲಿಗೆ ಕರೆದೊಯ್ಯುವುದು ರೀತಿಯಾಯಿತು. ಅಲ್ಲಿ ದೆವ್ವ ಹಿಡಿದಿರುವವರ ಕೂದಲನ್ನು ಕಿತ್ತು, ಅಲ್ಲಿಯೇ ಮರವೊಂದಕ್ಕೆ ಮೊಳೆ ಹೊಡೆದರೆ ದೆವ್ವ ಬಿಡುವುದಾಗಿ ನಂಬಲಾಗಿತ್ತು. ತಿಯೇ ಅದರ ವೈಭವ ಮತ್ತು ಸತ್ಯವನ್ನು ಸಾರುವಂತಹ ಅನೇಕ ಪುಸ್ತಕಗಳೂ ಂಗಡೆಯಾಗಿ ಎಲ್ಲೆಡೆ ಪ್ರಚಾರ ಮಾಡಲಾಗುತ್ತಿತ್ತು.


ಹೀಗೆ, ಸಾಮಾನ್ಯ ವ್ಯಕ್ತಿಯೊಬ್ಬನ ಸಮಾಧಿ ಅಥವಾ ಯಾವುದೋ ಆತನ ವಾ ಆಕೆಯ ವಸ್ತುವನ್ನು ಕೇಂದ್ರವಾಗಿಟ್ಟುಕೊಂಡು ನಾನಾ ರೀತಿಯ ಶ್ರದ್ಧಾ ಬುಗೆಯ ಪರಂಪರೆಗಳು ಹುಟ್ಟಿಕೊಳ್ಳುತ್ತವೆ ಮತ್ತು ಬರಬರುತ್ತಾ ತಮ್ಮ ಮೂಲದ ಕಥೆಯನ್ನೇ ಮರೆತು ಬರಿಯ ಸಂಪ್ರದಾಯವಾಗಿ ಉಳಿಯುತ್ತವೆ.


## ಮದ್ದಿನ ಗೌರಮ್ಮ

ತಮಿಳುನಾಡು ಮತ್ತು ಕರ್ನಾಟಕದ ಗಡಿಯಾದ ಹೊಸೂರಿನ ಸಮೀಪ ಿಗಿ ಜಿಲ್ಲೆಯಲ್ಲಿ ತ್ಯಾಗದುರ್ಗವೆಂಬ ಹಳ್ಳಿ. ನಮ್ಮ ಸಂಬಂಧಿಗಳು ನೆಲೆಸಿದ್ದ ಊರು ಸಾಂಸ್ಕೃತಿಕವಾಗಿ ಬಹಳ ಕುತೂಹಲಭರಿತವಾಗಿರುವುದು. ತಮಿಳು ಭಾಷೆಯನಾದರೂ ತೆಲುಗನ್ನು ವಾಡಿಕೆಯಲ್ಲಿರುವಂತೆ ಮಾತಾಡುತ್ತಾರೆ. ಹಿಂದೆಲ್ಲಿ ಕನ್ನಡಿಗರೇ ಆಗಿದ್ದು, ಬಹುಪಾಲು ಜನರ ಮನೆ ಮಾತು ಕನ್ನಡ. ಈ ಊರಿನಲ್ಲಿ ಕೆಲವು ವರ್ಷಗಳ ಹಿಂದೆ ಓಡಾಡುವಾಗ, ಅಲ್ಲೊಂದು ಕುತೂಹಲಕರವಾದ ವಿಷಯ ಗಮನಕ್ಕೆ ಬಂದಿತು.

ಒಂದು ಹೊಲದ ಬಳಿ ಸಣ್ಣ ಗುಡಿಯಿದ್ದು ಅದಕ್ಕೆ ಮದ್ದಿನ ಗೌರಮ್ಮನ ಗುಡಿ ಎಂದು ಕರೆಯುತ್ತಿದ್ದರು. ಅಲ್ಲಿದ್ದ ರೈತನೊಬ್ಬ ಇವಳು ತಾಯಿ ದೇವರು, ಇನ್ನೊಂದು ಹೊಲದ ಬಳಿ ಇವಳ ಮಗಳಿದ್ದಾಳೆ, ಅವಳು ಮದ್ದೀರಮ್ಮಾ ಎಂದು ತಿಳಿಸಿದ. ನಾನು ಎರಡೂ ಗುಡಿಗಳನ್ನು ಸಂದರ್ಶಿಸಿದೆ. ಗರ್ಭಗುಡಿಯಲ್ಲಿ ದೇವಿ ಎಂದು ಕರೆಯುವ ಸುಮಾರು ಒಂದು ಅಡಿ ಉದ್ದಕ್ಕೆ ನಿಲ್ಲಿಸಿರುವ ಮೂರ್ನಾಲ್ಕು ಕಲ್ಲುಗಳನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ. ಮದ್ದಿನ ಗೌರಮ್ಮ ಎಂದು ಕರೆಯುವ ಒಂದೇ ದೇವಿಯ ಹೆಸರಿದ್ದರೂ ಮೂರ್ನಾಲ್ಕು ಕಲ್ಲುಗಳಿವೆ. ಆ ಕಲ್ಲುಗಳಲ್ಲಿ ಯಾವುದು ಮದ್ದಿನ ಗೌರಮ್ಮ ಎಂಬುದು ನನ್ನ ಪ್ರಶ್ನೆಯಾಯಿತು. ಮದ್ದೀರಮ್ಮನ ಗುಡಿಯಲ್ಲಿಯೂ ಅದೇ ರೀತಿ ಮೂರು ಕಲ್ಲುಗಳಿದ್ದವು. ಅಲ್ಲಿ ಕೃಷಿಕರಾಗಿರುವ ಜಯಣ್ಣ ಎಂಬುವರು ನನ್ನ ಜೊತೆಗೆ ಮಾತಾಡುತ್ತಾ ನನ್ನ ಪ್ರಶ್ನೆಗೆ ನೆರವಾಗುವಂತಹ ಕೆಲವು ಸುಳುಹುಗಳನ್ನು ಕೊಟ್ಟರು.

ಒಟ್ಟಾರೆ ನಾನಲ್ಲಿ ಗ್ರಹಿಸಿದ್ದೇನೆಂದರೆ, ಜಯಣ್ಣನವರ ತಾತ ಮುತ್ತಾತಂದಿರ ಕಾಲದಲ್ಲಿ ಗೌರಮ್ಮ ಎಂಬಾಕೆ ಅಲ್ಲಿನ ಸಾಮಾನ್ಯ ರೋಗಗಳಿಗೆ, ಜಡ್ಡುಗಳಿಗೆ ಔಷಧಿ ಕೊಡುತ್ತಿದ್ದಳು. ಆಕೆಯನ್ನು ಮದ್ದಿನ ಗೌರಮ್ಮ ಎಂದೇ ಕರೆಯುತ್ತಿದ್ದರು. ಆಕೆ ಕಾಲವಾದ ನಂತರ ಆಕೆ ಮದ್ದನ್ನು ಅರೆಯಲು ಉಪಯೋಗಿಸುತ್ತಿದ್ದ ಕಲ್ಲುಗಳನ್ನು ಆಕೆಯ ನಂತರದವರು ಪೂಜಿಸುತ್ತಿದ್ದರು. ಪ್ರಾಯಶಃ ಆಕೆಯನ್ನು ಹೂತು ಹಾಕಿದ ಸಮಾಧಿಯ ಮೇಲೆ ಅದೇ ಕಲ್ಲುಗಳನ್ನು ನಿಲ್ಲಿಸಿದ್ದಿರಬೇಕು. ಅದೇ ರೀತಿಯಾಗಿ ಆಕೆಯ ಮಗಳು ಈರಮ್ಮನೂ ತನ್ನ ತಾಯಿಯ ವೈದ್ಯ ವೃತ್ತಿಯನ್ನು ಮುಂದುವರಿಸಿದ್ದಳು. ಅವಳಿಗೆ ಮದ್ದಿನ ಈರಮ್ಮ ಎಂದು ಕರೆಯುತ್ತಿದ್ದರು. ತನ್ನ ಗಂಡನು ಕಾಲವಾದ ಮೇಲೆ ಮಕ್ಕಳಿಲ್ಲದ ಈ ತಾಯಿಯು ಕಾಡೆಲ್ಲಾ ಸುತ್ತಿಕೊಂಡು ಗಿಡ ಮೂಲಿಕೆಗಳನ್ನು ಸಂಗ್ರಹಿಸಿ ತರುತ್ತಿದ್ದಳಂತೆ.





ಅಂತೆಯೇ ಯಾರೇ ಯಾವುದೇ ಕಾಯಿಲೆಯಿಂದ ನರಳುತ್ತಾ ಬಂದರೆ ತನ್ನ ಕೈಲಾದಂತೆ ಮದ್ದು ಮಾಡಿ ಗುಣಪಡಿಸುತ್ತಿದ್ದಳಂತೆ. ಗಂಡ ಹೆಂಡತಿಯರು ದಾಂಪತ್ಯದಲ್ಲಿ ಹೊಂದಾಣಿಕೆಯಿಲ್ಲದಿದ್ದರೂ ಅದಕ್ಕೂ ಒಂದು ಮಾಟದ ಬಳ್ಳಿಯ ತುಂಡೊಂದನ್ನು ಕೊಡುತ್ತಿದ್ದಳಂತೆ. ಹಾಗೆಯೇ ಕಾಡಿನಲ್ಲಿ ಓಡಾಡುವಾಗ ಯಾವುದೋ ಒಂದು ಬಗೆಯ ಬಳ್ಳಿಯನ್ನು ತುಳಿದು ಬಿಟ್ಟರೆ ದಾರಿತಪ್ಪಿ ಹೋಗುವುದಂತೆ, ಅದಕ್ಕಾಗಿ ಅಂತಹ ಬಳ್ಳಿಗಳನ್ನು ಹುಡುಕಿ ಅವುಗಳನ್ನು ಕಣಿವೆಯಲ್ಲಿ ಹಾಕಿ ಬರುತ್ತಿದ್ದಳಂತೆ. ಈರಮ್ಮನಿಗೆ ಮಾತ್ರ ಈ ಬಳ್ಳಿ ದಾರಿ ತಪ್ಪಿಸುತ್ತಿರಲಿಲ್ಲವಂತೆ. ಆಕೆಯ ಕಾಲಾನಂತರ ಆಕೆಯ ಸಮಾಧಿಯ ಮೇಲೋ ಅಥವಾ ಆಕೆಯ ನೆನಪಿನಿಂದಲೋ ಆಕೆಯು ಅರೆಯುತ್ತಿದ್ದ ಮದ್ದಿನ ಕಲ್ಲುಗಳನ್ನೇ ಮದ್ದಿನ ಈರಮ್ಮ ಎಂದು ಪೂಜಿಸುತ್ತಿದ್ದರಂತೆ. ಅವಳನ್ನು ಈಗ ಕರೆಯುವುದು ಮದ್ದೀರಮ್ಮ ಎಂದು.

## ಕಾಲರಾ ಮತ್ತು ಪ್ಲೇಗಿನ ದೇವಿಯರು

ಈ ಕಥೆಗಳು ಪ್ಲೇಗಮ್ಮ, ಸಿಡುಬಿನ ದೇವಿಯಾದ ಅಣ್ಣಮ್ಮ ಅಥವಾ ದೇವಿಯರು ಯಾವ ರೀತಿಯಲ್ಲಿ ನಮ್ಮ ಸಂಪ್ರದಾಯದಲ್ಲಿ ನುಸುಳಿರಬಹುದೆಂದು ವಿಚಾರಿಸಲು ಸೂಕ್ಷ್ಮ ಅಭಿಪ್ರಾಯವನ್ನು ನೀಡುತ್ತವೆ. ಗ್ರಾಮ್ಯ ಪ್ರದೇಶಗಳಲ್ಲಿನ ಕೆಲವು ತಾಯಂದಿರು ನಿಸ್ವಾರ್ಥವಾಗಿ ಕೆಲವು ಕಾಯಿಲೆಗಳಿಗೆ ಮದ್ದು ನೀಡುತ್ತಾ ಉಪಚರಿಸುತ್ತಿದ್ದು, ಅವರ ನಂತರ ಅವರ ಸಮಾಧಿಗಳನ್ನೋ ಅಥವಾ ಅವರ ನೆನಪಲ್ಲಿ ಅವರು ಮದ್ದರೆಯಲು ಉಪಯೋಗಿಸುತ್ತಿದ್ದ ಕಲ್ಲುಗಳನ್ನೋ ಪೂಜಿಸುತ್ತಿದ್ದು, ಕಾಲಾನಂತರ ಸಂಪ್ರದಾಯಗಳೊಳಗೆ ಅಥವಾ ನಂಬಿಕೆಗಳೊಳಗೆ ಹಾಸು ಹೊಕ್ಕಾಗಿರುವ ಸಾಧ್ಯತೆಗಳುಂಟು. ಅಂತಹ ಮದ್ದನ್ನು ನೀಡುವ ಮಹಿಳೆಯರು ಕೆಲವರು ಸಿಡುಬಿಗೆ ಅಥವಾ ಪ್ಲೇಗಿಗೂ ಮದ್ದು ಮಾಡುತಲಿದ್ದು, ಅವರ ನಂತರ ಅವರ ಕಲ್ಲುಗಳು ಅವರ ಹೆಸರಿಂದ ಪೂಜಿಸಲ್ಪಡುತ್ತಾ ಗೌರವಕ್ಕೆ ಒಳಗಾಗುತ್ತಿದ್ದವು.


ಮದ್ದಿನ ಗೌರಮ್ಮ, ಮದ್ದೀರಮ್ಮ, ಮಾರಮ್ಮ, ಅಣ್ಣಮ್ಮ; ಈ ಯಾವುದೇ ದೇವಿಯರನ್ನು ಮೂಲಸ್ಥಾನದಲ್ಲಿ ನೋಡಿದರೆ, ಅಲ್ಲಿರುವುದು ಬರಿಯ ಚೌಕ ಅಥವಾ ಆಯತಾಕಾರದ ಕಲ್ಲುಗಳೇ. ಅವುಗಳು ಒಂದೋ ಮದ್ದಿನ ಕಲ್ಲುಗಳಂತೆ ಕಂಡರೆ, ಕೆಲವು ಸಮಾಧಿಯ ಮೇಲೆ ನೆಡುವ ಕಲ್ಲುಗಳ ಹಾಗೆ ತೋರುತ್ತವೆ.

ಸತ್ತವರನ್ನು ಪೂಜಿಸುತ್ತಾ ಬರುವ ಸಂಸ್ಕೃತಿಯೂ ಕೂಡ ಇಂಥಾ ದೇವಿಯರ ಉಗಮಕ್ಕೆ ಹಲವು ಕಾರಣಗಳಲ್ಲಿ ಒಂದು. ಹಾಗೆಯೇ ಇವರನ್ನು ಮೌಖಿಕ ಪರಂಪರೆಯಲ್ಲಿ ಜೀವಂತವಾಗಿರಿಸುವಾಗ ವೈದಿಕರಿಗೆ ಅಥವಾ ಶಿಷ್ಟ ಸಮಾಜದ ಅಕ್ಷರಸ್ಥರಿಗೆ ಇವರು ಅಷ್ಟೇನೂ ಆಸಕ್ತಿಯ ವಿಷಯವಾಗಿರಲಿಲ್ಲ, ಭಕ್ತಿ ಗೌರವವೂ ಇರಲಿಲ್ಲ. ಹೆಚ್ಚೆಂದರೆ ಅವರು ಇವರನ್ನು ಕ್ಷುದ್ರ ದೇವತೆಗಳ ಪಟ್ಟಿಗೆ ಸೇರಿಸಿ ಕೈ ಬಿಟ್ಟಿದ್ದರು. ನಂತರ ವಿದೇಶಿಯರ ಆಗಮನವಾದ ಮೇಲೆ ಅವರು ಸ್ಥಳೀಯ ಮಾಹಿತಿ ಸಂಗ್ರಹಿಸಲು ತೊಡಗಿದಾಗ ಇವುಗಳ ಬಗ್ಗೆ ಲಿಖಿತ ದಾಖಲೆಗಳು ಇಲ್ಲದ ಕಾರಣ ಕೇಳುಗರನ್ನು ಅವಲಂಬಿಸಬೇಕಾಗಿತ್ತು, ಅವರಿಗೆ ತಮ್ಮ ಪರಂಪರೆಯ ಇತಿಹಾಸ ಹೇಳುವಂತವರೂ ತಮಗೆ ತೋಚಿದಂತೆ ಹೇಳುತ್ತಿದ್ದರು. ಅವರ ಜ್ಞಾನದ ಪರಿಮಿತಿಯಲ್ಲಿ ವಿವರಿಸುತ್ತಿದ್ದರು.

ಜೀಗನ್ ಬಾಲ್ಗ್ ಎಂಬ ಜರ್ಮನಿಯ ಕ್ರೈಸ್ತ ಪಾದ್ರಿಯು ಮತಾಂತರ ಮಾಡುವ ಉದ್ದೇಶದಿಂದ ಬಂದಿದ್ದವನು ತನ್ನ ಆಸಕ್ತಿಯಿಂದ ಇಂಥಾ ದೇವತೆಗಳ ಬಗ್ಗೆ ವಿವರವನ್ನು ಸಂಗ್ರಹಿಸಿ ಒಂದು ಉಪಕಾರ ಮಾಡಿದ. ಆದರೆ, ತನ್ನ ಪೀಠಿಕೆಯಲ್ಲಿ, "ಜಗತ್‌ರಕ್ಷಕನಾದ ಕ್ರಿಸ್ತನು ಇಲ್ಲಿಯ ಜನ ಪೂಜಿಸುತ್ತಿರುವ ಹುಚ್ಚು ದೇವರುಗಳನ್ನು ನಾಶಮಾಡಲಿ" ಎಂದು ಹೇಳುವುದರಲ್ಲಿ ನಮ್ಮ ಸ್ಥಳೀಯ ದೈವೀ ಅಮ್ಮಂದಿರ ಬಗ್ಗೆ ಅವನ ಧೋರಣೆ ಅರ್ಥವಾಗುತ್ತದೆ. ನಿಮ್ಮ ಶತ್ರುವನ್ನೂ ಪ್ರೀತಿಸಿ ಎಂದು ಸಾರಿದ ಕ್ರಿಸ್ತನು ಈ ದೇವತೆಗಳನ್ನೆಲ್ಲಾ ಹೇಗೆ ನಾಶ ಮಾಡಿಯಾನು ಎಂಬುದನ್ನೂ ಅವನು ತಿಳಿಯದವನು. ಅವನಷ್ಟೇ ಮೂರ್ಖರು ಗೊರವನಹಳ್ಳಿಯ ಒಂದು ಮುಗ್ಧೆಗೆ ಲಕ್ಷ್ಮೀದೇವಿಯ ಪಟ್ಟ ಕಟ್ಟಿ ಅದನ್ನೊಂದು ಪುಣ್ಯ ಕ್ಷೇತ್ರವಾಗಿಸಿದವರು.

ಪ್ಲೇಗ್ ಮಾರಮ್ಮ, ಕಾಲರಮ್ಮ, ಸಿಡುಬಿನ ದೇವಮ್ಮ ಅಥವಾ ಅಣ್ಣಮ್ಮ ಇವರೆಲ್ಲಾ ರೋಗ ನಿವಾರಕ ಮದ್ದಿನ ಗೌರಮ್ಮರಂತೆ ಗುರುತಿಸದೇ ರೋಗದ ದೇವಿಗಳಾಗಿ ಪ್ರಕಟಗೊಳಿಸಿದ್ದು ಬಹುಶಃ ಸ್ಥಳೀಯರು ಮೌಖಿಕವಾಗಿ ಇತಿಹಾಸವನ್ನು ದಾಟಿಸುವಾಗ ಭಾಷೆಯನ್ನು ಸರಿಯಾಗಿ ಗ್ರಹಿಸಲಾರದೇ ಎಂದು ತೋರುತ್ತದೆ.

ಏನೇ ಆಗಲಿ, ವೈದಿಕರಿಗೆ ಇವು ಕ್ಷುದ್ರ ದೇವತೆಗಳೆಂದು ಅಲಕ್ಷ್ಯವಾದರೆ, ಅಜ್ಞಾನಿಗಳ, ಅವಿದ್ಯಾವಂತರ ಬಾಲಿಶ ಕಲ್ಪನೆಗಳು ಈ ಹುಚ್ಚು ದೇವತೆಗಳು ಎಂಬುದು ವಿದೇಶೀ ಚರಿತ್ರೆಕಾರರಿಗೆ ಸಿಕ್ಕ ಚಿತ್ರಣ. ಸೈನ್ಯದ ದಂಡಿಗೆ ಯಾವುದೋ



ರೀತಿಯಲ್ಲಿ ನೆರವಾಗಿ ನಂತರ ಕಾಲವಾದ ಒಂದು ತಾಯಿ, ಕೋಟೆಗೆ ಬಂದಿದ್ದ ವಿಪತ್ತನ್ನು ಪರಿಹರಿಸಿದ ಒಂದು ತಾಯಿ, ಮುಂದೆ ಕಾಲಾನಂತರ ದಂಡಿನ ಮಾರಮ್ಮ, ಕೋಟೆಯ ಮಾರಮ್ಮಗಳಾಗಿದ್ದು ಹೇಗೆಂದು ದೊರಕುವ ಸಣ್ಣ ದಾಖಲೆಯ ಎಳೆಗಳಿಂದ ಚರಿತ್ರೆಯನ್ನು ಕಟ್ಟಬೇಕಾಗಿದೆ.

ಹಳೆಯ ಹೆಸರುಗಳನ್ನು ಮರೆಮಾಚುವ ಮೂಲಕ ಮೂಲ ಚರಿತ್ರೆಯನ್ನೂ ಮರೆಸುವ ಪ್ರಯತ್ನ ನಡೆದೇ ಇದೆ. ಪೊಲೆಯರು ಮೂಲದ ಹೊಲೆಯರು ಮತ್ತು ಮಾದಿಗರ ಮೂಲದವರೇ ಅನೇಕ ಕಡೆ ಭೂಮಿಯನ್ನು ಪಾಲಿಸುತ್ತಿದ್ದವರು. ಅವರೇ ಸ್ಥಳೀಯ ದೊರೆಗಳಾಗಿದ್ದವರು. ಅವರ ಕುಟುಂಬಗಳು ಇರುತ್ತಿದ್ದ ಕೇರಿಗಳು ಮಾದಿಗರ ಕೇರಿಗಳಾಗಿದ್ದು, ಹೊಲಗೇರಿಗಳಾಗಿ ಅಸ್ಪೃಶ್ಯವಾಗಿದ್ದು ಅದೆಂತಹ ಭಯಂಕರ ರಾಜಕೀಯ ಹುನ್ನಾರಗಳಿಂದಾಗಿದ್ದಿರಬಹುದು! ಮೈಸೂರಿನ ಜಯಲಕ್ಷ್ಮಿಪುರಂ ಈ ಮೊದಲು ಆಗಿದ್ದದ್ದು ಹೊಲೆಯರ ಕೇರಿ, ಲಕ್ಷ್ಮೇಶ್ವರ ಮೂಲ ಹೆಸರು ಹೊಲಗೇರಿ, ರಾಣೆಬೆನ್ನೂರಿನ ಬಳಿಯ ಹಲಗೇರಿಯು ಈ ಮುನ್ನ ಹೊಲಗೇರಿಯಾಗಿತ್ತು. ಕನಕಪುರದ ಬಳಿ ಹಾರೋಹಳ್ಳಿ ಕೂಡ ಹೊಲಗೇರಿ, ಮಳವಳ್ಳಿಯಲ್ಲಿ ಕೀರ್ತಿನಗರವು ಚಿಕ್ಕ ಹೊಲಗೇರಿ, ಸಿದ್ಧಾರ್ಥ ನಗರ ದೊಡ್ಡ ಹೊಲಗೇರಿ. ವೈದಿಕ ಬ್ರಾಹ್ಮಣ್ಯದ ಪುರೋಹಿತಶಾಹಿ ಮತ್ತು ಇತರ ಶಿಷ್ಟ ಸಮಾಜದ ಧುರೀಣರು ಹುಟ್ಟು ಹಾಕಿದ ಕೀಳರಿಮೆಯಿಂದಾಗಿ ಸಂಕೋಚಿತರಾಗಿ ಹೊಲಗೇರಿಯನ್ನು ಹಲಗೇರಿಯನ್ನಾಗಿಸುವುದೋ, ಗಿಡ್ಡಮ್ಮನನ್ನು ಲಕ್ಷ್ಮೀದೇವಿಯನ್ನಾಗಿಸಿಕೊಳ್ಳುವುದೋ ಸ್ವಾಭಿಮಾನ ಧಕ್ಕೆಯ ವಿಷಯ. ಅದಿರಲಿ, ನಾಗರಹೊಳೆಯ ಅರಣ್ಯವು, ಅಲ್ಲಿನ ಹಳೆಯ ಬುಡಕಟ್ಟುಗಳಿಂದ, ಜನರಿಂದ ನಾಗರ ಹೊಳೆಯಾಗಿದ್ದು, ಅದರ ಹೆಸರು ಈಗ ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನ!! ಏನನ್ನೋಣ ಇದಕ್ಕೆ!

# ದೇವರಿಗೆ ಪ್ರಾಣಬಲಿ ಕೊಡೋದ್ಯಾಕೆ ಗೊತ್ತೇನ್ರಿ?

ಥೂತ್ತೇರಿ


▸ ಯಾಹೂ

ಮನುಧರ್ಮ ಗ್ರಂಥವನ್ನು ಪುನರುತ್ಥಾನಗೊಳಿಸಿ, ಮೀಸಲಾತಿ ಕೊಡಬಾರದೆಂದು ಸುಪ್ರೀಂಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿರುವ ರಾಮಾಜೋಯಿಸನೆಂಬ ಪುರೋಹಿತರು ಶೃಂಗೇರಿ ಪ್ರಾಂತ್ಯಕ್ಕೆ ಬಂದು ಭಾಷಣ ಬಿಗಿದರಂತಲ್ಲಾ, ಜೋಯಿಸರ ಆಕಾರ ನೋಡಿ ಹಿಂದೆ ಕುಳಿತಿದ್ದ ಶೂದ್ರ ಹೈದನೊಬ್ಬ "ತುಸು ಗಂಡು ದನಿಯ ಈ ಅಜ್ಜಿಯ ಧೈರ್ಯವನ್ನು ಮೆಚ್ಚಲೇಬೇಕು. ಏಕೆಂದರೆ ಸಾರ್ವಜನಿಕ ಸಮಾರಂಭಕ್ಕೆ ರವಿಕೆಯನ್ನೇ ಇಕ್ಕದೆ ಹಾಗೇ ಬಂದಿದೆಯಲ್ಲಾ, ಬಿಳಿ ಶಲ್ಯವಿಲ್ಲದಿದ್ದರೆ ಈ ವಿಧವೆ ಅಜ್ಜಿಯ ಕತೆಯೇನು?" ಎಂದು ಉದ್ಗಾರ ತೆಗೆದನಂತಲ್ಲಾ.

ಜೋಯಿಸರು ತುಂಬಾ ಹುರುಪಿನಿಂದ ಭಾಷಣ ಕೊಟ್ಟುತ್ತ "ನೀವು ಏನೇ ಹೇಳಿ, ನಮ್ಮ ಈ ಭವ್ಯ ಭಾರತ, ಭಾರತ ಎಂದು ಹೆಸರಿಟ್ಟುಕೊಂಡಿದ್ದಾಗಲೇ ಸಮೃದ್ಧವಾಗಿತ್ತು, ಆಗಿನ ಕಾಲದಲ್ಲಿ ನಮ್ಮವರಾರೂ ಹೊಲ ಉಳುತ್ತಿರಲಿಲ್ಲ, ಗದ್ದೆ ಮಾಡುತ್ತಿರಲಿಲ್ಲ, ಆದರೂ ಗೋಧಿ, ಸಣ್ಣಕ್ಕಿ ಅನ್ನ ಉಣ್ಣುತ್ತಿದ್ದೆವು. ಗೋವುಗಳನ್ನ ಸಾಕಿರಲಿಲ್ಲ, ಆದರೆ ಹಾಲು, ಮೊಸರು, ಬೆಣ್ಣೆ ತುಪ್ಪ ನಮ್ಮ ಮನೆಗಳಲ್ಲಿ ಹೇರಳವಾಗಿತ್ತು, ತರಕಾರಿ ಬೆಳೆಯುತ್ತಿರಲಿಲ್ಲ, ಆದರೂ ಸಿಹಿಕುಂಬಳ, ನಾಟಿ ಕುಂಬಳ, ಬಣ್ಣದ ಸೌತೆ, ಹೀರೆ, ಸೋರೆ, ಪಡವಲಕಾಯಿಗಳು ನಮ್ಮ ಜಗಲಿಯಲ್ಲಿ ಬಿದ್ದಿರುತ್ತಿದ್ದವು. ನಮ್ಮ ಪಾಕಶಾಲೆಗಳೆಲ್ಲಾ ದೇವಸ್ಥಾನಗಳಲ್ಲೇ ಇರುತ್ತಿದ್ದವು. ನಾವಂತೂ ರಾಮಾಯಣ, ಮಹಾಭಾರತ, ಭಗವದ್ಗೀತೆಗಳನ್ನು ಪಠಿಸುತ್ತ, ಪುರಾಣ ಹೇಳುತ್ತ ಎಷ್ಟು ಚೆನ್ನಾಗಿದ್ದೆವು ಮತ್ತು ಭಾರತವನ್ನು ಎಷ್ಟು ಚೆನ್ನಾಗಿ ಇಟ್ಟಿದ್ದೆವು. ಆದರೆ ಯಾವತ್ತೂ ಇಂಡಿಯಾ ಎಂದು ಕರೆದರೋ ಆಗಲೇ ಎಲ್ಲವೂ ಹಾಳಾಗಿ ಹೋಯಿತು. ಈಗ ಮತ್ತೆ ನಾವು ಭಾರತವನ್ನು ಮನುಧರ್ಮನಲ್ಲಿ ಕಟ್ಟಬೇಕು. ಆಗ ಮಾತ್ರ ನಮ್ಮ ದೇವಸ್ಥಾನಗಳಲ್ಲಿ ಪಾಕಶಾಲೆ ಪ್ರಾರಂಭವಾಗುತ್ತವೆ. ಅಲ್ಲಿಯವರೆಗೆ ನಮ್ಮ ಶಿಖೆ ಕಟ್ಟಬಾರದು" ಎಂದು ತಲೆ ಸವರಿಕೊಂಡರಂತಲ್ಲಾ, ಸದರಿ ತಲೆ ತಾಮ್ರದ ತಂಬಿಗೆಯಷ್ಟು ನಯವಾಗಿದ್ದು, ಶಿಖೆಯೇ ಇರಲಿಲ್ಲವಂತಲ್ಲಾ, ಥೂತ್ತೇರಿ!

* * * *

ನಮ್ಮ ಈ ಜಗದ್ವಿಖ್ಯಾತ ಜೋಯಿಸರು ಇತ್ತ ಮಂಡಗತ್ತಿಯನ್ನು ಝಳಪಿಸುತ್ತಿರಬೇಕಾದರೆ, ಅತ್ತ ನಮ್ಮ ಮೆಚ್ಚಿನ ವಿಶ್ವನಾಥ್ ನೂರಾರು ಕುರಿ ಮತ್ತು ಅದರ ದುಪ್ಪಟ್ಟು ಸಂಖ್ಯೆಯ ಕೋಳಿ ಕತ್ತನ್ನು ಹಾರಿಸಿ ಭರ್ಜರಿ ಪೂರ ಮಾಡಿದ ಸುದ್ದಿ ಹೊರಬಿದ್ದಿದೆಯಲ್ಲಾ, ಸಿದ್ದರಾಮಯ್ಯನ ಸರಕಾರ ಮೂಢನಂಬಿಕೆ ವಿರೋಧಿ ಕಾನೂನನ್ನು ಜಾರಿಗೊಳಿಸುತ್ತೇನೆಂದು ಶೂದ್ರ ಸಮೂಹಕ್ಕೆ ಬೆದರಿಕೆ ಹಾಕುತ್ತಿರುವ ಸಮಯದಲ್ಲೇ ವಿಶ್ವನಾಥರ ಈ ಮಹಿಷ ಮತ್ತು ಕುಕ್ಕುಟಹೋಮ ತರ್ಲೆ ಸುದ್ದಿಗಾಗಿ ಕಾಯುತ್ತಿರುವ ಪತ್ರಿಕೆಗಳಿಗೆ ಮಾಂಸದ ಸಾರಿನ ವಾಸನೆಯಷ್ಟೇ ಹಿತಕರವಾಗಿ ಕಂಡು 'ಅಯ್ಯೋ ನಾವು ಅಲ್ಲಿಗೆ ಹೋಗಬೇಕಿತ್ತು' ಎಂಬಂತೆ ಕೆರಳಿವೆಯಂತಲ್ಲಾ, ಈ ಬಗ್ಗೆ ವಿಶ್ವನಾಥರನ್ನ ಕೇಳಿದರೆ ಹೇಗೆಂದು ಫೋನು ಮಾಡಿದರೆ ರಿಂಗಾಯ್ತು.



ರಿಂಗ್ ಟೋನ್: "ಕರಿಯ ಕಂಬಳಿ ಗದ್ದುಗೆ ಮಾಡಿ ವೀರದೊಳ್ಳ ತಂದಿರ್‍ಸಿದರೊ..."

"ಹಲೋ ಯಾರು?"

"ನಾನು ಸಾರ್ ಯಾಹು."

"ಏನಪ್ಪ ಯಾಹು? ಚೆನ್ನಾಗಿದ್ದಿಯಾ?"

"ಏನು ಚನ್ನಾಗಿರದು ಸಾರ್. ಬಾಡೂಟ ಕಳಕೊಂಡ ಬೇಜಾರಲ್ಲಿದ್ದೀನಿ."

"ಮೊದಲೇ ಹೇಳಿದ್ರೆ ಹಂದಿಕೆರೆ ಚೌಡಮ್ಮನ ದೇವಸ್ಥಾನದ ಹತ್ರಕ್ಕೆ ನಿನ್ನನ್ನು ಕರೆತಿದ್ದೆನಲ್ಲಯ್ಯ?"

"ಅಲ್ಲೇನಿತ್ತು ಸಾರ್?"

"ದೇವರ ಹರಕೆ ಇತ್ತು, ತೀರಿಸಿದೆವು."

"ಸಿಹಿ ಊಟನೋ ಬಾಡೂಟದ ಹರಕೆನೊ ಸಾರ್?"

"ಹಂದಿಕೆರೆ ಚೌಡಮ್ಮನಿಗೆ ವಡೆ, ಪಾಯ್ಸ, ಕೋಸಂಬರಿ, ಎಡೆ ಮಾಡಕ್ಯಾಗತ್ತ? ನೂರಾರು ಕುರಿ, ಕೋಳಿ ಕುಯ್ದು ಪೂರ ಮಾಡಿದ್ದೆ."

"ಕೇಳತಾಯಿದ್ರೆ ಬಾಯಲ್ಲಿ ನೀರು ಬರುತ್ತಲ್ಲ ಸಾರ್."

"ನಿಮ್ಮ ಬಾಯಲ್ಲಿ ನೀರು ಸಹಜ. ಅಷ್ಟು ಚೆನ್ನಾಗಿತ್ತು ಬಾಡೂಟ."

"ಇರಲ್ವ ಸಾರ್? ಯಾಕಂದ್ರೇ ಕುರಿಯ ಸಕಲಿಷ್ಟು ಭಾಗದ ಸಾರಿನ ರುಚೀನೇ ಬೇರೆ. ಅದರಲ್ಲಿ ಈಲಿ, ಗುಂಡಿಗೆ, ಎದೆ ಚಿಕ್ಕು, ಬೀಜದ ರುಚಿಯೆಲ್ಲಾ ಸೇರಿ ಸಾರಿಗೆ ಒಂದು ಅರ್ಥೈಸಲಾಗದ ಗಮಲು ಬಂದಿರುತ್ತೆ, ಇಡೀ ದಿನ ಕೈವಾಸನೆ ಹೋಗಲ್ಲ, ತಲೆ, ಕಾಲು ಸೇರಿದ್ರಂತೂ ಇನ್ನೂ ರುಚಿ."

"ನಿಮ್ಮ ಮಾತು ನಿಜ. ನಾನು ಮಾಡಿಸಿದ್ದ ಅಡಿಗೆ ರುಚಿ ಹಾಗೇ ಇತ್ತು."

"ಈ ತರ ದೇವರಿಗೆ ಕುರಿ, ಕೋಳಿ ಬಲಿ ಕೊಡೋದು ಮೂಢನಂಬಿಕೆ ವ್ಯಾಪ್ತಿಗೆ ಬರುತ್ತೆ, ಆದ್ದರಿಂದ ಸಂಸದ ವಿಶ್ವನಾಥರು ಕಾನೂನು ವ್ಯಾಪ್ತಿ ಮೀರಿ ವರ್ತಿಸಿದಾರೆ ಅಂತ ಚರ್ಚೆ ಆಗ್ತಾ ಇದೆ ಸಾರ್."

"ನೋಡ್ರಿ, ಮಾಂಸ ತಿನ್ನಬೇಕಾದ್ರೆ ಏನು ತೆಗೀಬೇಕು ಹೇಳಿ?"

"ಏನು ತೆಗೀಬೇಕು ಅಂದ್ರೆ ಏನೇಳ್ಲಿ ಸಾರ್?"

"ಪ್ರಾಣಿ ಜೀವ ತೆಗೀಬೇಕಲ್ಲವೇನ್ರಿ?"

"ಹೌದು ಸಾರ್."

"ಪ್ರಾಣಿ ಸಮೂಹದಲ್ಲೇ ಸಾಧು ಪ್ರಾಣಿಗಳಾದ ಆಡು, ಕುರಿ, ಕೋಳಿ ಜೀವ ತೆಗೀಬೇಕಾದ್ರೆ ಮನುಷ್ಯನಿಗೆ ಪಾಪಪ್ರಜ್ಞೆ ಕಾಡಿದೆ."

"ಹೌದಾ ಸಾರ್?"

"ಹೌದಾ ಅಂತಿರಲ್ರಿ? ಅನಾದಿಕಾಲದಿಂದ್ಲೂ ಮನುಷ್ಯನಿಗೆ ಅಮಾಯಕ ಪ್ರಾಣಿಯನ್ನು ಹಿಡಿದು ಅದರ ಕತ್ತಿಗೆ ಚೂರಿ ಹಾಕ ಬೇಕಾದ್ರೆ ಅವನೊಳಗಿನ ಮನುಷ್ಯತ್ವ 'ಅಯ್ಯೋ ಜೀವಹತ್ಯೆ' ಎಂದಿದೆ. ಅದಕ್ಕೆ ಆತ ಏನು ಮಾಡಿದ ಅಂದ್ರೆ, ತಾನು ಪೂಜೆ ಮಾಡೋ ದೇವರಿಗೆ ಬಲಿ ಅಂತ ಕೊಡೋದಕ್ಕೆ ಶುರು ಮಾಡಿದಾನೆ."

"ಒಪ್ಪಿಗೊಬಹುದು ಸಾರ್."

"ಒಪ್ಪಿಗಳದೇನು? ಅದೊಂದು ನಂಬಿಕೆ. ಪ್ರಾಣಿ ಕೊಲ್ಲುವ ಪಾಪನ ತನ್ನ ದೇವರ ಮೇಲೆ ಹಾಕಿದಾನೆ. ಆ ನಂತರ ಕೊಂದ ಪಾಪವನ್ನು ತಿಂದು ಪರಿಹರಿಸಿಕೊಂಡು ತನ್ನ ಸಮಾಧಾನಕ್ಕೆ ಒಂದು ಗಾದೆಯನ್ನೂ ಸೃಷ್ಟಿ ಮಾಡಿದಾನೆ."

"ಕೊಂದ ಪಾಪ ತಿಂದು ಪರಿಹಾರಾಯ್ತು ಅಂತ?"

"ಹೌದು. ಅಂತೂ ಪ್ರಾಣಿ ಹತ್ಯೆಗೆ ದೇವರ ಬಲಿ ಅಂತ ಹೆಸರೇಳಿ ಮಾಂಸಹಾರಿ ಆದ ಮನುಷ್ಯ ತನ್ನ ಬೇಟೆ ತಿನ್ನಕೊಂಡು ಬಂದಿದಾನೆ. ಇದರಲ್ಲಿ ವಿಶ್ವನಾಥ ಮಾಡಿರೊ ತಪ್ಪೇನು? ಈ ವಿಷಯದಲ್ಲಿ ನಾನು ಹಿಂದೆ ವಿಚಾರವಾದಿ ರಾಮದಾಸರ ಜೊತೇಲೆ ಜಗಳ ಆಡಿದ್ದೆ, ಅವರೂ ಕೂಡ ಮಾಂಸಹಾರಿ ಆಗಿದ್ರು. ಆದ್ರು ಜಗಳ ಮಾಡಿದ್ರು."

"ಅಂತೂ ಜನಗಳಿಗೆ ಊಟ ಹಾಕಸಕ್ಕೆ ಹಂದಿಕೆರೆ ಚೌಡಮ್ಮನ ಮೊರೆ ಹೋಗಿದ್ದಿರಿ."

"ನನ್ನ ಹೆಂಡತಿ ಹರಕೆ ಹೊತ್ತಿದ್ಲು ಕಂಡ್ರಿ."

"ಸಾಮಾನ್ಯವಾಗಿ ಹರಕೆ ಹೊತ್ತೋರು ಒಂದು ಅಥವಾ ಎರಡು ಕುರಿ ಕುಯ್ತರೆ ಸಾರ್. ನೂರಾರು ಕುರಿ ಕುಯ್ಯಲ್ಲ."


"ನನ್ನ ಬಳಗ ಬಹಳ ದೊಡ್ಡದು ಕಂಡ್ರಿ."

"ಹೌದು ಸಾರ್. ಇಬ್ಬರು ಹೆಂಡತಿಯರು ಅಂದ್ರೆ ಆ ಕಡೆ ಒಂದು ಸಾವಿರ ಜನ, ಈ ಕಡೆ ಒಂದು ಸಾವಿರ ಜನ. ಇನ್ನ ನಿಮ್ಮ ಕಡೆ ಮೂರು ಸಾವಿರ ಜನ. ಅದರಲ್ಲಿ ಮುಕ್ಕಾಲು ಭಾಗ ಕುರುಬರೇ ಇರುತ್ತಾರೆ. ಅವುರಂತು ಕನಿಷ್ಠ ಒಂದು ಕೆ.ಜಿ. ತಿಂತಾರೆ. ಆದ್ರಿಂದ ನೂರಾರು ಕುರಿ ಕುಯ್ಯಬೇಕಾಯ್ತು ಅಂತಿರಾ?"

"ಹೌದು ಮತ್ತೆ, ಮನುಷ್ಯ ದುಡಿದದ್ರಲ್ಲಿ ನಾಲ್ಕು ಜನಕ್ಕೆ ಅನ್ನ ಹಾಕಬೇಕು ಅಂತ ನಿಮ್ಮ ಲಂಕೇಶ್ ಬರೆದಿದ್ದಾರೆ. ಓದಿದ್ದೀರಾ?"

"ನಿಮ್ಮದ್ಯಾವ ದುಡಿಮೆ ಸಾರ್. ಅದಾಗಿ ಬರೋ ಸಂಸದ ಸವಲತ್ತು ಮತ್ತು ನಿಧಿನೇ ದುಡಿಮೆ ಅಂತೀರಲ್ಲಾ? ಕುಮಾರಸ್ವಾಮಿ ಮಾತು ಕೇಳಿದಂಗಾಯ್ತು, ಥೂತ್ತೇರಿ!"

# ಕನ್ನಡಕ್ಕೆ ಕೂಲಿಂಗ್ ಗ್ಲಾಸ್ ಹೋರಾಟಗಾರರು!




ಇತ್ತೀಚೆಗೆ ನಡೆಯುತ್ತಿರುವ 'ಡಬ್ಬಿಂಗ್' ಚರ್ಚೆಯಲ್ಲಿ ಬಿ.ಸುರೇಶ್ ಅವರು 'ಡಬ್ಬಿಂಗ್ ಏಕೆ ಬೇಡ' ಎಂದು ಪತ್ರಿಕೆಯಲ್ಲಿ ಪ್ರಕಟಗೊಂಡ 'ಜಕಣಾಚಾರಿಗೆ ಏಶಿಯನ್ ಪೈಂಟ್ ಯಾಕೆ' ಎಂಬ ಲೇಖನದಲ್ಲಿ (ಜನವರಿ 29, 2014ರ ಸಂಚಿಕೆ) ಸವಿಸ್ತಾರವಾಗಿ ಹೇಳಿದ್ದಾರೆ. ಅವರು ಕೊಟ್ಟಿರುವ ಎಲ್ಲ ಕಾರಣಗಳನ್ನೂ ಒಪ್ಪಬಹುದಾದರೂ ನಾವುಗಳು ನೋಡಲೇಬೇಕಾದ ಎಷ್ಟೋ ಉತ್ತಮ ಚಿತ್ರಗಳು ಪರಭಾಷೆಯಲ್ಲಿವೆ. ಅಂತಹ ಚಿತ್ರಗಳನ್ನು ನಾನು ತೆಲುಗು ಮತ್ತು ಹಿಂದಿಯಲ್ಲಿ ನೋಡಿ ಸಾಧ್ಯವಾದಷ್ಟು ಅರ್ಥೈಸಿಕೊಂಡಿದ್ದೇನೆ. ಈ ನಿಟ್ಟನಲ್ಲಿ ನೋಡಿದರೆ ಡಬ್ಬಿಂಗ್ ನಮ್ಮ ಕನ್ನಡದ 'ಜ್ಞಾನಕೋಶ'ಕ್ಕೆ ಅಗತ್ಯವಿದೆ ಎಂದು ಅನಿಸುತ್ತದೆ.

ಆದರೆ ಈಗ ಡಬ್ಬಿಂಗ್ ಪರವಾಗಿರುವ ನಿರ್ಮಾಪರು ಮನುಕುಲಕ್ಕೆ ಅಗತ್ಯವಿರುವ ಸಿನಿಮಾಗಳನ್ನು ಡಬ್ ಮಾಡುತ್ತಾರೆಯೇ ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಯಾಕೆಂದರೆ ಅವರೆಲ್ಲರೂ ನಿಚ್ಚಳವಾಗಿ ಈಗಿನ ಟ್ರೆಂಡ್‌ಗೆ ಬೇಕಿರುವ ಕಮರ್ಷಿಯಲ್ (ರೌಡಿಸಂ, ಲವ್) ಸಿನಿಮಾಗಳನ್ನೆ ಡಬ್ ಮಾಡಲು ತುದಿಗಾಲಿನಲ್ಲಿ ನಿಂತಿದ್ದಾರೆ... ಡಬ್ಬಿಂಗ್ ಬೇಕೆ ಅಥವಾ ಬೇಡವೆ ಎಂಬ ಗೊಂದಲಗಳು ಇತ್ಯರ್ಥವಾಗಬೇಕಿದ್ದರೆ ಪತ್ರಿಕೆಯಲ್ಲಿ ಈ ಬಗ್ಗೆ ಇನ್ನಷ್ಟು ಚರ್ಚೆಗಳು ಅವಶ್ಯವೆನಿಸುತ್ತದೆ.

ಹಾಗೆಯೇ ಕನ್ನಡದ ಉಳಿವಿಗಾಗಿ ನಮ್ಮ ಹೋರಾಟ ಎಂದು ಬೊಬ್ಬೆ ಹೊಡೆಯುತ್ತ ಡಬ್ಬಿಂಗ್ ವಿರುದ್ಧದ "ಹೋರಾಟ"(?)ವನ್ನೂ ಗಮನಿಸಿದ್ದೇನೆ. ಪ್ರತಿಭಟನೆಗೆ ಬಂದಿದ್ದ ಯಾವ ಒಬ್ಬ ನಟ, ನಟಿಯೂ ಕೂಲಿಂಗ್‌ಗ್ಲಾಸ್ ಇಲ್ಲದೆ ಬಂದಿರಲಿಲ್ಲ! ಡಬ್ಬಿಂಗ್ ಎಂದಾಗ ಮಾತ್ರ ಬೀದಿಗೆ ಬರುವ ಈ ಕನ್ನಡದ ಕಂದಮ್ಮಂದಿರು ನಿಜಕ್ಕೂ ಬೀದಿಗೆ ಬಂದಿರುವುದು ತಮ್ಮ ಅಳಿವುಉಳಿವಿನ ಪ್ರಶ್ನೆಗಾಗಿ ಮಾತ್ರ. ಇವರು ನಿಜವಾಗಲೂ ಕನ್ನಡದ ರಕ್ಷಕರಾಗಿದ್ದರೆ ರೈತ ಚಳವಳಿ, ದಲಿತ ಹೋರಾಟ, ಕಾರ್ಮಿಕರ ಹೋರಾಟಗಳೆಲ್ಲ ನಡೆದಾಗ ಎಲ್ಲಿದ್ದರು? ಇವರೆಲ್ಲಾ ಇನ್ನು ಮುಂದೆ ನಡೆಯುವ ಪ್ರಗತಿಪರ ಹೋರಾಟಗಳಲ್ಲಿ ಬೀದಿಗೆ ಬಂದು ಬಿಸಿಲಲ್ಲಿ ನಿಂತು ಕರ್ನಾಟಕದ ಜನರ ಬೆನ್ನಿಗೆ ನಿಲ್ಲುತ್ತಾರೆಂದು ನಿರೀಕ್ಷಿಸಲು ಸಾಧ್ಯವೆ?

ಇನ್ನು ಇವರೊಡನೆ ಬೀದಿಯಲ್ಲಿದ್ದ ಸಾವಿರಾರು ಜನರಿಗಾದರೂ ಈ ಹೋರಾಟದ ಉದ್ದೇಶಗಳೇನು ಎಂಬುದು ಗೊತ್ತಿರಬಹುದೆ? ಅವರುಗಳು ಬಂದಿದ್ದಾದರೂ ಕನ್ನಡಕ ಹಾಕಿರುವ ತಮ್ಮ ನೆಚ್ಚಿನ ನಟ, ನಟಿಯರನ್ನು ಬರಿಗಣ್ಣಿನಿಂದ ನೋಡಬಹುದೆಂಬ ಆಸೆಯಿಂದಷ್ಟೇ.

*- ಸರೋವರ್ ಬೆಂಕೀಕೆರೆ, ಈ ಮೇಲ್ ಮೂಲಕ*




### ಸಾಮಾಜಿಕ ಬಹಿಷ್ಕಾರ ಖಂಡನೀಯ

ಕೋಲಾರದ ಸಾಮಾಜಿಕ ಬಹಿಷ್ಕಾರ ವರದಿಯನ್ನು ಬಹಳ ಅಚ್ಚುಕಟ್ಟಾಗಿ ಸಂಜಯ್ ಅವರು ನೀಡಿದ್ದಾರೆ. ಇಂತಹ ಘಟನೆಗಳ ಹಿಂದಿನ ಹೀಚ ಮನಸ್ಸುಗಳಿಗೆ ತಕ್ಕ ಶಿಕ್ಷೆಯಾಗುವಂತೆ ಹೋರಾಡಬೇಕಿರುವುದು ಅನಿವಾರ್ಯ. ಈ ನಿಟ್ಟನಲ್ಲಿ ಎಲ್ಲ ಮನುಜಪರ ಸಂಘಟನೆಗಳು ಒಂದಾಗಲೇಬೇಕು.

*- ವಿಕಾಸ್ ಆರ್. ಮೌರ್ಯ, ಬೆಂಗಳೂರು*

### ಸದಾನಂದ ಗೌಡರ ನಗೆಗೆ ನೀವೂ ಬೇಸ್ತು ಬಿದ್ದಿರಾ?

ತನಗ್ಯಾವ ಆಸೆಯೂ ಇಲ್ಲ, ಪಕ್ಷ ಹೇಳಿದ್ದಕ್ಕೆ ಸಿಯೆಂ ಆದೆ, ಜಾಗ ಖಾಲಿ ಮಾಡು ಎಂದಾಗ ಬಾಯ್ಮುಚ್ಚಿ





ಮಾಜಿಯಾದೆ ಎಂದು ಬಹಳ ಸಾತ್ವಿಕ ವ್ಯಕ್ತಿ ಎಂಬಂತೆ ಸದಾನಂದ ಗೌಡರನ್ನು ಕುರಿತು ಬರೆದದ್ದನ್ನು ನೋಡಿದೆ.

ಆದರೆ ಗೌಡರನ್ನು ಹತ್ತಿರದಿಂದ ಬಲ್ಲವರು ಅವರನ್ನು ನೋಡುವ ರೀತಿಯೇ ಬೇರೆ. ಅರೆಭಾಷೆ (ಅರೆವಾಸಿ ಅಲ್ಲ) ಗೌಡರು ಬುದ್ಧಿಮತ್ತೆಯಲ್ಲಿ ಇತರ ಗೌಡರಿಗಿಂತ ಮುಂದೆ ಎನ್ನುವುದು ಸತ್ಯ ಇದ್ದರೂ ಇರಬಹುದು. ಯಾಕೆಂದರೆ ಅಶೋಕರಂತವರದ್ದು ಹುಂಬತನವಾದರೆ ಈ ಗೌಡರದ್ದು ಸಮಯ ನೋಡಿ ಬುದ್ಧಿಮತ್ತೆ ತೋರುವ ಚಾಲಾಕಿತನ. ಬಿಜೆಪಿ ರಾಜ್ಯದ ಗದ್ದುಗೇರಿದ ಆರಂಭದಿಂದಲೂ ಪ್ರತಿಬಾರಿ ಭಿನ್ನಮತ ಹತ್ತಿ ಉರಿಯುತ್ತಿದ್ದಾಗ ಈ ಗೌಡ ಯಾವ ಬಣಕ್ಕೂ ಸೇರದೆ ಎಲ್ಲರಲ್ಲೂ ಹೊಂದಾಣಿಕೆ ಇರಿಸಿಕೊಂಡಿದ್ದರು. ಈಶ್ವರಪ್ಪ ಅಶೋಕ್, ಅನಂತಕುಮಾರ್ ಮೊದಲಾದ ನಾಯಕರನ್ನು ಹಿಂದಿಕ್ಕಿ, ಯಡ್ಡಿ ನಿಷ್ಠನಂತೆ ವರ್ತಿಸಿ, ಸ್ವತಃ ಯಡ್ಡಿಯಿಂದಲೇ ಸಿಎಂ ಕುರ್ಚಿಗೆ

# ...ಾಯು'ಗೂ 'ಒರಟ'ನ ಯಶಸ್ಸು ಸಿಗುತ್ತದೆಯೇ?

'ಒರಟ ಐ ಲವ್ ಯೂ' ಚಿತ್ರದ 'ಯಾರೋ ಕಣ್ಣಲ್ಲಿ ಕಣ್ಣನಿಟ್ಟು ಮನಸಿನಲ್ಲಿ ಮನಸನ್ನಿಟ್ಟು' ಎನ್ನುವ ಹಾಡಿನ ಮೂಲಕ ಒಮ್ಮೆಲೇ ತಮ್ಮ ಪ್ರತಿಭೆಯನ್ನು ತೋರಿಸಿ ಆನಂತರದ ದಿನಗಳಲ್ಲಿ ಕೆಲವೊಂದಿಷ್ಟು ಚಿತ್ರಗಳಿಗೆ ಸಂಗೀತ ನೀಡಿ ಮಿಶ್ರಫಲ ಪಡೆದು, ...ದೀಗ ಅದೇ 'ಒರಟ' ಪ್ರಶಾಂತ್ ನಟಿಸಿರುವ 'ರಾಯು' ಚಿತ್ರದ ಹಾಡುಗಳ ಮೇಲೆ ತುಂಬಾ ಭರವಸೆ ಇಟ್ಟುಕೊಂಡಿರುವ ಸಂಗೀತ ...ರ್ದೇಶಕ ಜಿ.ಆರ್.ಶಂಕರ್ ಅವರೊಂದಿಗಿನ ಮಾತುಕತೆ ಇಲ್ಲಿದೆ.



* ನಿಮ್ಮ ಜನ್ಮಸ್ಥಳ, ಕುಟುಂಬ, ವಿದ್ಯಾಭ್ಯಾಸ ಕುರಿತು ...ರಾ?

...ಾನು ಹುಟ್ಟಿದ್ದು ಬೆಂಗಳೂರಿನಲ್ಲೇ. ನನ್ನ ತಾಯಿ ...ಂಗಲದ ಕಡೆಯವರು. ನನ್ನ ತಾಯಿಗೆ ಒಟ್ಟು ... ಜನ ಮಕ್ಕಳು. ನಾನು ನಾಲ್ಕನೆಯವನು. ನನಗೆ ...ಂವೆಯಾಗಿ ಎರಡು ಮಕ್ಕಳಿವೆ. ಓದಿದ್ದು ...ಎಲ್.ಬಿ.ಯಾದರೂ ಆಯ್ಕೆ ಮಾಡಿಕೊಂಡಿದ್ದು ಸಂಗೀತ ನೀಡಬೇಕು ಎಂಬ ಆಸೆ ಇತ್ತು. 'ಒರಟ ಐ ಲವ್ ಯೂ' ನಾನು ಸಂಗೀತ ನೀಡಿದ ಮೊದಲ ಚಿತ್ರ. ಆ ಚಿತ್ರದ ನಿರ್ಮಾಪಕರಾದ ಸಿ.ಆರ್. ಮನೋಹರ್ ಅವರಿಂದ ಆ ಅವಕಾಶ ನನಗೆ ಸಿಕ್ಕಿದ್ದು. ನಿಜ ಹೇಳಬೇಕೆಂದರೆ 'ಒರಟ ಐ ಲವ್ ಯೂ' ಚಿತ್ರಕ್ಕೆ ಗುರುಕಿರಣ್ ಅವರು ಸಂಗೀತ ನೀಡಬೇಕಿತ್ತು, ನಾನು ಕಂಪೋಸ್ ಮಾಡಿದ್ದ ಹಾಡುಗಳನ್ನು ಕೇಳಿ ಮೆಚ್ಚಿಕೊಂಡ ಸಿ.ಆರ್. ಮನೋಹರ್ ಆ ಅವಕಾಶವನ್ನು ನನಗೆ ಕೊಟ್ಟರು. ಆ ಚಿತ್ರದ ಹಾಡುಗಳು ಹಿಟ್ ಆದವು. ಆ ಸಕ್ಸಸ್ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

* ನಿಮಗೆ ಯಾವ ವಯಸ್ಸಿನಲ್ಲಿ ಸಂಗೀತದೆಡೆಗೆ ... ಬಂತು? ಮೂಲ ಪ್ರೇರಣೆ ಏನು?

...ಾನು ಚಿಕ್ಕಂದಿನಲ್ಲಿದ್ದಾಗ ನನ್ನ ತಾಯಿ ...ತ ಕಛೇರಿ ನಡೆಸಿಕೊಡುತ್ತಿದ್ದರು. ನಾನಾಗ ... ನುಡಿಸುತ್ತಿದ್ದೆ. ಆ ಮೂಲಕ ನನಗೇ ...ಲ್ಲದಂತೆ ನಿಧಾನವಾಗಿ ಸಂಗೀತ ನನ್ನನ್ನು ...ಸತೊಡಗಿತು. ಮೂಲ ಪ್ರೇರಣೆಯೆಂದರೆ ...ಯರಾಜಾ ಅವರ ಸಂಗೀತವೇ. ನನ್ನ ಐದನೇ ...ಸ್ಸಿನಲ್ಲೇ ತಬಲಾ, ಡ್ರಮ್ಸ್, ಡೋಲಕ್, ...ೋ, ಬಾಂಗೆ ಸೇರಿದಂತೆ ಅನೇಕ ...ಗಳನ್ನು ನುಡಿಸುತ್ತಾ ಬಂದೆ. ಹಾಗೇನೆ, ...2 ರಿಂದ ಷಣ್ಮುಖಾನಂದ ಎನ್ನುವವರ ... ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸುತ್ತಾ .... ಅದಕ್ಕೂ ಮುಂಚೆಯೇ ನಾನು ನೂರಾರು ...ಂಗಳನ್ನು ಕಂಪೋಸ್ ಮಾಡುವ ಮೂಲಕ ...ೇಸ್ ಮಾಡುತ್ತಿದ್ದೆ.



* ಸಿನಿಮಾಗೆ ಸಂಗೀತ ನೀಡಬೇಕು ಅಂತ ...ವಾಗ ಅನ್ನಿಸಿತು? ನೀವು ಸಂಗೀತ ನೀಡಿದ ...ದಲ ಚಿತ್ರ ಯಾವುದು?

...ಮೊದಲಿನಿಂದಲೂ ಸಿನಿಮಾಗಳಿಗೆ ಸಂಗೀತ

* ಇಲ್ಲೀವರೆಗೆ ಬೇರೆ ಯಾವ್ಯಾವ ಚಿತ್ರಗಳಿಗೆ ಸಂಗೀತ ನೀಡಿದ್ದೀರಿ?

'ಒರಟ ಐ ಲವ್ ಯೂ' ಜೊತೆಗೆ 'ಸಿಹಿಗಾಳಿ', 'ಮಿಸ್ಟರ್ ಪೇಂಟರ್', 'ಮೇಸ್ತ್ರಿ', 'ಎಫ್.ಎಂ.ರೇಡಿಯೋ', 'ಹೇ ಸರಸು', 'ಮಾತ್ರ', 'ಹಣೆಬರಹ' ಈಗ 'ಚಿರಾಯು'. ಇವುಗಳ ಪೈಕಿ ಮೊದಲ ನಾಲ್ಕು ಚಿತ್ರಗಳು ತೆರೆ ಕಂಡವು. ಗೆದ್ದಿದ್ದು, ಹೆಸರು ತಂದುಕೊಟ್ಟಿದ್ದು 'ಒರಟ ಐ ಲವ್ ಯೂ' ಮಾತ್ರ. ಒಂದು ಚಿತ್ರದ ಹಾಡುಗಳು ಹಿಟ್ ಆಗಬೇಕಾದರೆ ಸಿನಿಮಾದ ಸಕ್ಸಸ್ ಕೂಡ ಮುಖ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಹಾಡು ಎಷ್ಟೇ ಚೆನ್ನಾಗಿದ್ದರೂ ಚಿತ್ರ ಸೋತಾಗ ಆಡಿಯೋ ಕೂಡ ಫ್ಲಾಪ್ ಆಗುವ ಸಂಭವವುಂಟು. ಹಾಗೇನೆ, ಚಿತ್ರ ಫ್ಲಾಪ್ ಆದರೂ ಹಾಡುಗಳು ಸೂಪರ್ ಹಿಟ್ ಆದ ಉದಾಹರಣೆಗಳೂ ಉಂಟು!

* ಒಂದು ಹಾಡನ್ನು ಸಂಯೋಜಿಸ ಬೇಕಾದ ಸಂದರ್ಭದಲ್ಲಿ ಯಾವ್ಯಾವ ರೀತಿಯಲ್ಲಿ ಸಿದ್ಧತೆ ನಡೆಸಿಕೊಳ್ತೀರಿ?

## ಸಂದರ್ಶನ

ಕಥೆಯಲ್ಲಿನ ಸಂದರ್ಭದ ಅನುಸಾರವಾಗಿ ಹಾಡುಗಳು ಹುಟ್ಟುತ್ತವೆ. ಹಾಗೂ ನಿರ್ದೇಶಕರ ಕಲ್ಪನೆಯ ಅನುಸಾರವಾಗಿ ನಾವು ಕಥೆಯೊಳಗಿನ ಸನ್ನಿವೇಶಕ್ಕೆ ತಕ್ಕಂಥ ರೀತಿಯಲ್ಲಿ ಒಂದು ಹಾಡಿನ ಸಂಯೋಜನೆಯಾಗುತ್ತದೆ. ಅದು ಎಂಥದೇ ಸನ್ನಿವೇಶವಿದ್ದರೂ ತಕ್ಕ ನ್ಯಾಯ ಒದಗಿಸುವಲ್ಲಿ ನಾವು ಸಿದ್ಧರಿರಬೇಕಾಗುತ್ತದೆ. ನಮ್ಮ ಬಳಿ ಎಷ್ಟೇ ಸಿದ್ಧವಿರುವ ಟ್ಯೂನ್‌ಗಳಿದ್ದರೂ ಚಿತ್ರಕಥೆಗೆ ಹೊಂದಿಕೊಳ್ಳುವಂತ ಹೊಸ ಟ್ಯೂನ್ ಹಾಕುವುದರಲ್ಲೇ ಒಂಥರಾ ಮಜಾ ಅನ್ನಿಸುತ್ತೆ, ಸಂದರ್ಭ ಯಾವುದೇ ಇರಲಿ, ಆ ಸಂದರ್ಭಕ್ಕೆ ತಕ್ಕುದಾದ ಟ್ಯೂನ್ ಹಾಕುವುದನ್ನು ಕೆಲಸ ಅಂದುಕೊಳ್ಳದೆ ಎಂಜಾಯ್ ಮಾಡಲು ಬಯಸುತ್ತೇನೆ.

* ಟ್ಯೂನ್ ಹಾಕಲು ಇಂಥದೇ ಮೂಡ್ ಅಂತೇನಾದ್ರೂ ಇದೆಯಾ?

ಹಾಡಿನ ಸನ್ನಿವೇಶದ ಮೂಡ್‌ಗೆ ಪೂರಕವಾಗಿ ನಮ್ಮ ಮೂಡ್ ಕೂಡ ಇರಬೇಕಾಗುತ್ತದೆ. ಆ ಹಾಡಿನ ಸನ್ನಿವೇಶದ ಆಳಕ್ಕಿಳಿದು ಆ ಸನ್ನಿವೇಶ ಒಂದು ವೇಳೆ ನಮ್ಮ ಬದುಕಿನಲ್ಲಿಯೇ ಘಟಿಸಿದರೆ ನಮ್ಮೊಳಗೇ ಯಾವ ಬಗೆಯ ಭಾವನೆಗಳು ಒಡಮೂಡಬಹುದು ಎಂದು ಆಲೋಚಿಸಿ ನಂತರ ಅದಕ್ಕನುಗುಣವಾಗಿ ಟ್ಯೂನ್ ಹಾಕಬೇಕಾಗುತ್ತದೆ. ಆಗ ಮಾತ್ರ ಹಾಡು ವಾಸ್ತವಕ್ಕೆ ಹತ್ತಿರವಾಗಿರಲು ಸಾಧ್ಯವಾಗೋದು.

* ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿನ ಹಾಡುಗಳ ಟ್ಯೂನ್‌ಗಳನ್ನೂ ಕದಿಯುವ ಚಾಳಿಯೇ ಹೆಚ್ಚು, ಈ ಕುರಿತು ನಿಮ್ಮ ಅಭಿಪ್ರಾಯವೇನು? ಕದಿಯುವುದು ಅನಿವಾರ್ಯವೇ?

ಕದಿಯುವುದನ್ನು ನಾನು ವಿರೋಧಿಸುತ್ತೇನೆ. ಕೆಲವೊಮ್ಮೆ ಏನಾಗುತ್ತದೆ ಅಂದರೆ ಬೇರೆ ಭಾಷೆಗಳಲ್ಲಿ ಹಿಟ್ ಆಗಿರುವ ಹಾಡುಗಳ ಟ್ಯೂನ್‌ಗಳೇ ಬೇಕು ಅಥವಾ ಅದೇ ರೀತಿಯ ಟ್ಯೂನ್‌ಗಳೇ ಬೇಕು ಅಂತ ನಮ್ಮಲ್ಲಿನ ಕೆಲವು ನಿರ್ದೇಶಕರು, ನಿರ್ಮಾಪಕರು ಪಟ್ಟು ಹಿಡಿಯುವುದುಂಟು. ಅಂತಹ ಸಂದರ್ಭದಲ್ಲಿ ಕೆಲವು ಸಂಗೀತ ನಿರ್ದೇಶಕರು ಅದೇ ಶೈಲಿಯ ಟ್ಯೂನ್ ಹಾಕಲು ಪ್ರಯತ್ನಿಸುತ್ತಾರೆ. ಅಥವಾ ಅನಾಮತ್ತು ಅದೇ ಟ್ಯೂನ್ ಎತ್ತಿಬಿಡುತ್ತಾರೆ. ಇಂತಹ ಒತ್ತಡಗಳ ನಡುವೆ ಸ್ವತಂತ್ರವಾಗಿ ಹಾಕಿದ ಟ್ಯೂನ್‌ಗಳು ಅನಾಥವಾಗುವುದೇ ದುರಂತ. ನಾನಂತೂ ಕದಿಯಲು ಇಷ್ಟ ಪಡಲ್ಲ, ಸ್ವಂತ ಟ್ಯೂನನ್ನೇ ಹಾಕಲು ಬಯಸುತ್ತೇನೆ.




ಸಂದರ್ಶಕ: ಹೃದಯಶಿವ

---

...ಚಿತರಾದದ್ದು ಸಣ್ಣ ಸಾಧನೆಯಲ್ಲ.

...ಬಳಿಕ ಯಡ್ಡಿ ಮರಳಿ ಅಧಿಕಾರ ಕೇಳಿದಾಗ ...ಗ್ಗೇ ಬತ್ತಿಯಿಟ್ಟ ಸದಾನಂದ ಗೌಡರನ್ನು ...ರ ಪಕ್ಷದವರೇ ಇಂದು ನಂಬುವುದಿಲ್ಲ. ...ಒಬ್ಬ ಕ್ಲೀನ್ ಹ್ಯಾಂಡ್ ಎಂದು ಕಂಡಕಂಡಲ್ಲಿ ...ವಿಸಿಕೊಳ್ಳುತ್ತಾ, ತಾನು ಸಿಎಂ ಆಗಿದ್ದೇ ...ಲಿಗರಿಂದ ಎಂದು ಬಹುಸಂಖ್ಯಾತ ಒಕ್ಕಲಿಗರ ...ಲ ಗಿಟ್ಟಿಸಲು ಹೊಂಚಿದ, ತನಗೆ ರಾಜಕೀಯ ...ಿದ ಗುರು ರಾಮಭಟ್ಟರ ಬುಡಕ್ಕೇ ಬತ್ತಿಯಿಟ್ಟ ...ಕರು ಎಂಥ ಸಭ್ಯರೋ ಗೊತ್ತಿಲ್ಲ.



...ಸದಾನಂದ ಗೌಡ ಎಂತಹ ರಾಜಕಾರಣಿ ಎಂದರೆ ...ಖ್ಯಾತ ಆಪರೇಷನ್ ಕಮಲ ಎಂಬ ದರಿದ್ರ ...ಕೀಯವನ್ನು ಇತ್ತೀಚೆಗೆ ತಮ್ಮ ಕ್ಷೇತ್ರದ ಪುತ್ತೂರಿನ ...ಸಭೆಯ ಚುನಾವಣೆಯಲ್ಲೂ ನಡೆಸಿ ವಾಣಿ ಶ್ರೀಧರ್ ...ಂ ಕಾಂಗ್ರೆಸ್ ಅಭ್ಯರ್ಥಿಗೆ ಗಾಳ ಹಾಕಿದ್ದರು.

... ಗಾಳಿ ಬಂದಂತೆ ತೂರುವ ಸಮಯಸಾಧಕತನದ ಕಲೆ ...ದ ಈ ಪಕ್ಕಾ ಆರೆಸ್ಸೆಸ್ ಉತ್ಪನ್ನ ಸ್ವಾಭಿಮಾನಿಯಂತೂ ...ಡಿಷಾ ಅಲ್ಲ, ಈತನ ಹುಳ್ಳನೆಯ ನಗೆಯನ್ನೇ ಹಲವರು ...ನತೆಯೆಂದು ಭಾವಿಸುವುದುಂಟು. ಕರಾವಳಿಗೆ ಬೆಂಕಿ ...ಗಳೆಲ್ಲ ತಣ್ಣಗೆ ಅದರಲ್ಲಿ ಚಳಿಕಾಯಿಸಿಕೊಳ್ಳುವುದರಲ್ಲಿ ...ಪತ್ತಿಗೂ ಸಿಸ್ಸೀಮ.

- ಅವಿನಾಶ್ ಎಂ.ಎಸ್, ನೆಲ್ಲಿಕಾರು

... ಪುಸ್ತಕ ವಿಮರ್ಶೆಯೊಂದಿಗೆ ಮರಳಿದ 'ಚಾರ್ವಾಕ' ...ಸುಂದರ್ ಅವರಿಗೆ ಹಾರ್ದಿಕ ಸುಸ್ವಾಗತ.

- ಬಳ್ಳಾರಿ ಅಧ್ಯಾಪಕರ ಬಳಗ

... "ಎರಡು ಸಂದರ್ಶನಗಳ ಸುತ್ತ..." ಎಂಬ ಗೌರಿ ...ಕೇಶರ 'ಕಂಡಹಾಗೆ' ನಿಜಕ್ಕೂ ತುಂಬಾ ಚೆನ್ನಾಗಿದೆ. ...ತ್ತನು ವಿಶ್ಲೇಷಣೆ.

- ಚಿದಾನಂದ, ಸಿಂಧನೂರು

... ಕೆಂಚಪ್ಪಗೌಡನ ಕುಲಘಾತುಕ ಚಟುವಟಿಕೆಗಳ ಬಗ್ಗೆ, ನಿರಂತರವಾಗಿ ಒಕ್ಕಲಿಗ ಜನಾಂಗವನ್ನು ಎಚ್ಚರಿಸುತ್ತಿರುವ ಪತ್ರಿಕೆಗೆ ಅನಂತ ಧನ್ಯವಾದಗಳು. ಇತ್ತೀಚೆಗೆ ನಡೆದ ಸಂಘದ ಚುನಾವಣೆಯಲ್ಲಿ ಸೋತು ಮಕಾಡೆ ಮಲಗಿದರೂ ಕೆಂಚಪ್ಪಗೌಡನಿಗೆ ಬುದ್ಧಿ ಬಂದಂತಿಲ್ಲ. ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ ಹಿಂಬಾಗಿಲ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವ ಅವನ ಹೀನಕೃತ್ಯದ ಬಗ್ಗೆ ಏನನ್ನಬೇಕೋ ತಿಳಿಯದಾಗಿದೆ.

ಇನ್ನು ದೇವೇಗೌಡರು ಸ್ವಂತ ಕುಟುಂಬದ ರಾಜಕೀಯ ಏಳಿಗೆಗೆ ಪಕ್ಷದಲ್ಲಿದ್ದ ವರ್ಚಸ್ವಿ ನಾಯಕರನ್ನು ಪಕ್ಷ ಬಿಡುವಂತೆ ಮಾಡಿ ಮೂಲ ಜನತಾದಳವನ್ನು ಶಕ್ತಿಹೀನ ಮಾಡಿದರು. ಇಂತಹ ದೇವೇಗೌಡರು ತಮ್ಮ ದೊಡ್ಡ ಮಗ ರೇವಣ್ಣನ ಮೂಲಕ ಆಡಿಸುತ್ತಿರುವ ಆಟ ಸರಿಯಾದುದಲ್ಲ.

ತಾನು ಜೈಲು ಪಾಲಾಗುವುದನ್ನು ತಪ್ಪಿಸಿಕೊಳ್ಳಲು ನವರಂಗಿ ಆಟಕ್ಕಿಳಿದಿರುವ ಕೆಂಚಪ್ಪಗೌಡನಿಗೆ ಧಿಕ್ಕಾರವಿರಲಿ. ಇವರ ಯಾವುದೇ ತಂತ್ರಗಳು ಯಶಸ್ವಿಯಾಗದಿರಲಿ.

- ಬಿ. ಚಂದ್ರೇಗೌಡ, ಬೆಂಗಳೂರು

ಇತ್ತೀಚೆಗೆ ತಮ್ಮ ಪತ್ರಿಕೆಯು ಉತ್ತರ ಕರ್ನಾಟಕದ ಪತ್ರಿಕೆ ಅಂಗಡಿಗಳಲ್ಲಿ ಸಿಗುತ್ತಿಲ್ಲ. ಗದಗದಲ್ಲಿ ಪತ್ರಿಕೆ ಬಂದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಗದಗದ ಎಲ್ಲಾ ಪತ್ರಿಕೆಗಳನ್ನು ಒಬ್ಬರೇ ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದಾರೆ. 30 ವರ್ಷಗಳಿಂದ ಮೇಷ್ಟ್ರು ತಂದ ಪತ್ರಿಕೆ ಓದಿ, ಬದುಕು ರೂಪಿಸಿಕೊಂಡು ಜ್ಞಾನದ ದೀವಿಗೆ ಮಾಡಿಕೊಂಡ ನನಗೆ ತೀರಾ ನಿರಾಶೆಯಾಗುತ್ತಿದೆ. ಪತ್ರಿಕೆಗಳು ಸಿಗುವಂತೆ ಮಾಡಿರಿ.


- ...ೆ. ಹನುಮಂತಪ್ಪ, ಗದಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 99803314?7 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly



## ರವಿಚಂದ್ರನ್-ಪಿ.ವಾಸು ಸಾಥ್ ಸಾಥ್



ರವಿಚಂದ್ರನ್ ಮತ್ತೊಂದು ರೀಮೇಕ್ ಚಿತ್ರದಲ್ಲಿ ನಟಿಸಲಿದ್ದಾರೆ. ಮೂಲ ಚಿತ್ರದ ಹೆಸರು 'ದೃಶ್ಯಂ'. ಕಳೆದ ವರ್ಷಾಂತ್ಯದಲ್ಲಿ ಕೇರಳದಾದ್ಯಂತ ಭರ್ಜರಿಯಾಗಿ ಓಡಿದ ಮೋಹನ್‌ಲಾಲ್ ನಟಿಸಿದ್ದ ಚಿತ್ರವಿದು. ಅಪ್ಪಟ ಕಮರ್ಷಿಯಲ್ ಎಲಿಮೆಂಟ್ಸ್‌ಗಳನ್ನುಳ್ಳ 'ದೃಶ್ಯಂ' ತನ್ನೊಳಗಿನ ಕಲಾತ್ಮಕತೆಗೂ ಹೆಸರಾಗಿ ಪ್ರೇಕ್ಷಕ ಹಾಗೂ ಚಿತ್ರ ವಿಮರ್ಶಕರಿಂದ ಭೇಷ್‌ಗಿರಿ ಪಡೆದಿತ್ತು. ಈ ಚಿತ್ರವನ್ನು ಕನ್ನಡಕ್ಕೆ ರಿಮೇಕ್ ಮಾಡಲು ಏಪ್ರಿಲ್ ತಿಂಗಳಿನಿಂದ ಶೂಟಿಂಗ್ ಶುರು ಮಾಡಲು ನಿರ್ದೇಶಕ ಪಿ.ವಾಸು ಒಪ್ಪಿಕೊಂಡಿದ್ದಾರೆ. ಅಂದಹಾಗೆ, ಈ 'ದೃಶ್ಯಂ' ಚಿತ್ರವನ್ನು ನೋಡುವಂತೆ ರವಿಚಂದ್ರನ್ ಅವರನ್ನು ಒತ್ತಾಯಿಸಿದ್ದು ಜಗ್ಗೇಶ್, ಸುದೀಪ್ ಮತ್ತು ರಾಕ್‌ಲೈನ್ ವೆಂಕಟೇಶ್. ಚಿತ್ರ ನೋಡಿದ ರವಿಚಂದ್ರನ್ 'ದೃಶ್ಯಂ' ಚಿತ್ರವನ್ನು ಬಹಳವಾಗಿ ಮೆಚ್ಚಿಕೊಂಡು ಈಗ ನಟಿಸಲು ಉತ್ಸಾಹ ತೋರಿಸುತ್ತಿದ್ದಾರೆ. ಈ ಚಿತ್ರಕ್ಕಾಗಿ ಸೂಕ್ತ ಕ್ಯಾಮೆರಾಮ್ಯಾನ್, ನಾಯಕಿ ಹಾಗೂ ಉಳಿದ ನಟವರ್ಗದ ತಲಾಶೆಯಲ್ಲಿರುವ ನಿರ್ದೇಶಕ ಪಿ.ವಾಸು ಎಲ್ಲವೂ ಒಂದು ವಾರದೊಳಗೆ ಫೈನಲೈಸ್ ಆಗುವುದಾಗಿ ಹೇಳುತ್ತಿದ್ದಾರೆ. ಇನ್ನು ಈ ಚಿತ್ರಕ್ಕೆ ಹಣಕಾಸು ಹೂಡುತ್ತಿರುವುದು 'ಇ-4 ಎಂಟರ್‌ಟೈನ್‌ಮೆಂಟ್' ಎಂಬ ಸಂಸ್ಥೆ.

## ನಂಜುಂಡರ ಮೆಲೋಡಿ



ಕೆ.ವಿ.ರಾಜು ಅವರ ಗರಡಿಯಲ್ಲಿ ಪಳಗಿದ್ದ ಕೆ.ನಂಜುಂಡ ಕನ್ನಡದ ಪ್ರಮುಖ ಸಂಭಾಷಣಾಕಾರರಲ್ಲೊಬ್ಬರು ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ. ಇಂಥ ನಂಜುಂಡ ಅವರು ಈಗ ಬರೋಬ್ಬರಿ ಹದಿನಾಲ್ಕು ವರ್ಷಗಳ ನಂತರ ರಾಜೇಶ್ ಕೃಷ್ಣ ನಾಯಕತ್ವದ 'ಮೆಲೋಡಿ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಇತ್ತೀಚೆಗಷ್ಟೇ ಮುಹೂರ್ತ ಆಚರಿಸಿಕೊಂಡ 'ಮೆಲೋಡಿ'ಗೆ ಮೆಲೋಡಿಯಸ್ ಹಾಡುಗಳನ್ನು ಹೊಸೆಯುವ ಕೆಲಸ ಎಲ್.ಎನ್.ಶಾಸ್ತ್ರಿಯವರದ್ದಾಗಿದೆ. ಅಕ್ಷತಾ ಮಾರ್ಲ, ಕಾರ್ತಿಕ ಮೆನನ್ ಮತ್ತು ಚೇತನ್ ಚಿತ್ರದಲ್ಲಿ ನಟಿಸುತ್ತಿರುವ ಪ್ರಮುಖ ಕಲಾವಿದರು. 'ಮೆಲೋಡಿ'ಗೆ ಫೇಸ್‌ಬುಕ್ ಎಂಬ ಸಾಮಾಜಿಕ ತಾಣದ ಚಟುವಟಿಕೆಗಳೇ ಸ್ಫೂರ್ತಿಯಾಗಿದ್ದು ಇಡೀ ಚಿತ್ರದಲ್ಲಿ ಪ್ರೀತಿ, ಭಾವುಕತೆ, ಕಾಮಿಡಿ ಎಲ್ಲವೂ ಇರುತ್ತದೆ ಎಂದು ನಂಜುಂಡ ಅವರು ಹೇಳಿದ್ದಾರೆ. ಇನ್ನೊಂದು ಮಾತೆಂದರೆ, ಅವರ ಇಷ್ಟು ಕಾಲದ ಗ್ಯಾಪಿಗೆ ಕಾರಣ ಕರೆಕ್ಟಾಗಿರೋ ಪ್ರೊಡ್ಯೂಸರ್ ಸಿಗದೇ ಹೋಗಿದ್ದು.

## ಸುದೀಪ್ ಇಂಜುರಿ



'ಮಾಣಿಕ್ಯ' ಚಿತ್ರದಲ್ಲಿನ ನಾಯಕನ ಇಂಟ್ರೊಡಕ್ಷನ್ ದೃಶ್ಯಕ್ಕಾಗಿ ಒಟ್ಟು ಮೂವತ್ತು ಕ್ಯಾಮೆರಾಗಳನ್ನು ಬಳಸಿಕೊಂಡು ಬೆಂಗಳೂರಿನ ಅಬ್ಬಯ್ಯ ನಾಯ್ಡು ಸ್ಟುಡಿಯೋದಲ್ಲಿ ಚಿತ್ರೀಕರಣದಲ್ಲಿ ತೊಡಗಿದ್ದಾಗ ಆಯತಪ್ಪಿ ಬೈಕಿನಿಂದ ಕೆಳಗೆ ಬಿದ್ದ ಸುದೀಪ್ ಕೈಗೆ ಪೆಟ್ಟು ಮಾಡಿಕೊಂಡಿದ್ದಾರೆ. ಗಾಬರಿಯಾಗುವಂಥ ಯಾವುದೇ ಅಪಾಯಗಳಿಲ್ಲದೆ ಪಾರಾಗಿರುವ ಸುದೀಪ್ ಶೂಟಿಂಗ್ ಸ್ಪಾಟ್‌ನಿಂದ ಅರ್ಧರಾತ್ರಿಯಲ್ಲೇ ಮನೆಗೆ ಹೊರಟುಬಿಟ್ಟಿದ್ದಾರೆ. ಈಗ ರೆಸ್ಟ್ ಪಡೆಯುತ್ತಿರುವ ಸುದೀಪ್ ಆದಷ್ಟು ಬೇಗ ಹುಷಾರಾಗಿ ಚಿತ್ರೀಕರಣದಲ್ಲಿ ಪಾಲ್ಗೊಳ್ಳುವಂತಾಗಲಿ ಎಂಬುದು 'ಮಾಣಿಕ್ಯ' ಚಿತ್ರತಂಡದ ಆಶಯ.

## 'ಬ್ರಹ್ಮ'ನಿಗೆ ಕ್ಲಿಯರ್

ಸಾಕಷ್ಟು ಸುದ್ದಿ ಮಾಡಿರುವ ಉಪೇಂದ್ರ ಅಭಿನಯದ 'ಬ್ರಹ್ಮ' ಚಿತ್ರಕ್ಕೆ ಒಂದು ತೊಡಕು ಎದುರಾಗಿತ್ತು. ಆ ತೊಡಕಿಗೆ ಕಾರಣರಾಗಿದ್ದವರ ಹೆಸರು ಮಾದೇಶ್ ಎಂಬುವವರು. ಈ ಮಾದೇಶ್ ಒಂದು ಕಾಲದಲ್ಲಿ ಫೈನಾನ್ಶಿಯರ್ ಆಗಿದ್ದು, 1996ರಲ್ಲಿ ಸೆಟ್ಟೇರಿ ಆನಂತರ ನಿಂತುಹೋದ ಚಿತ್ರವೊಂದಕ್ಕೆ ಫೈನಾನ್ಸ್ ಹೂಡಿದ್ದರು. ಆ ಸೆಟ್ಟೇರಿ, ನಿಂತುಹೋದ ಚಿತ್ರದ ಹೆಸರು ಕೂಡ 'ಬ್ರಹ್ಮ' ಅಂತ. ಅದರಲ್ಲಿ ಸುದೀಪ್ ಚೊಚ್ಚಲ ಬಾರಿಗೆ ಹೀರೋ ಆಗಬೇಕಿತ್ತು. ಜೊತೆಗೆ ಅಂಬರೀಶ್ ಹಾಗೂ ಪ್ರಭಾಕರ್ ಕೂಡ ಪ್ರಮುಖ ಪಾತ್ರಗಳಲ್ಲಿ ನಟಿಸಬೇಕಾಗಿತ್ತು. ಓಂ ಪ್ರಕಾಶ್‌ರಾವ್ ಅದನ್ನು ನಿರ್ದೇಶಿಸಲು ಒಪ್ಪಿಕೊಂಡಿದ್ದರು. ಈಗ ಹಳೆಯ ಗಾಯ ಹುಣ್ಣು ಕೆರೆದುಕೊಂಡು ತಗಾದೆ ತೆಗೆದಿರುವ ಮಾದೇಶ್ ಉಪೇಂದ್ರ ಅಭಿನಯದ 'ಬ್ರಹ್ಮ' ಚಿತ್ರವೂ ಬಿಡುಗಡೆಯಾಗದಂತೆ ತಡೆಯಲು ಸಿವಿಲ್ ಕೋರ್ಟಿಗೆ ಹೋಗಿರುವುದಾಗಿ ಕೆಲವು ಚಾನಲ್‌ಗಳ ಮೈಕುಗಳ ಮುಂದೆ ಹೇಳಿಕೊಂಡಿದ್ದರು. 'ಬ್ರಹ್ಮ' ಶೀರ್ಷಿಕೆಯಡಿ ತಮ್ಮ ಚಿತ್ರ ಮೊದಲು ಆರಂಭವಾಗಿದ್ದು, ಕಾರಣಾಂತರಗಳಿಂದ ಚಿತ್ರ ನಿಂತುಹೋಗಿದ್ದು, ಈಗ ಅದೇ ಹೆಸರಿನ ಮತ್ತೊಂದು ಚಿತ್ರ ಬಿಡುಗಡೆಯಾಗುತ್ತಿರುವುದು ಸರಿಯಲ್ಲವೆಂದು ಪ್ರಶ್ನಿಸಿ ಸಿವಿಲ್ ಕೋರ್ಟಿಗೆ ಹೋಗಿದ್ದರು. ಆದಾಗ್ಯೂ ದಾವೆಯನ್ನು ಹಿಂಪಡೆದು ಈಗ ಎಲ್ಲವೂ ಸುಖಾಂತ್ಯವಾಗಿ ಬಿಡುಗಡೆಗೊಂಡಿದೆ.

## ವಿದ್ಯಾ ಬಾಲನ್ ಮಮ್ಮಿಯಾಗ್ತಿದಾಳಾ?



ಇತ್ತೀಚೆಗಷ್ಟೇ 'ಪದ್ಮಶ್ರೀ' ಪ್ರಶಸ್ತಿ ಗಳಿಸಿದ ಹಿಂದಿ ನಟಿ ವಿದ್ಯಾ ಬಾಲನ್ ಒಂದು ಮೂಲದ ಪ್ರಕಾರ ಈಗ ಗರ್ಭಿಣಿ. ಇದೇನಪ್ಪಾ ಹೀಗಂತೀರಿ ಅನ್ನುವವರ ಉದ್ಗಾರಕ್ಕೆ ಉತ್ತರವಾಗಿ ಆಕೆ ಇತ್ತೀಚಿನ ವಾರಗಳಲ್ಲಿ ಮುಂಬೈನ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೊಂದಕ್ಕೆ ಭೇಟಿ ನೀಡಿದ್ದು, ಆ ಭೇಟಿಯ ಹಿಂದಿನ ರಹಸ್ಯವನ್ನು ಆಸ್ಪತ್ರೆಯ ಯಾವೊಬ್ಬ ಡಾಕ್ಟರ್ ಆಗಲೀ, ನರ್ಸ್ ಆಗಲೀ, ಸಿಬ್ಬಂದಿಯಾಗಲೀ ಬಿಟ್ಟುಕೊಡುತ್ತಿಲ್ಲ. ಅಂದಹಾಗೆ, 36 ವರ್ಷದ ಈ ನಟಿ ಕಳೆದ 2012ರಲ್ಲಷ್ಟೇ ಯು.ಟಿ.ವಿ. ಹೆಡ್ ಸಿದ್ಧಾರ್ಥ್ ರಾಯ್ ಕಪೂರ್ ಎಂಬ ವ್ಯಕ್ತಿಯನ್ನು ಮದುವೆಯಾಗಿದ್ದರು. ಮದುವೆ ನಂತರ ವರ್ಷಕ್ಕೆ ಒಂದೇ ಸಿನಿಮಾ ಎನ್ನುವ ಪಾಲಿಸಿಯನ್ನು ಪಾಲಿಸುತ್ತಾ ಬಂದ ವಿದ್ಯಾ ಬಾಲನ್ ಈಗ ತಾಯ್ತನದ ಹಂಬಲದಲ್ಲಿದ್ದಾರೆಂಬ ಗುಸುಗುಸು ಮುಂಬೈ ಮೂಲೆಗಳಿಂದ ಕೇಳಿಬರುತ್ತಿದೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com